UNIVERSAL
LIBRARY
OU_200475
UNIVERSAL
LIBRARY

ಸತೀಹಿತೈಷಿಣೀ ಗ್ರಂಥಮಾಲಾ ಸಂಖ್ಯೆ 2.

# ಸಭಾ.

ನಂಜನಗೂಡು

"ಸತೀಹಿತೈಷಿಣೀ" ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟುದು.

ದ್ವಿತೀಯಮುದ್ರಣ ೧ ... ಪ್ರತಿಗಳು.

(ಇದರ ಸರ್ವಸ್ವಾತಂತ್ರ್ಯವೂ ಪ್ರಕಾಶಕರದಾಗಿರುವುದು.)

KARNATAK BOOK-DEPOT
Pro: B G CHIMALGI
GOWLIGUDA HYDERAB

[ಕ್ರಯ ೦-೧೦-೦]

ಶ್ರೀ ಶಂಕರ ಜನಾ...

PUBLISHED

BY

**SHRIMATI THIRUMALAMBA**

AT THE

SATHI-HITHAISHINI MATRU MANDIRAM,

**NANJANGUD.**

---

1920

---

Printed at
the Shri Krishna P. Press, Hubli
by B. N. Mutalik Desai.

॥ ಶ್ರೀ ಲಕ್ಷ್ಮೀನೃಸಿಂಹ ಪ್ರಸನ್ನ. ॥

“ ಶ್ರೀಮದ್ರಹಸ್ಯತ್ರಯ ಸಾರಪಾಠ ।
ಪ್ರಾರಂಭಕಾಲೇ ತವಸರ್ವಸಿದ್ಧಿಃ ॥
ಸ್ಯಾದಿತ್ಯುಪಶ್ರುತ್ಯ ಘಿದಾಯಕಂ ಮೇ ।
ಲಕ್ಷ್ಮೀನೃಸಿಂಹಂ ಶರಣಂ ಪ್ರಪದ್ಯೇ ॥ ”

“ ನಕಾಮಯೇ ಭರ್ತೃವಿನಾಕೃತಾಸುಖಂ
ನಕಾಮಯೇ ಭರ್ತೃ ವಿನಾಕೃತಾಶ್ರಯಂ ।
ನಕಾಮಯೇ ಭರ್ತೃ ವಿನಾಕೃತಾದಿವಂ ।
ನ ಭರ್ತೃ ಹೀನಾ ವ್ಯವಸಾಮಿ ಜೀವಿತಂ ॥ ”

“ ಶ್ರಮಃ ಕುತೋ ಭರ್ತೃ ಸಮೀಪತೋಮೇ ।
ಯತೋಽಪಿ ಭರ್ತಾ ಮಮ ಸಾ ಗತಿರ್ಧ್ರುವಂ ।
ಯತಃ ಪತಿಂ ನೇಷ್ಯತಿ ತತ್ರಮೇ ಗತಿಃ ।
ಸುರೇಶ . . . . . . . . . ”

॥ ಶ್ರೀಃ ॥

“ ನಿಂದಂತು ನೀತಿ ನಿಪುಣಾಯದಿ ವಾ ಸ್ತುವನ್ತು ।
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯಾತ್ಪಥಃ ಪ್ರವಿಚಲನ್ತಿ ಪದಂ ನ ಧೀರಾಃ ॥ ”

“ ಉದಯತಿ ಯದಿಭಾನುಃ ಪಶ್ಚಿಮೆ ದಿಗ್ವಿಭಾಗೆ ।
ಪ್ರಚಲತಿ ಯದಿಮೇರುಃ ಶೀತತಾಂ ಯಾತಿವಹ್ನಿಃ ॥
ವಿಕಸತಿ ಯದಿಪದ್ಮಂ ಪರ್ವತಾಗ್ರೇ ಶಿಲಾಯಾಂ ।
ನ ಭವತಿ ಪುನರುಕ್ತಂ ಭಾಷಿತಂ ಸಜ್ಜನಾನಾಂ ॥ ”

ಎಂಬೀ ಸತ್ಪುರುಷಪದ್ಧತಿಯ ದಿವ್ಯಸೂಕ್ತಿಗಳನ್ನು ಪದೇಶಿಸಿ ಅಕಾಲದಲ್ಲಿ
ದೇಹವನ್ನು ಳಿದರೂ ಅಂತರ್ಗತನಾಗಿದ್ದು ಅಹೋರಾತ್ರಿಯೂ
ಅವಿಚ್ಛಿನ್ನವಾಗಿ ಆತ್ಮದೊಡನೆ ಸಾಕ್ಷಾತ್ಕರಿಸಿ
ಸಜ್ಜನರ ಮಾರ್ಗವನ್ನು ಅನುಸರಿಸು
ವಂತೆ ಪ್ರೇರಿಸುತ್ತಿರುವ

**ಸಾಕಾರ ದೈವನಾದ ಸ್ವಾಮಿಯ**

ಚರಣಾರವಿಂದದಲ್ಲಿ

**ಈ ಗ್ರಂಥವನ್ನು**

ಸಮರ್ಪಿಸಿರುವೆನು.

# ಸವಿನಯ ನಿವೇದನ.

ಸತೀಹಿತೈಷಿಣೀ ಗ್ರಂಥಮಾಲೆಯ ಪ್ರಥಮ ಪುಸ್ತಕವಾದ '**ಸುಶೀಲೆ**'ಯು ಪ್ರಕಟವಾದಬಳಿಕ ಅದು ಸ್ವಲ್ಪಮಟ್ಟಿಗಾದರೂ ಲೋಕಾದರಕ್ಕೆ ಪಾತ್ರವಾಗಿರುವುದೆಂದು ಕಂಡುಬಂದುದರಿಂದ ಮಾಲೆಯ ದ್ವಿತೀಯ ಪುಸ್ತಕವನ್ನು ರಚಿಸಿ ಅದನ್ನು ಲೋಕಸೇವೆಗೆ ಅರ್ಪಿಸಬೇಕೆಂಬ ಉತ್ಸಾಹವು ನಮ್ಮಲ್ಲಿ ಸಹಜವಾಗಿಯೇ ಹುಟ್ಟಿತು. ಆದರೆ, ಯಾವುದೇ ಒಂದು ಕಾರ್ಯದ ವಿಷಯಕವಾಗಿ ಕೇವಲ ಉತ್ಸಾಹವನ್ನು ತಳೆಯುವುದು ಸುಲಭವಾಗಿರುವಷ್ಟೇ ಆ ಕಾರ್ಯವನ್ನು ಸರ್ವಸಮ್ಮತವಾಗುವಂತೆ, ಯಥೋಚಿತವಾಗಿ ಮಾಡುವುದು ಕಠಿನವಾದ ಮಾತೆಂಬ ಅನುಭವವು ನಮ್ಮ ನಿದರ್ಶನಕ್ಕೆ ಬಂದಿತು. ಪುಸ್ತಕವನ್ನು ಬರೆಯುವ ಉತ್ಸಾಹವು ನಮ್ಮಲ್ಲಿ ಕ್ಷಣಕ್ಷಣಕ್ಕೂ ಬೆಳೆಯುತ್ತಿದ್ದರೂ, ಎಂತಹ ವಿಚಾರಗಳ ಪೋಷಕವಾದ, ಅಥವಾ ಆವ ಅಭಿಪ್ರಾಯಗಳನ್ನು ಪ್ರತಿಪಾದಿಸುವ ಪುಸ್ತಕವನ್ನು ಬರೆಯಬೇಕೆಂಬ ಚಿಂತನೆಯಲ್ಲಿಯೇ ನಾವು ಸ್ವಲ್ಪಕಾಲವನ್ನು ಕಳೆಯಬೇಕಾಯಿತು. ಕರ್ಣಮಧುರವಾಗಿರುವಂತೆ ಲಲಿತವಾದ ಅಕ್ಷರಸಂಯೋಜನೆಯೂ, ಚಮತ್ಕೃತಿಯುಕ್ತವಾದ ವಾಕ್ಯಗಳ ರಚನೆಯೂ, ಮನೋರಂಜಕವಾದ ಕಥಾಸಂವಿಧಾನಕವೂ ಇದ್ದರೆ ಆಯಿತು. ಪುಸ್ತಕವು ಸರ್ವತೋಪರಿ ವಾಚನೀಯವಾಯಿತೆಂದು ಕೆಲವರು ಅಭಿಪ್ರಾಯಪಡಬಹುದಾದರೂ ಅದು ನಮ್ಮ ಮತವಾಗಿಲ್ಲ. ಮಾನವರ ಮನಸ್ಸು ಅಂತಃಕರಣಗಳಲ್ಲಿ, ಬೀಜರೂಪದಿಂದ ವಾಸಮಾಡಿಕೊಂಡಿರುವ ಲೋಕಾನಂದಕರವಾದ ಅನೇಕ ಬಗೆಯ ಸದ್ಭಾವನೆಗಳೂ ಸದ್ಗುಣಗಳೂ ಸ್ವಾರ್ಥ ದುರಹಂಕಾರಾದಿಗಳಿಂದ ಆಚ್ಛಾದಿತವಾಗಿ ಸಂಸ್ಕೃತಿಯನ್ನು ಹೊಂದದೆ ಅಜಾಗರೂಕಸ್ಥಿತಿಯಲ್ಲಿಯೇ ಉಳಿದುಕೊಂಡಿರುವುವು. ಪ್ರಗತಿಗೆ ವಿರೋಧಕರವಾದ ಇಂತಹ ಸ್ವಾರ್ಥ ದುರಹಂಕಾರಾದಿ ದುರ್ಗುಣಗಳನ್ನು ಅಳಿಸಿ, ಸ್ವಭಾವಸಿದ್ಧವಾದ ಸದ್ಗುಣಗಳು ಅಂಕುರಿಸಿ ಪರಿಮಿತಿಯಿಲ್ಲದಂತೆ ಅವುಗಳನ್ನು ವಿಸ್ತಾರಗೊಳಿಸಲು ಸಮರ್ಥವಾದ ವಿಚಾ

ರಗಳಿಂದ ಪರಿಪ್ಲುತವಾದ ಪುಸ್ತಕವೇ ನಿಜವಾದ ಪುಸ್ತಕವೆಂಬುದೇ ನಮ್ಮ ಮತವು. ಇಂತಹ ಉತ್ತಮತರದ ಪುಸ್ತಕಗಳನ್ನು ಬರೆಯುವ ಭಾಗ್ಯಶಾಲಿಗಳು, ರಾಷ್ಟ್ರದ ಅಭ್ಯುದಯ ಕಾಲವು ಬಂದೊದಗಿದಾಗ ಮಾತ್ರ ಅವತರಿಸುವರೆಂದು ಇತಿಹಾಸವು ಬೋಧಿಸುತ್ತಿದ್ದರೂ ಪುಸ್ತಕದ ನಿಜವಾದ ಉದ್ದೇಶವೇನೆಂಬ ತತ್ವವನ್ನು ಮನಸ್ಸಿನಲ್ಲಿ ದೃಢವಾಗಿ ನಿಲಿಸಿಕೊಂಡು, ಸ್ವಶಕ್ತ್ಯನುಸಾರವಾಗಿ ಶುದ್ಧಭಾವದಿಂದ ಪುಸ್ತಕವನ್ನು ಬರೆಯುವ ಅಧಿಕಾರವು, ತಮ್ಮ ವಿಚಾರಗಳನ್ನು ಪ್ರಕಟಿಸಲು ಸಮರ್ಥರಾದ, ಸಾಕ್ಷರರಿಗೆಲ್ಲ ನಿಃಸಂದೇಹವಾಗಿ ಇರುವುದು. ಏಕೆಂದರೆ, ಗಗನದಲ್ಲಿ ಆತಂಕವಿಲ್ಲದೆ, ಸ್ವೇಚ್ಛೆಯಾಗಿ ಸಂಚರಿಸುವ ಪಕ್ಷಿರಾಜನಾದ ಗರುಡನನ್ನು ನೋಡಿ, ಕೇವಲ ಅಲ್ಪವಾದ ತನ್ನ ರೆಕ್ಕೆಯ ಶಕ್ತಿಯೆಷ್ಟೆಂದು ನಾಚಿಕೆಪಟ್ಟು ಗುಬ್ಬಿಯು ಹಾರುವುದನ್ನೇನೂ ಬಿಟ್ಟುಬಿಡುವುದಿಲ್ಲ. ಈ ವಿಚಾರವನ್ನೇ ಮಾಡಿ ನಾವು ಕೂಡ ಮೇಲೆಹೇಳಲ್ಪಟ್ಟ ಧ್ಯೇಯವನ್ನೇ ಮುಂದಿರಿಸಿಕೊಂಡು ಶಕ್ತ್ಯನುಸಾರವಾಗಿ ಲೋಕಹಿತಕರವಾದ ಸೇವಾಕಾರ್ಯದಲ್ಲಿ ಪ್ರಯತ್ನಿಸಲು ನಿಶ್ಚಯಿಸಿ ಮುಂದರಿಸಿದೆವು.

ಈ ಉದ್ದೇಶದಿಂದ ಮುಂದೆ ಬಂದವರಾದ ನಾವು ನೂತನವಾದ ಅವ ಹೊಸವಿಚಾರಗಳನ್ನು ಪ್ರಕಟಿಸಿ ಹೊಸಶಿಕ್ಷಣವನ್ನು ಕೊಡಬಹುದೆಂದು ಹಲವರು ಆಕ್ಷೇಪಿಸಬಹುದು. ಈ ಆಕ್ಷೇಪಕ್ಕೆ ಸಮಾಧಾನಕಾರಕವಾದ ಉತ್ತರವನ್ನು ಕೊಡುವುದು ಕಠಿನವಾದ ಮಾತಲ್ಲ. ಈವರೆಗೆ ಸರ್ವಸಾಧಾರಣವಾಗಿ ಸ್ತ್ರೀಯರ ಸ್ವಭಾವವು ಯಾವಬಗೆಯದಾಗಿರುವುದು, ಅವರಲ್ಲಿ ಸ್ವಭಾವಜನ್ಯವಾಗಿ ನೆಲೆಗೊಂಡಿರುವ ಸುಗುಣ ದುರ್ಗುಣಗಳಾವುವು, ಅವರಿಗೆ ಅವಬಗೆಯ ಶಿಕ್ಷಣವನ್ನು ಕೊಟ್ಟರೆ ಅವರಲ್ಲಿರುವ ಜನ್ಮಸಿದ್ಧವಾದ ಸುಗುಣಗಳು ವಿಕಾಸಹೊಂದಿ ದುರ್ಗುಣಗಳು ಅಳಿದುಹೋಗುವುವು, ಆಯುಷ್ಯದಲ್ಲಿ ಅವರ ಧ್ಯೇಯವು ಅವಬಗೆಯದಾಗಿರಬೇಕು, ಈಗಿನ ಅವರ ಸಾಮಾಜಿಕ ಸ್ಥಿತಿಯಲ್ಲಿ ಆವಾವ ಸುಧಾರಣೆಗಳಾಗುವುದು ಇಷ್ಟವಾದುದು, ಇವೇ ಮೊದಲಾದ ಸ್ತ್ರೀಯರ ಹಿತಾಹಿತದ ಅನೇಕ ಪ್ರಶ್ನೆಗಳ ವಿಚಾರವನ್ನು ಪುರುಷರೇ ಮಾಡುತ್ತಬಂದಿದ್ದು ಬೇರೆಬೇರೆಯವರು ತಮತಮಗೆ ಸರಿತೋರಿದಂತೆ ಭಿನ್ನವಾದ ತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸುತ್ತಲಿರುವರು.

ಸನಾತನ ಧರ್ಮಾಭಿಮಾನಿಗಳೆಂದು ಹೇಳಿಕೊಳ್ಳುವ ಹಲವರು, "ನಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಮನುವಿನ ವಾಕ್ಯವನ್ನು ಮುಂದೆಮಾಡಿ ಸ್ತ್ರೀಯರನ್ನು ಆಮರಣಾಂತ ಪರವಶತೆಯ ಪಂಕದಲ್ಲಿ ನೂಕಲು ಯತ್ನಿಸುತ್ತಿದ್ದರೆ, ವ್ಯಕ್ತಿಸ್ವಾತಂತ್ರ್ಯದ ಪುರಸ್ಕರ್ತೃಗಳಾದ ಹಲವರು ಸ್ತ್ರೀಯರಿಗೆ ಸ್ವಾತಂತ್ರ್ಯ ಸಾಮ್ರಾಜ್ಯವನ್ನು ಸಂಪಾದಿಸಿಕೊಡಲು ಉದ್ಯುಕ್ತರಾಗಿರುವರು. "ಪುರುಷರಂತೆ ಸ್ತ್ರೀಯರಿಗೆ ಶಿಕ್ಷಣವನ್ನು ಕೊಟ್ಟರೆ ಅವರ ಆಚಾರವಿಚಾರಗಳು ಭ್ರಷ್ಟವಾಗಿ ಅವರು ಸ್ವೈರವೃತ್ತಿಯವರಾಗುವರೆಂದು" ಹಲವರು ಪ್ರತಿಪಾದಿಸುತ್ತಿದ್ದರೆ, "ಸ್ತ್ರೀಯರ ಶಿಕ್ಷಣದ ಅಭಾವಕ್ಕಾಗಿಯೇ ಕುಟುಂಬಸುಖವು ನಷ್ಟವಾಗಿರುವುದಲ್ಲದೆ ಅರ್ಧಸಂಖ್ಯಾಕರಾದ ಸ್ತ್ರೀಯರ ಅಜ್ಞಾನಮೂಲಕವಾಗಿ ರಾಷ್ಟ್ರದ ಪ್ರಗತಿಯ ಹೆಜ್ಜೆ ಮುಂದರಿಸದಂತಾಗಿರುವುದೆಂದು" ಹಲವರು ಕನಿಕರಪಡುತ್ತಲಿರುವರು.

ಸಾರಾಂಶವೇನಂದರೆ, ಸ್ತ್ರೀಯರ ಉನ್ನತಿ ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕರಲ್ಲಿ ಈ ರೀತಿಯಾಗಿ ಭಿನ್ನಮತವು ಕಂಡುಬರುತ್ತಲಿರುವುದು. ಈ ಬಗೆಯ ಭಿನ್ನಮತವು ಪುರುಷವರ್ಗದವರಲ್ಲಿ ಕಂಡುಬರುವುದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ ಸ್ವಭಾವಗಳ ವಿಷಯಕವಾಗಿಯೂ ಸಾವಿರಾರು ವರ್ಷಗಳಿಂದ ಆನುವಂಶಿಕವಾಗಿ ಅವರ ಮನಸ್ಸಿನಮೇಲೆ ಉಂಟಾಗಿರುವ ಸಂಸ್ಕಾರ ವಿಷಯಕವಾಗಿಯೂ ಪುರುಷರಿಗಿರುವ ಅಪೂರ್ಣವಾದ ಪರಿಚಯವೇ ಕಾರಣವಾಗಿರುವುದೆಂಬುದು ನಮ್ಮ ಮತವಾಗಿರುವುದು.

ಸ್ವಲ್ಪದರಲ್ಲಿ ಹೇಳುವುದೆಂದರೆ, ಆರ್ಯಸ್ತ್ರೀಯರ ಸ್ವಾಭಾವಿಕವಾದ ಧ್ಯೇಯವು ಆವುದಾಗಿರಬೇಕು, ಅವರ ಬೌದ್ಧಿಕ–ಮಾನಸಿಕ–ಆತ್ಮಿಕ ಉನ್ನತಿಯಾಗಬೇಕಾದರೆ ಅವರಿಗೆ ಆವಬಗೆಯ ಶಿಕ್ಷಣದ ಅವಶ್ಯಕತೆಯಿರುವುದು, ಈಗಿನ ಸಮಾಜಸ್ಥಿತಿಯಲ್ಲಿ ಅವರ ಪ್ರಗತಿಗೆ ವಿರೋಧಕರವಾಗಿರುವ ಆಚಾರವಿಚಾರಗಳಾವುವು ಮತ್ತು ಅವುಗಳನ್ನು ಆವ ಬಗೆಯಾಗಿ ಸುಧಾರಿಸಬೇಕು. ಈ ಮುಂತಾದ ವಿಷಯಗಳನ್ನು ಚರ್ಚಿಸುವ ಅಧಿಕಾರವು ವಿಚಾರಪರರಾದ ಸ್ತ್ರೀಯರಿಗೆ ವಿಶೇಷವಾಗಿರುವುದು. ಅಂಥ ವಿಚಾರಶಕ್ತಿಯು ನಮ್ಮಲ್ಲಿಲ್ಲದಿದ್ದರೂ ಪ್ರಚಲಿತ ಸ್ಥಿತಿಯಲ್ಲಿರುವ ನಮ್ಮ ಸಮಾಜದ ಸುಸ್ಥಿತಿ ದುಸ್ಥಿತಿಗಳ

ವಿಷಯಕವಾಗಿ ನಾವು ನಮ್ಮ ಶಕ್ತ್ಯನುಸಾರವಾಗಿ ವಿಚಾರಮಾಡಿದಮಟ್ಟಿಗೆ ನಮ್ಮ ವಿಚಾರಗಳನ್ನು ಜನರಮುಂದೆ ಇಡುವುದು ನಮ್ಮ ಕರ್ತವ್ಯವಾಗಿರುವುದೆಂದು ತಿಳಿದು "ಸತೀಹಿತೈಷಿಣೀ ಗ್ರಂಥಮಾಲೆ"ಯನ್ನು ಪ್ರಕಟಿಸಲು ಉದ್ಯುಕ್ತರಾಗಿರುವೆವು. ನಿಬಂಧರೂಪದಿಂದ ಬರೆದಿರುವ ಲೇಖನಗಳು ಸಾಮಾನ್ಯವಾಚಕರಿಗೆ ನೀರಸವಾಗಿರುವುದರಿಂದ ಅವುಗಳಿಂದ ಲೇಖನಗಳ ಉದ್ದಿಷ್ಟ ಹೇತುವು ಸಫಲವಾಗುವುದಿಲ್ಲವೆಂದು ತಿಳಿದು, ನಮ್ಮ ವಿಚಾರಗಳನ್ನು ಕಥಾರೂಪವಾಗಿ ಪ್ರತಿಪಾದಿಸುವ ಸಂಕಲ್ಪವನ್ನು ದೈವಬಲದಿಂದ ತಳೆದಿದ್ದು ಆ ಸಂಕಲ್ಪದ ಫಲವೇ ಈ "ನಭಾ" ಕೃತಿಯಾಗಿರುವುದು. ಈ ಫಲವು ಸಿಹಿಯಾದುದೋ ಕಹಿಯಾದುದೋ ನಮ್ಮ ಸೋದರಿಯರ ಮಾನಸಿಕ ಉನ್ನತಿಗೆ ಪಥ್ಯಕರವಾದುದೋ ಅಪಥ್ಯಕರವಾದುದೋ ಎಂಬುದನ್ನು ನಿರ್ಣಯಿಸುವ ಭಾರವನ್ನು ನಾವು ಜನತಾತ್ಮನಿಗೆ ಒಪ್ಪಿಸಿ, ವಿರಮಿಸುವೆವು.

ಇತಿ, ದೇಶೀಯ ಸೋದರಿ—

**ಹಿತೈಷಿಣಿ.**

॥ ಶ್ರೀಃ ॥

॥ ಲಕ್ಷ್ಮೀನೃಸಿಂಹ ಪ್ರಸನ್ನ ॥

# ಸಭಾ.

**ಸರ್ವಸ್ಯ ದೈವಸ್ಯ ಪತಿಃ ಪರಸ್ತಾತ್ । ಪರೋಽವತಂಸಃ ಪತಿರೇವ ನಾರ್ಯಾಃ ॥ ಸರ್ವತ್ರ ಪೂಜ್ಯಃ ಪತಿರೇವ ಸತ್ಯಾಃ ।**
**ಸತೀತ್ವಮೇಕಂ ಮಹದಂಗನಾನಾಂ ॥**

## ಪ್ರಥಮ ಪರಿಚ್ಛೇದ.

( ಮೋಹಶೃಂಖಲೆ )

ಜಗದುಜ್ಜೀವನನಾದ ದಿನನಾಥನು ನಿತ್ಯದಂತೆ ಈ ದಿನವೂ ವಿಶಾಲವಾದ ಗಗನಾಂಗಣದಲ್ಲಿ ತಲೆದೋರಿದನು. ಆದರೆ ಇಂದು, ದುರಾಗ್ರಹಚಿತ್ತರೂ ಕರ್ತವ್ಯವಿಮುಖರೂ ಆದ ಪಾಪಿಗಳಂತಹ ಕಾರ್ಮುಗಿಲು ಭಗವಂತನಾದ ಸೂರ್ಯನಾರಾಯಣನ ಪ್ರಭೆಯನ್ನು ಭಂಗಮಾಡುವ ಉದ್ದೇಶದಿಂದ ಸುತ್ತಲೂ ಆವರಿಸಿಕೊಂಡು ಅಡ್ಡೈಸುತ್ತಿದ್ದಿತು. ಆದರೂ--ನಿಂದಿಸುವವರು ನಿಂದಿಸಲಿ, ಹೊಗಳುವವರು ಹೊಗಳಲಿ; ಲಕ್ಷ್ಮಿ ಕೈವಶವಾಗಲಿ ಅಥವಾ ಬಿಟ್ಟುಹೋಗಲಿ, ಇಂದೇ ಮೃತ್ಯು ಸನ್ನಿಹಿತವಾದರೂ—ಆಗಲಿ, ಹಿಡಿದ ನ್ಯಾಯವಾದ ಕಾರ್ಯವನ್ನು ಬಿಡದೆ, ಈ ಜನ್ಮದಲ್ಲಿ ಸಾಧ್ಯವಾಗದಿದ್ದರೆ ಮುಂದಿನ ಜನ್ಮದಲ್ಲಿಯಾದರೂ ಸಾಧಿಸಿಯೇ ಸಾಧಿಸುವೆವೆಂಬ ಧೀರರಿಗೆಲ್ಲ ಮಾರ್ಗದರ್ಶಕನಾದ ಸಹಸ್ರಕಿರಣನು, ಪ್ರಾಪ್ತವಾಗುತ್ತಿದ್ದ ವಿಘ್ನಪರಂಪರೆಯನ್ನು ಧೈರ್ಯ

ಸ್ಥೈರ್ಯ ಸಾಹಸಗಳಿಂದ ನಿವಾರಿಸುತ್ತ, ಸದ್ಯಃಸ್ಥಿತಿಯಲ್ಲಿ ಜಡರೆನ್ನಿಸಿದ್ದ ಭಾರತೀಯರನ್ನು ಎಚ್ಚರಿಸಲು ತನ್ನ ಕಿರಣಗಳಿಂದ ದಿಕ್‍ಪ್ರಕಾಶಮಾಡುತ್ತಿದ್ದನು. ಜೀವನಪ್ರದನಾದ ಬಾಲಾರ್ಕನ ಈ ಬಗೆಯ ಬಲವದುದ್ಯಮವನ್ನು ನೋಡಿ ಸಹಿಸಲಾರದೆ ಮೇಘರಾಜನು ವಾರ್ಷಿಕನ ಸಹಾಯಸಂಪತ್ತಿಯಿಂದ ಜಗಚ್ಚಕ್ಷುವನ್ನು ಪರಾಭವಕ್ಕೀಡುಮಾಡಬೇಕೆಂದು ಬಹುವಾಗಿ ಪ್ರಯತ್ನಿಸುತ್ತಿದ್ದನು. ದಿನನಾಥನಿಗುಂಟಾದ ಆಕ್ರಮಣಕ್ಕಾಗಿ ಕಮಲಿನಿ ಕುಗ್ಗಿದಳು. ಕ್ಷಮಾದೇವಿ ಮ್ಲಾನವದನೆಯಾಗಿ ಮೇಘರಾಜನನ್ನು ನಿಂದಿಸಿ ನಿಂದಿಸಿ ಆತನ ಆಗ್ರಹಕ್ಕೆ ಗುರಿಯಾಗಿ ಘನವರ್ಷಾಘಾತದಿಂದ ಕ್ಷತವಿಕ್ಷತಳಾದಂತೆ ಕಾಣುತ್ತಿದ್ದಳು. ಆದರೇನು ? ದುರಾಶೆಯುಳ್ಳವರ ಕಾರ್ಯವು ಪ್ರತಿಕ್ಷಣದಲ್ಲಿಯೂ ಫಲಹೊಂದಿದಂತೆ ಕಂಡುಬಂದರೂ ಸಿದ್ಧಿಸುವುದಿಲ್ಲ; ಸಜ್ಜನರು ಮೊದಲು ಮೊದಲು ದುಷ್ಟರ ದೆಸೆಯಿಂದ ಆಪತ್ತಿಗೆ ಗುರಿಯಾಗಿ ಸಂಕಟಪಡುವಂತಾದರೂ ತಮ್ಮ ಪವಿತ್ರ ಹೃದಯಸ್ಥವಾಗಿರುವ ಸ್ಥಿರಸಂಕಲ್ಪ, ಮನಸ್ಥೈರ್ಯ, ವಿವೇಚನಾಶಕ್ತಿಗಳ ಪ್ರಭಾವದಿಂದ ಮುಂದೆ ಅಭ್ಯುದಯವನ್ನೇ ಹೊಂದುವರು.

ಇರಲಿ. ಇಂದು ಶಂಕರಪೇಟೆಯು ವರ್ಷಾಕಾಲದ ಮಹಾವಿಪ್ಲವಕ್ಕೆ ಗುರಿಯಾಗಿ ರೂಪಾಂತರವನ್ನು ಹೊಂದಿದ್ದಿತು. ರಾಜವೀಧಿಗಳೇ ಸಂಚಾರಕ್ಕೆ ಅರ್ಹವಾಗಿರಲಿಲ್ಲವೆಂದಬಳಿಕ ಸಂದುಗೊಂದುಗಳ ಅವಸ್ಥೆಯನ್ನು ಏನೆಂದು ಹೇಳಬಹುದು? ವಿಶಾಲವಾದೊಂದು ಬೀದಿಯ ಹಿಂದುಗಡೆಯ ಚಿಕ್ಕ ಅಗ್ರಹಾರದಲ್ಲಿದ್ದ ಒಂದು ಮನೆಯ ಹೊರಬಾಗಿಲು ಬರಿದೆ ಹಾಕಲ್ಪಟ್ಟಿದ್ದಿತು. ಮನೆಯೊಳಗೆ ನಡುವಿನ ಅಂಗಳದಲ್ಲಿ ಹಳೆಯದಾಗಿದ್ದ ಮಂಚದ ಮೇಲೆ ರೋಗದಿಂದ ಅತ್ಯಂತ ದುರ್ಬಲಳಾದ ವೃದ್ಧಸ್ತ್ರೀಯೊಬ್ಬಳು ಮಲಗಿದ್ದಳು. ರೋಗಿಯ ಮಗ್ಗುಲಿನಲ್ಲಿಯೇ ಲಾವಣ್ಯಮಯಿಯಾದ ರಮಣಿಯೊಬ್ಬಳು ಕುಳಿತು ಬೀಸಣಿಗೆಯಿಂದ ರೋಗಿಗೆ ಗಾಳಿಯನ್ನು ಹಾಕುತ್ತಿದ್ದಳು. ರೋಗಿ, ಈ ರಮಣಿ-ಇವರಿಬ್ಬರಲ್ಲದೆ ಮತ್ತಾರೂ ಆ ಮನೆಯಲ್ಲಿಲ್ಲ. ರಮಣಿಯು ನಿಜಕರದಲ್ಲಿ "ಭಕ್ತಿಚಿಂತಾಮಣಿ" ಎಂಬ ದಿವ್ಯಗ್ರಂಥವನ್ನು ಹಿಡಿದು ಅವಕಾಶದೊರೆತಾಗಳೆಲ್ಲ ಅವಲೋಕಿಸುತ್ತಿದ್ದಳು. ರೋಗಿಯು, ಧಾರಾಕಾರವಾಗಿ ಸುರಿವ ದುಃಖಾಶ್ರುವಿನಿಂದ

ಮಲಿನವಾಗಿದ್ದ ಕಣ್ಣುಗಳನ್ನು ಅರ್ಧ ತೆರೆಯುತ್ತಲೂ ಅರ್ಧ ಮುಚ್ಚುತ್ತಲೂ ರಮಣಿಯನ್ನೇ ನೋಡುತ್ತಿದ್ದಳು.

ರಮಣಿಯು ಅಳುತ್ತಿರುವ ರೋಗಿಯನ್ನು ಕುರಿತು ಮೃದುಸ್ವರದಿಂದ ಕೇಳಿದಳು:— “ಅಮ್ಮ! ಹೀಗೇಕೆ ಅಳುತ್ತಿರುವೆ? ನಿನಗೇನು ಬೇಕು?

ರೋಗಿ:— ಸಭಾ! ಹೇಗೆ ಅಳದಿರಲಿ? ಹದಿನೆಂಟು ವರ್ಷದೊಳಗಾಗಿ ನಿನಗೆ ತವರ್ಮನೆಯು ಆಶೆಯೋ.........” ಹೀಗೆ ಹೇಳಿ ಮುಂದೆ ಮಾತಿಲ್ಲದೆ ಅತ್ತುಬಿಟ್ಟಳು.

ಸಭಾ:— ಅಳುವುದರಿಂದಾಗುವ ಫಲವೇನು? ಆವ ಕಾರ್ಯವು ಅಳುವಿನಿಂದ ಸಾಧಿಸಲ್ಪಡುವುದು?

ರೋಗಿ:— ಸಭಾ! ದುಃಖವನ್ನು ತಡೆಯಲಾರೆ. ಉಕ್ಕಿ ಉಕ್ಕಿಬರುವಂತಾಗಿದೆ. ನಾನೇನು ಮಾಡಲಿ?

ಸಭಾ:— ಅಳುವನ್ನು ತಡೆಯದಿದ್ದರೆ ಹೇಗೆ? ಅತ್ತಷ್ಟೂ ಕ್ಲೇಶವೂ ಹೆಚ್ಚು, ರೋಗವೂ ಹೆಚ್ಚು.

ರೋಗಿ:— ಮತ್ತೇನು ಮಾಡಲಿ? ಮಗು! ನಾನು ಸಾಯುವೆನು; ಪ್ರಾಯತುಂಬಿದ ನೀನೊಬ್ಬಳೇ ಮನೆಯಲ್ಲಿ ನಿಸ್ಸಹಾಯಕಳಾಗಿ ಉಳಿಯುವೆ. ಶಾಂತಿಪ್ರಸ್ತವು ನೆರವೇರಿ, ನೀನು ಪತಿಗೃಹವನ್ನು ಸೇರಿದ್ದರೆ ನಾನು ಎಷ್ಟೋ ಸಂತೋಷದಿಂದ ಪ್ರಾಣಬಿಡುತ್ತಿದ್ದೆ!

ಸಭಾ:— ಅಮ್ಮ! ಜನನಮರಣಗಳನ್ನು ತಿಳಿದು ಹೇಳುವವರಾರೂ ಇಲ್ಲ. ಸಾಯುವೆಯೆಂದು ಹೇಗೆ ಹೇಳುತ್ತಿ? ದೇವರ ದಯೆಯಿಂದ ನಿನಗೆ ಸ್ವಲ್ಪ ಗುಣವಾದರೆ ಒಡನೆಯೇ ಅವರಿಗೆ ಬರೆಯುತ್ತೇನೆ.

ರೋಗಿ:— ಮಗು! ನನ್ನ ರೋಗವು ನಿಜವಾಗಿ ಗುಣವಾಗುವುದೆಂದಿರುವೆಯಾ? ಇಲ್ಲ—ಇಲ್ಲ; ನಾನಿನ್ನು ಬದುಕುವುದಿಲ್ಲ. ಸಾಯುವುದಕ್ಕಾಗಿ ನಾನು ಅಳುತ್ತೇನೆಂದು ತಿಳಿಯಬೇಡ; ನಾನು ಸಾಯುವುದಕ್ಕೆ ಮೊದಲು ನಿನ್ನ ಗಂಡನೊಡನೆ ನೀನು ಸುಖಿಯಾಗಿ ಸಂಸಾರ ಮಾಡುವುದನ್ನು ನೋಡದೆ ಹೋಗುವೆನೆಂಬುದೇ ನನ್ನ ಕೊರತೆ.

ಸಭಾ:— ಅಮ್ಮ! ದೇವರ ಇಚ್ಛೆಯಿದ್ದರೆ ಅದೂ ಆಗುವುದು.

ಅತ್ತು ಫಲವಿಲ್ಲ.

ರೋಗಿ:— ಮಗು, ನನಗೆ ಪ್ರತಿದಿನವೂ ಕೆಟ್ಟಕೆಟ್ಟ ಕನಸುಗಳು ಬೀಳುತಲಿವೆ. ಈವರೆಗೆ ಎಷ್ಟೋ ಕಷ್ಟಗಳನ್ನು ಅನುಭವಿಸಿದುದಾಯ್ತು. ಇನ್ನೂ ಎಷ್ಟನ್ನು ಅನುಭವಿಸಬೇಕೋ..................

ನಭಾ:—ಇಲ್ಲದುದನ್ನೆಲ್ಲ ಮನಸ್ಸಿಗೆ ಹಚ್ಚಿಸಿಕೊಳ್ಳಬಾರದು. ಕನಸೆಲ್ಲವೂ ನಿಜವಾಗುವುದಿಲ್ಲ.

ರೋಗಿಯು ನಭೆಯ ಕೈಯನ್ನು ಹಿಡಿದು ಸತೃಷ್ಣನಯನೆಯಾಗಿ ನೋಡುತ್ತ "ಮಗು, ನಿನ್ನ ತಂದೆಯವರು ನಿನ್ನನ್ನು ನೋಡಿದಾಗಲೆಲ್ಲ— "ಮಗಳು ಬಹು ಯಶಸ್ವಿನಿಯಾಗಿ ಬಾಳುವಳೆಂದು" ಹೇಳುತ್ತಿದ್ದರು. ನಿನ್ನ ಈಗಿನ ಬುದ್ಧಿಕುಶಲತೆ, ವಿವೇಚನಾಶಕ್ತಿ ಇವೆಲ್ಲವನ್ನೂ ನೋಡಿದರೆ ಆ ಮಾತು ನಿಜವೆಂದೇ ತೋರುತಿದೆ. ಮಗು, ಕುಲಕ್ಕೆಲ್ಲಾ ಒಬ್ಬಳೇ ಮಗಳೂ ನಮ್ಮ ವಂಶಕ್ಕೇ ಶಿರೋರತ್ನಪ್ರಾಯಳೂ ಆಗಿರುವ ನೀನು ಚಿರಜೀವಿನಿಯಾಗಿರಬೇಕೆಂಬುದೇ ದೇವರಲ್ಲಿ ನನ್ನ ಪ್ರಾರ್ಥನೆ" ಎಂದಳು; ಮುಂದೆ ಮಾತಿಲ್ಲದೆ ನಿಟ್ಟುಸಿರುಬಿಟ್ಟಳು.

ನಭಾ:— ಅಮ್ಮಾ, ಅದೇನನ್ನು ಕುರಿತು ಚಿಂತೆಮಾಡುತ್ತೀ?

ರೋಗಿ:—ಮಗು, ಏನು ಚಿಂತೆ ? ದೇವರ ದಯೆಯಿದ್ದಿದ್ದ ನಿನಗಿಂತ ಮೊದಲು ಹುಟ್ಟಿದವರೆಲ್ಲರೂ ಬದುಕಿದ್ದರೆ ಈಗ ನಿನಗೆಷ್ಟು ಮಂದಿ ಅಕ್ಕ, ಅಣ್ಣಂದಿರಾಗುತ್ತಿದ್ದರು ? (ಹೀಗೆ ಹೇಳಿ ಮತ್ತೆ ಬಿಕ್ಕಿಬಿಕ್ಕಿ ಅಳತೊಡಗಿದಳು.)

ನಭಾ:— ಅಮ್ಮ, ಇದೇಕೆ ಹೀಗೆ ಅಳುತ್ತಿ? ಎಲ್ಲವನ್ನೂ ತಿಳಿದ ನೀನೇ ಈ ರೀತಿ ಅಳುತ್ತ ಕುಳಿತರೆ ಹುಡುಗಿಯಾದ ನನ್ನ ಪಾಡೇನು ? ನೀನು ಅತ್ತಷ್ಟೂ ನನಗೆ ದುಃಖವು ಹೆಚ್ಚುವುದು. ಮಗಳಿಗೆ ಕಷ್ಟವನ್ನು ಕೊಡಬೇಕೆಂದಿದ್ದರೆ ನೀನು ಅಳಬಹುದು.

ರೋಗಿ:—(ದುಃಖವನ್ನು ತಡೆದು)—ಇಲ್ಲ, ಮಗು, ಇನ್ನು ಅಳುವುದಿಲ್ಲ.

ನಭಾ:—ಅಮ್ಮ! ನೋಡು, ನೀನೇ ವಿಚಾರಮಾಡು. "ಎಂದೋ ಸತ್ತವರಿಗೆ ಇಂದು ಅತ್ತರು" ಎಂಬಂತೆ ಸಾಯುವಕಾಲದಲ್ಲಿಯೂ ಹಿಂದೆ

ಸತ್ತವರಿಗೆ ಅಳಬೇಕೆ? ನಿನ್ನ ಮುಂದಿನ ಮಾರ್ಗವನ್ನು ಸುಗಮಮಾಡಿಕೊ; ಈ ಮೋಹಪಾಶವನ್ನು ಇಲ್ಲಿಯೇ ಖಂಡಿಸಿಬಿಡು. ದೇವರನ್ನು ನೆನೆ.

ರೋಗಿ:—ಕಣ್ಣುಗಳನ್ನು ಚೆನ್ನಾಗಿ ಬಿಟ್ಟು ಮಗಳ ಮುಖವನ್ನೇ ನೋಡುತ್ತ—"ನಭಾ, ನಿನ್ನ ಜ್ಞಾನ-ಭಕ್ತಿ-ವೈರಾಗ್ಯಗಳು ನನಗಿಲ್ಲವಲ್ಲಾ! ನೀನು ನನಗೆ ಬುದ್ಧಿ ಹೇಳುವಷ್ಟು ಶಕ್ತಳಾದುದು ಸುಕೃತವಲ್ಲದೆ ಬೇರಿಲ್ಲ.

ನಭಾ:—ಅಮ್ಮಾ! ಇದೆಲ್ಲಾ ನಿನ್ನ ಆಶೀರ್ವಾದದಿಂದ ಬಂದುದು.

ರೋಗಿ:—ನಭಾ! ಈಗ ನೆನಪಿಗೆ ಬಂತು, ಮೊನ್ನೆ ನಿನ್ನ ಗಂಡನಿಂದ ಬಂದ ಕಾಗದದ ವಿಚಾರವೇನು?

ನಭಾ:—ಆಗಲೇ ಹೇಳಿದೆನಲ್ಲ?

ರೋಗಿ:—ಚೆನ್ನಾಗಿ ನೆನಪಿಲ್ಲ, ಇನ್ನೊಂದು ಸಾರೆ ಹೇಳು.

ನಭಾ:—ಅವರಿಗೆ ಅಯ್ವತ್ತು ರೂಪಾಯಿ ಸಂಬಳವಾಯಿತಂತೆ!

ರೋಗಿ:—ದೇವರು ಎಷ್ಟು ಕೊಟ್ಟರೆ. ಅಷ್ಟರಲ್ಲಿಯೇ ತೃಪ್ತರಾಗಬೇಕು. ಹೇಗೂ ನಿನ್ನ ಸಂಸಾರವು ನೆಟ್ಟಗಿದ್ದರೆ ನನಗೆ ಅದೇ ಬ್ರಹ್ಮಾಂಡ.

ನಭಾ:— ಎಲ್ಲವೂ ಭಗವದಿಚ್ಛೆ.

ರೋಗಿ:— ನಭಾ, ನಿನ್ನನ್ನು ಕರೆದುಕೊಂಡು ಹೋಗಲು ಅವರಾವಾಗ ಬರುತ್ತಾರಂತೆ?

ನಭಾ:— ಜಾಗ್ರತೆಯಾಗಿಯೇ ಬಂದು ನಮ್ಮಿಬ್ಬರನ್ನೂ ಕರೆದುಕೊಂಡು ಹೋಗುವರಂತೆ! ಈ ವಿಷಯವನ್ನು ನಿನಗೆ ತಿಳಿಸೆಂದೂ ಬರೆದಿರುವರು

ರೋಗಿ:—(ನಭೆಯ ಕೈಹಿಡಿದು) "ಮಗು, ಆ ಮಹರಾಯ ಬಂದರೆ ಆತನ ವಶಕ್ಕೆ ನಿನ್ನನ್ನು ಒಪ್ಪಿಸಿ ನಾನು ಸುಖವಾಗಿ ಪ್ರಾಣಬಿಡುವೆನು." ಎಂದಳು.

ನಭೆ:— ಅಮ್ಮಾ! ದೇವರಿದ್ದಾನೆ, ಚಿಂತಿಸಬೇಡ.

ರೋಗಿ:—ಮಗು, ನಿನ್ನಿನಿಂದಲೂ ನನಗಾಗಿ ಉಪವಾಸವಿದ್ದೀಯೆ; ಈಗಲಾದರೂ ಒಳಗೆ ಹೋಗಿ ಅಡಿಗೆ ಮಾಡು, ಊಟಮಾಡುವೆಯಂತೆ.

ನಭಾ:— ಅಮ್ಮ, ಮತ್ತೇನು ಮಾಡಬೇಕಾಗಿತ್ತು? ಜ್ಞಾನವಿಲ್ಲದೆ ಸಾಯುವ ಸ್ಥಿತಿಯಲ್ಲಿ ಮಲಗಿದ್ದ ನಿನ್ನನ್ನು ಬಿಟ್ಟು ನಾನು ಹೇಗೆ ಅಡಿಗೆ

ಮಾಡಬಹುದಾಗಿತ್ತು? ಊಟವಾರಿಗೆಬೇಕು?

ರೋಗಿ:— ಇರಲಿ, ಈಗ ಹೋಗಿ ಅಡಿಗೆ ಮಾಡಿ ಊಟಮಾಡು, ನನಗೂ ಸಂಕಟವಾಗುವುದು. ಹಾಗೆಯೇ ಸ್ವಲ್ಪ ಗಂಜಿಯನ್ನು ಮಾಡಿ ಕೊಡು.

ನಭೆ, ಘಟ್ಟನೆದ್ದು ಮೋಕ್ಷಕ್ಕುಂಟಿತಾಬದ್ಧಳಾಗಿರುವ ತಾಯಿ ಉಳಿದು ಕೊಳ್ಳುವಳೆಂಬ ಸಂತೋಷದಿಂದ- "ಈಗಲೇ ಗಂಜಿ ಮಾಡಿ ತರುವೆನು" ಎಂದು ಹೇಳಿ ಮಡಿಯುಡಲು ಸ್ನಾನಗೃಹಕ್ಕೆ ನಡೆದಳು.

---

## ದ್ವಿತೀಯ ಪರಿಚ್ಛೇದ.

### ( ವಿಷಮಯಘಟನೆ )

ನಭೆ ಸ್ನಾನಗೃಹಕ್ಕೆ ಹೋದ ಒಂದೆರಡುಘಳಿಗೆಯೊಳಗೇ ಅಂಚೆ ಯುವನು ಬಂದು, ಕೆಲವು ಕಾಗದಗಳನ್ನು ರೋಗಿಯ ಹಾಸಿಗೆಯಮೇಲೆ ಹಾಕಿ ಹೊರಟುಹೋದನು. ನಭೆಯು ಗಂಜಿಯನ್ನು ಮಾಡಿಕೊಂಡು ಬಂದು ತಾಯಿಗೆ ಕೊಟ್ಟಳು. ರೋಗಿಯು ಮಡಿಯುಡದೆ ಕುಡಿಯಲು ಮೊದಲು ಒಪ್ಪಲಿಲ್ಲ. "ಆಪತ್ಕಾಲದಲ್ಲಿ ಮರ್ಯಾದೆಯ ಕಡೆಗೂ ಲಕ್ಷ್ಯ ಕೊಡದಿರಬಹುದು." ಎಂಬ ಆರ್ಯವಚನಾಧಾರದಿಂದ ನಭೆ ತಾಯಿಗೆ ಬಹುವಾಗಿ ಹೇಳಲು ಅದರಿಂದ ತೃಪ್ತಳಾಗಿ ಕುಡಿದಳು. ಅನಂತರ ನಭೆಗೆ ಹಾಸುಗೆಯಮೇಲೆ ಬಿದ್ದಿದ್ದ ಮೂರುಕಾಗದಗಳೂ ಕಂಡು ಬಂದುವು. ಆತುರದಿಂದ ಅವುಗಳನ್ನು ತೆಗೆದುಕೊಂಡು ನೋಡಿದಳು. ಮೂರೂ ತನಗೆ ಬಂದುವೆಂದೇ ತಿಳಿದಳು. ಒಂದು ತನ್ನ ಪತಿಯ ಹಸ್ತಾಕ್ಷರವೆಂದು ಬೋಧೆಯಾಯ್ತು. ಮತ್ತೊಂದರಲ್ಲಿ ಒಂದು ನಿಜಭ್ರಾತೃಹಸ್ತಾಕ್ಷರವಿರಬಹುದೆಂಬ ಸಂದೇಹ! ಉಳಿದುದು ಎಂದೂ ನೋಡದ ಹಸ್ತಾಕ್ಷರ! ಚಕಿತೆಯಾದಳು. ಅದನ್ನು ನೋಡಿದ ರೋಗಿ;—"ನಭಾ! ಅದಾರವು? ಅಷ್ಟು ಕಾಗದಗಳು?" ಎಂದಳು.

ನಭಾ:—ಇದೇ ನಿನ್ನ ಅಳಿಯಂದಿರದು.

ರೋಗಿ:—ಏನು ಬರೆದಿರುವರು?

ಸಭಾ:—ಓದಿನೋಡಿ, ಹೇಳುವೆನು

ಮನದಲ್ಲಿಯೇ ಓದಿಕೊಳ್ಳಲುಪಕ್ರಮಿಸಿದಳು. ಕಂಠವು ಉಬ್ಬಿ ಕೈನಡುಗಲಾರಂಭವಾಯ್ತು; ತುಟಿಗಳು ಅದರಿದುವು. ಕಣ್ಣಿನಲ್ಲಿ ನೀರು ತುಂಬಿ ಹೊರಹರಿಯಲಾರಂಭವಾಯಿತು. ಹೃದಯದಲ್ಲಿ ಒಂದು ವಿಧವಾದ ಭಯಂಕರ ವಿದ್ಯುತ್ಪ್ರವಾಸವು ಜಡಿತನಾಗುವಂತೆ ತೀಡು ಬರುತಿದ್ದಿತು. ರೋಗಿ, ಇವಳ ಸ್ಥಿತಿಯನ್ನು ನೋಡಿ, ಆತುರದಿಂದ ಕೇಳಿದಳು. "ಸಭಾ, ಅದೇನದು? ಆ ಕಾಗದ? ಅದೇಕೆ ಹೀಗೆ ಮಾಡುವೆ?"

ಸಭೆಗೆ ಸತ್ಯವಾಗಿಯೂ ವಾಕ್ಶಕ್ತಿಯಿರಲಿಲ್ಲ. ಬಹು ಕಷ್ಟದಿಂದ ಮೆಲ್ಲನೆ "ಸರ್ವನಾಶ!" ಎಂದಳು. ರೋಗಿಯು "ಸರ್ವನಾಶ" ಎಂಬ ಶಬ್ದ ಶ್ರವಣಮಾತ್ರದಿಂದಲೇ ಹಾಸಿಗೆಯಲ್ಲಿ ಮಲಗಿದ್ದಂತೆಯೇ ಒಮ್ಮೆ ಹಾರಿ ಬಿದ್ದು ಕಾತರಕಂಠದಿಂದ, "ಸಭಾ! ಏನಾಯಿತು? ಅದೇನು? ಹೇಳು. ಎಂದು ಕೂಗಿದಳು. ಈ ವೇಳೆ ಸಭೆಯ ಹೃದಯವು ಶುದ್ಧ ಕಲ್ಲಿನಂತೆ ಜಡವಾಗಿದ್ದಿತು. ಅತಿಯಾದ ದುಃಖವಾದರೆ ಹೀಗಾಗುವುದು ಸಹಜವೇ! ಸಭೆ, ಮತ್ತೇನೂ ಹೇಳದೆ—"ಅಮ್ಮಾ! ಪತ್ರವನ್ನೇ ಓದುವೆನು. ಏನಾಯಿತೆಂಬುದನ್ನು ನಾನು ಹೇಳಲಾರೆ." ಎಂದು ಓದಲುಪಕ್ರಮಿಸಿದಳು. ಪತ್ರವು ಈ ರೀತಿ ವಿಲಿಖಿತವಾಗಿದ್ದಿತು.

"ಸಭಾ! ನನ್ನ ಪ್ರಿಯಸಭಾ!

ಈ ಪ್ರಪಂಚದಲ್ಲಿ ಆವುದು ನನಗೆ ಪ್ರಾಣಕ್ಕಿಂತಲೂ ಪ್ರಿಯವಾದ ವಸ್ತುವಾಗಿರುವುದೋ, ಆವುದನ್ನು ನಾನು ನನ್ನ ಕಂಠಾಭರಣವನ್ನಾಗಿ ತಿಳಿದಿರುವೆನೋ, ಆವುದರ ಸಹಾಯಸಂಪತ್ತಿಯಿಂದ ಇಹ ಪರಗಳೆರಡರಲ್ಲಿಯೂ, ಅವಶ್ಯವಾಗಿ ಆರ್ಜಿಸಲ್ಪಡಬೇಕಾದುವನ್ನು ಆರ್ಜಿಸಲು ಸಾಧ್ಯವೆಂದು ನಂಬಿದ್ದೆನೋ, ಆವುದೊಂದು ರೂಪರತ್ನಜ್ಯೋತಿಯು ನನ್ನ ಹೃದಯಾಂಗಣದಲ್ಲಿ ಪ್ರಕಾಶಿಸುತಿದೆಯೋ, ಅಂತಹ ಪ್ರಿಯವೂ, ಅಮೌಲ್ಯವೂ ಆದ ರತ್ನವನ್ನು ಇಂದು ತ್ಯಜಿಸಿಹೋಗಬೇಕಾದ ಸಂಕಟಕ್ಕೆ ಸಿಕ್ಕಿಬಿದ್ದಿರುವೆನು.

ಸಭಾ! ನಾನು ನಿನ್ನನ್ನು ಈಗಲೇ ಅಗಲಿ ಹೋಗಲಾರದವನಾಗಿರು

ವೆನು; ಆದರೇನು ಮಾಡಲಿ? ನನ್ನ ಆತ್ಮನು ಈ ಕರ್ಮಭೂಮಿಯನ್ನು ಈ ಅಸ್ಥಿಮಾಂಸಗಳ ಪಂಜರವನ್ನು ಇಲ್ಲಿಯೇ ತೊರೆದು, ಪರಂಧಾಮ ವನ್ನು ಸೇರುವ ಪ್ರಯತ್ನದಲ್ಲಿರುವನು. ಹೆಚ್ಚು ವಿಳಂಬವಿಲ್ಲ, ಶಕ್ತಿಕುಂಠಿ ತವಾಗುತಿದೆ. ನಾನು ಸಾಂಕ್ರಾಮಿಕ ರೋಗಶಕ್ತಿಯಿಂದ ಮರಣೋನ್ಮು ಖನಾಗಿರುವೆನು. ನಾನು ಸತ್ತೇ ಸಾಯುವೆನು. ನನ್ನ ಜೀವಿತಾಶೆಯಿಲ್ಲ!

ನಭಾ! ನಾನು ಸಾಯುವುದಕ್ಕಾಗಿ ಸಂಕಟಪಡುವುದಿಲ್ಲ; ಈ ಅಂತ್ಯಕಾಲದಲ್ಲಿ ಒಂದು ತಡವೆ, ಒಂದೇ ಒಂದು ತಡವೆ, ನಿನ್ನ ಶಾಂತ ಮೂರ್ತಿಯನ್ನು ಅವಲೋಕಿಸುವಷ್ಟರ ಭಾಗ್ಯವಾದರೂ ದೊರೆಯದುದ ಕ್ಕಾಗಿ ಸಂಕಟಪಡುವೆನು. ಹೃದಯೇಶ್ವರಿ! ಅಂತಹ ಅದೃಷ್ಟವಂತನು ನಾನಲ್ಲವೆಂಬುದೊಂದೇ—ನನಗೆ ಸಮಾಧಾನದ ಮಾತಲ್ಲವೆ? ಹೇಗಾದರೂ ಆಗಲಿ! ನಾನು ಸಾಯುವೆನು; ನಿಜವಾಗಿಯೂ ಸಾಯುವೆನು. ಈ ಲೋಕವನ್ನೇ ಬಿಟ್ಟುಹೋಗುವುದರಲ್ಲಿರುವೆನು. ಆದರೂ, ನನ್ನ ಮನಸ್ಸಿ ನಲ್ಲಿರುವ ಒಂದೆರಡು ಮಾತುಗಳನ್ನು ತಿಳಿಸದೆ ಸಾಯಲು ಮನಸ್ಸು ಬಾರದು. ಕಯ್ಯಲ್ಲಾಗುವವರೆಗೂ ಬರೆದು ಸಾಯುವೆನು.

ಪ್ರಿಯಸಭಾ ! ನಿನ್ನನ್ನು ಅತ್ಯುನ್ನತನ್ನಾಸಾಧಿಷ್ಠಾತೃದೇವಿ ಯನ್ನಾಗಿ ಪ್ರತಿಷ್ಠಿಸಬೇಕೆಂದು ಮಾಡಿದ್ದೆನು. ಆ ನನ್ನ ಅಪಾರ ವಾದ ಆಶೆಯಲ್ಲಿ ಅಣುಮಾತ್ರವಾದರೂ ನನ್ನಿಂದ ನಡೆಯಿಸಲ್ಪಡಲಾರದೆ ಹೋದುದಕ್ಕಾಗಿ ಎಷ್ಟು ಚಿಂತಿಸಿದರೂ ಸ್ವಲ್ಪವೇ! ವಿವಾಹವಾದಂದಿ ನಿಂದ ಒಂದು ಬಾರಿಯಾದರೂ ನನ್ನ ಮನೆಗೆ ಕರೆಯಿಸಿಕೊಳ್ಳಲಾಗಲಿಲ್ಲ. ಒಂದು ನಿಮಿಷವಾದರೂ ನಿನ್ನೊಡನೆ ವಿನೋದವಾಗಿ ಮಾತನಾಡಲಿಲ್ಲ. ಅಯ್ಯೋ, ನಭಾ!! ಆ ನನ್ನ ಅಪಾರವಾದ ಆಶೆಯು ಇಂದು ಕೃಶಾನುವಶ ವಾಗುವುದು. ಈ ನತದೃಷ್ಟನನ್ನು ಕೈವಿಡಿದು, ಆವಸುಖವನ್ನು ತಾನೆ ಅನುಭವಿಸಿದೆ ? ಇಹದಲ್ಲಿ ಚಿರದುಃಖಿನಿಯಾಗಿ ಬಾಳಬೇಕಾದುದಲ್ಲವೇ ನಿನಗಾದಫಲವು ? ಈ ಸುಬ್ರಹ್ಮಚರ್ಯೆಯಲ್ಲಿಯೇ, ಈಗಿನ ದೃಢಪ್ರಜ್ಞೆಯ ಲ್ಲಿಯೇ ಕಾಲಚಕ್ರವನ್ನು ನೂಕಿ, ಈ ಪೃಥ್ವಿಯನ್ನು ತ್ಯಜಿಸಬಲ್ಲೆಯಾ ದರೆ, ಪರಸಾಮ್ರಾಜ್ಯವನ್ನು ಸೂರೆಗೊಳ್ಳುವೆ. ನೀನು ನಿಜವಾಗಿಯೂ ಹಾಗೆಯೇ ಇರಲುಳ್ಳವಳೆಂದು ನಂಬಿರುವೆನು.

ನಿನಗೆ ಈಗಿನ ಸುಬ್ರಹ್ಮಣ್ಯತೀರ್ಥ್ಯವೇ ಸುಲಭವೂ ಸುಖದಾಯಕವೂ ಆದುದೆಂದು ನಂಬಿ, ಕೈಬಿಡದೆ ಇದನ್ನೇ ಅನುಸರಿಸು. ಎಂತಹ ಆಪತ್ಕಾಲದಲ್ಲಿ, ಎಂತಹ ಕಠೋರಸಮಯದಲ್ಲಿ, ಎಂತಹ ಧನಕನಕ ವಾಹನಾದಿ ಸಂಪಲ್ಲಾಭವಾಗುವಂತಿರುವ ವೇಳೆಯಲ್ಲಿಯಾಗಲೀ ನೀನು ಚಂಚಲಳಾಗಬಾರದು ! ಒಮ್ಮೆ ಈ ಕ್ಷಣಿಕಸುಖದಕಡೆಗೆ ಗಮನವಿಟ್ಟ ಮಾತ್ರಕ್ಕೂ ಮೋಹಪಾಶಬಂಧನದಲ್ಲಿ ಬಿದ್ದು ಪರದ ಸರ್ವಸ್ವವನ್ನೂ ಕಳೆದುಕೊಳ್ಳುವೆ ! ನಭಾ !! ವಿಷಯೋಪಭೋಗಗಳಿಗಾಗಿ ಚಿರಕಳಂಕಿನಿಯಾಗಬೇಡ. ನೀನು ಎಂದಿಗೂ ವಿವೇಕಕ್ಕೆ ವಿರುದ್ಧವಾಗಿ ನಡೆಯಲಾಗದು. ಉಭಯಕುಲವನ್ನೂ ಉದ್ಧರಿಸಿ, ಯಶಶ್ಚಂದ್ರಿಕೆಯಿಂದ ಬೆಳಗುವಂತೆ ಮಾಡುವಿಯೆಂಬ ದೃಢವಾದ ನಂಬುಗೆಯು ನನಗಿದೆ. ನಿನ್ನ ಮಾತೃ ಸನ್ನಿಧಿಯಲ್ಲಿ, ನನ್ನ ಅಂತ್ಯಪ್ರಣಾಮಗಳನ್ನು ಭಕ್ತಿಯಿಂದ ಸಮರ್ಪಿಸು. ನಭಾ ! ಇನ್ನೇನನ್ನೂ ಬರೆಯಲಾರೆನು. ಇಷ್ಟನ್ನು ಹೇಳುತ್ತೇನೆ.—

**ಆತ್ಮಹತ್ಯೆ ಮಹಾಪಾತಕಕರವಾದುದು. ಅದು ನಿನ್ನಂತಹ ಸ್ತ್ರೀಯರಿಗೆ ಕೂಡದು. ಕ್ಷಮಾವಲಂಬಿನಿಯಾಗಿರು ! ಸತ್ಯಾನುಸಂಧಾನವೇ ಮಾರ್ಗವಾಗಿರಲಿ ! ಸುಪ್ರಸಿದ್ಧನಾಮ್ನಿಯರಾದ— ಪದ್ಮಿನಿ, ತಾರಾದಿದೇವಿಯರೇ ನಿನ್ನ ದೇಶೋದ್ಧಾರ ಮಹಾವ್ರತದಲ್ಲಿ-ಆದರ್ಶರಾಗಿರಲಿ !!** ಇದೇ ನನ್ನ ಅಂತ್ಯಲೇಖನ.

**ಶ್ರೀನಿವಾಸ.”**

ನಭೆಯು ಪತ್ರವನ್ನು ಕೆಳಗಿಟ್ಟಳು. ಅಳಲಿಲ್ಲ. ಏಕೆ ? ಅತೀವ ದುಃಖದಿಂದ ಕಣ್ಣಿನಲ್ಲಿ ನೀರುಬಾರದು; ಮನವು ಕಲ್ಲಾಗುವುದು. ನಭೆಗೂ ಹಾಗೆಯೇ ಆಯಿತು. ಅಡಿಗಡಿಗೆ ಪತ್ರವನ್ನು ನೋಡುತ್ತ “ ಸರ್ವೇಶ್ವರ ! ಇದೂ ನಿನ್ನ ಲೀಲೆಯೇನು ? ಎಂದುಕೊಳ್ಳುತ್ತಿದ್ದಳು.

ರೋಗಿ ಉನ್ಮಾದಿನಿಯಂತೆ ಉಚ್ಚಸ್ವರದಿಂದ ;—“ಹಾ ! ನಭಾ ! ನಭಾ !! ನನ್ನ ಪ್ರಾಣಗಳು ಅರ್ಧಹೋಗಿವೆ; ಎಲ್ಲವೂ ಹೋಗಬಾರದೆ?” ಎಂದು ಕೂಗಿ, ಮತ್ತೂ ಹೇಳಿದಳು:—“ಮತ್ತೆರಡು ಕಾಗದವೆಲ್ಲಿಯವು? ಓದು ಅವನ್ನು. ಕನಸೇ ನಿಜವಾಯಿತೇ? ”

ಸಭೆಯು ಎರಡನೆಯ ಕಾಗದವನ್ನು ಬಿಚ್ಚಿದಳು; ನೋಡಿದಳು. ನಾಲ್ಕು ಭಾಗಗಳಲ್ಲಿಯೂ ಶೋಕದರ್ಶಕವಾದ ಕಪ್ಪುಮಸಿಯ ರೇಖೆಗಳು! ದೇಹದಲ್ಲಿ ಸ್ಮೃತಿಯಿಲ್ಲದೆ;—"ಅಮ್ಮಾ! ನಿರ್ಧರವಾಯ್ತು, ಇದು ಮೈದುನನ ಪತ್ರವು. ನಿನ್ನ ಮಗಳು ಇಂದಿನಿಂದ ಅನಾಥೆಯಾದಳು." ಎಂದು ಕಂಪಿತ ಸ್ವರದಿಂದ ತೊದಲುತ್ತ ಮೆಲ್ಲಮೆಲ್ಲನೆ ಓದಿದಳು:—

"ತಾಯಿಯಾ!

ಇದೇ ನನ್ನ ಪ್ರಥಮಪತ್ರವು. ಇದರಲ್ಲಿಯೇ ಹೃದಯಬೇಧಕವೂ ಚಿರದುಃಖಕರವೂ ಆದ ವರ್ತಮಾನವನ್ನು ತಿಳಿಸುವ ದೈವದುರ್ವಿಪಾಕದ ಕಾಲವು ಪಾಪಿಯಾದ ನನ್ನ ಭಾಗಕ್ಕೆ ಸಂಘಟಿಸಿದುದಕ್ಕಾಗಿ ಎಷ್ಟು ವಿಷಾದಿಸಲಿ? ಮಾಡುವುದೇನನ್ನು?

ನಮ್ಮ ಮಾತಾಪಿತೃಗಳ ವೃದ್ಧಾಪ್ಯದಲ್ಲಿ ಅವರ ಆನಂದಕ್ಕೆ ಆಧಾರನಾಗಿಯೂ ಜೀವನಾಧಾರಸೂತ್ರನಾಗಿಯೂ ಇದ್ದ ನಮ್ಮ ಅಣ್ಣನು ಮೃತನಾದನು.

ಮಾತಾಪಿತೃಗಳು ಸಂಕಟಸಾಗರದಲ್ಲಿ ಮುಳುಗುವಂತಾದರು. ನತದೃಷ್ಟನಾದ ನಾನು ನನ್ನ ಮೇಲ್ಮೆಗೆ ಕಾರಣಕರ್ತನೂ, ಸದ್ಬೋಧಕನೂ, ಪರಮೋತ್ಕೃಷ್ಟಬಂಧುವೂ ಆಗಿದ್ದ ಆ ನನ್ನ ಭ್ರಾತೃರತ್ನವನ್ನು ಕಳೆದುಕೊಂಡು ಜಡನಾಗಿರುವೆನು. ಅತ್ತಿಗೆಯಾದ ನಿನ್ನ ಆಗಮವನ್ನೇ ಇದಿರು ನೋಡುತಿದ್ದ ಆ ನಿನ್ನ ನಾದಿನಿಯು ಆಶಾಪಾಶವಿಚ್ಛೇದನದಿಂದ ಅಶ್ರುಧಾರೆಯನ್ನು ಸುರಿಸುತಿರುವಳು.

ತಾಯಿಯಾ! ನಿನ್ನ ಜೀವಿತೇಶ್ವರನು ಇಂದಿಗೆ ಈಗ ಒಂದೇಒಂದು ಘಳಿಗೆಗೆ ಮುಂಚೆ ನಿನ್ನ ಧ್ಯಾನದಲ್ಲಿಯೇ ಲೀನನಾಗಿದ್ದಂತೆ ಪರಂಧಾಮವನ್ನು ಹೊಂದಿದನು. ಕೈಯಲ್ಲಿ ಶಕ್ತಿಯಿರುವವರೆಗೂ, ನಿನಗೆ ಪತ್ರವನ್ನು ಬರೆದನು. ಪ್ರಾಣಹೋಗುವವರೆಗೂ ನಿನ್ನ ಧ್ಯಾನವನ್ನೇ ಮಾಡುತಿದ್ದನು,

ತಾಯಿಯಾ! ನನಗೆ ಕೈಯೋಡದು. ಕಣ್ಣುಗಳಲ್ಲಿ ನೀರುತುಂಬಿ ದೃಷ್ಟಿಯನ್ನು ಕುಂದಿಸಿ, ಪತ್ರವನ್ನು ಮಲಿನಗೊಳಿಸುತಲಿದೆ. ಲೇಖಿನಿಯು ನಡುಗುತಲಿದೆ. ಮನವು ಕ್ಷತವಿಕ್ಷತವಾಗಿದೆ. ಆದರೂ, ಬರೆಯುವೆನು. ಕ್ಷಮಿಸು!

ತಾಯಿಯಾ ! ಕಾರ್ಯವೇನೋ ನಡೆದುದು. ಉತ್ಪತ್ತಿಯೊಡನೆಯೇ ಲಯವು ಸಿದ್ಧವಾಗಿಯೇ ಇರುವುದು. ಎಲ್ಲರೂ ಸಾಯಲೇ ಬೇಕು; ಈಗಣ ದುರಂತವಾದ ಶೋಕಸಂತಾಪಗಳನ್ನು ಧೈರ್ಯ ಸ್ಥೈರ್ಯಗಳಿಂದ ತಡೆಯಬೇಕಾದುದೇ ಧರ್ಮವು. ಅಧೀರರಾದರೆ, ಜಗತ್ಸೃಷ್ಟಿಕರ್ತನ ಉದ್ದೇಶಕ್ಕೆ ವಿರೋಧವಾಗಿ ಸುಖಬಾಹಿರರಾಗಬೇಕಾಗುವುದು. ಶಾಂತಿಯೇ ಸರ್ವತ್ರ ಶ್ರೇಷ್ಠವಾದುದು. ಕ್ಷಮೆಯೇ ಜೀವಧಾರಣೆಗೆ ಮೂಲಾಧಾರವಾದುದು.

ಅತ್ತಿಗೆ ! ನಾನು ಬದುಕಿದ್ದರೆ, ನನ್ನ ಕರ್ತವ್ಯವನ್ನು ನೆರವೇರಿಸುವೆನು. ಮುಖ್ಯ-ತಾಳ್ಮೆಯಿಂದ ದೇಹಧಾರಣ ಮಾಡಿರಬೇಕೆಂದು ಬೇಡುವೆನು.

ಇತಿ—ನಿನ್ನ ವೈದುನ,

**ಮುರಳೀನಾಥ ಶರ್ಮ.**

ಪತ್ರಪಠನವನ್ನು ಮುಗಿಸಿದ ಕೂಡಲೇ ನಭೆಯ ಮುಖದಲ್ಲೊಂದು ಬಗೆಯ ವಿಜಾತೀಯ ಕಾಂತಿ ಕಂಡುಬಂದುದು.

ರೋಗಿಗೆ ಶ್ವಾಸವು ಹೆಚ್ಚಿತು. ಪ್ರಾಣಗಳು ಹೊರಡಲು ಸಿದ್ಧವಾಗಿದ್ದುವು. ಅತಿ ಪ್ರಯಾಸದಿಂದ ಅಸ್ಫುಟವಾಗಿ—"ನಭಾ ! ಮನ-ಕಲ್ಲು-ಮಾಡು. ನಿನ್ನ ಅಣ್ಣ, ಏನು ?" ಎಂದಳು.

ನಭೆಗೆ, ತಾಯಿಯ ದುರವಸ್ಥೆಯನ್ನು ನೋಡಿ ಬುದ್ಧಿ ಶೂನ್ಯವಾಗಲು;—" ಅಮ್ಮಾ ! ನೀನೂ ಸಾಯುವೆ ! ನಿನ್ನಾಶೆಯನ್ನೇಕೆ ಭಂಗಪಡಿಸಲಿ ? ಎಲ್ಲವೂ ನನ್ನ ದುಷ್ಕರ್ಮಫಲ. ಅನುಭವಿಸಲೇಬೇಕು. ಕೇಳು, ಓದುತ್ತೇನೆ." (ಎಂದು ಓದಿದಳು. )

"ತಂಗಿ, ಎಲ್ಲವೂ ದೈವೇಚ್ಛೆ. ವೈಧವ್ಯದ ದುಃಖವನ್ನು ತಡೆಯಲಾರೆನೆಂದು ಆತ್ಮಹತ್ಯವನ್ನು ಮಾತ್ರ ಮಾಡಿಕೊಳ್ಳಬೇಡ. ಸದಸದ್ವಿಚಾರವನ್ನು ಅವಲಂಬಿಸು. ಇದಕ್ಕೂ ಹೆಚ್ಚು ಬರೆಯಲಾರೆ.

ಈ ವಿಷಮಯಸಮಯದಲ್ಲಿ ನಿನ್ನನ್ನು ಏನೆಂದು ಸಂಬೋಧಿಸಲಿ ? ನೀನು ಬಹುಮಾನಿತೆಯಾಗುವಿಯೆಂಬ ಸಂತೋಷವಾರ್ತೆಯನ್ನು ತಿಳುಹಬೇಕೆಂದಿದ್ದ ನಾನು, ಸರ್ವನಾಶಕರವಾದ ಅಪ್ರಿಯವಾರ್ತೆಯನ್ನೇ ತಿಳುಹಬೇಕಾಗಿ ಬಂದ ಈ ದುರ್ದಿನವನ್ನೂ, ಈ ಶುಷ್ಕಲೇಖನಿಯನ್ನೂ, ಎಷ್ಟು-ಏನೆಂದು ಶಪಿಸಲಿ ? ಏತರಿಂದ ಶಾಂತನಾಗಬೇಕು ?

ಸಹೋದರಿ ! ಇಂದು ನಾನು ನಿನ್ನ ಸ್ವಾಮಿಯನ್ನು ನೋಡಲು ಹೋಗಿದ್ದೆನು. ನನ್ನನ್ನು ನೋಡಿದೊಡನೆಯೇ ಉತ್ಕ್ರಮಣಾವಸ್ಥೆಯಲ್ಲಿದ್ದರೂ ಆ ನಮ್ಮ ಶ್ರೀನಿವಾಸನು ಉನ್ಮತ್ತನಂತೆ ನನ್ನನ್ನು ಆಲಿಂಗಿಸಿಕೊಂಡು ಅತ್ತನು. ಆತನ ಪ್ರತಿವಾಕ್ಯ, ಪ್ರತಿಶಬ್ದದಲ್ಲಿಯೂ ನಿನ್ನ ನಾಮವೇ ಅಡಗಿದ್ದಿತು. ಅಂತಹ ಅಮೋಘರತ್ನಧಾರಣಾಯೋಗ್ಯತೆ ನಿನಗಿಲ್ಲವಾಯ್ತು. ನಿನ್ನ ಅಭ್ಯುದಯವನ್ನೇ ನಿರೀಕ್ಷಿಸುತ್ತಿದ್ದ ಮಾತೃದೈವಕ್ಕೆ ಉಂಟಾದ ಶೋಕಕ್ಕೂ, ನಿನ್ನ ಭವಿಷ್ಯಜ್ಜೀವನದ ದುಃಸ್ಥಿತಿಗೂ ಶಾಂತಿಯಿದೆಯೆ ?

ಸಹೋದರಿ ! ರುಗ್ಣಶಯ್ಯಾಗತಳಾದ ನಿನ್ನ ಮಾತೃವು ಈ ಶೋಕಜನಕವರ್ತಮಾನವನ್ನು ಕೇಳಿ, ವಜ್ರಾಘಾತದಿಂದ ಸಮೂಲವಾಗಿ ಬೀಳುವ ವೃಕ್ಷದಂತೆ ನಾಶವಾದರೂ ಆಗಬಹುದು. ಸಾಧ್ಯವಾದ ಮಟ್ಟಿಗೂ, ದೀರ್ಘವೂ, ಧೃಢವೂ ಆದ ಪ್ರಯತ್ನದಿಂದ ನಿನ್ನ ಮುಂದಣ ಮಾರ್ಗವನ್ನು ಸುಗಮಮಾಡಿಕೊ. !

ನಿನ್ನ ಅಣ್ಣ.
**ನಿರಂಜನ.**"

ನಭೆಯು ಪತ್ರಗಳನ್ನು ಮಡಿಸಿ ಉಡಿಯಲ್ಲಿಟ್ಟು ಕುಳಿತಳು. ಈವರೆಗೆ ಮಲಗಿದ್ದ—ಮುದುಕಿಯು ಮುಂದೆ ತಡೆಯಲಾರದೆ ಹುಚ್ಚಿಯಂತೆ— "ನಿರ್ಭಾಗ್ಯೆ ! ಹೊರಡು. ಇನ್ನು ನೀನೀಭೂಮಿಯಲ್ಲಿದ್ದು ಫಲವಿಲ್ಲ." ಎಂದು ಕೂಗಿಕೊಂಡಳು.

ನಭೆಯು ಕಣ್ಣೀರುತುಂಬಿ—"ಅಮ್ಮಾ ! ಭೂಮಿಯಲ್ಲಿರಬಾರದು—ನಿಜ; ಆದರೆ, ಮತ್ತೆಲ್ಲಿಗೆ ಹೋಗಲಿ ? ಮೃತ್ಯುವು ಸನ್ನಿಚ್ಛೆಗೆ ಬರುವುದೇ ? ಅದು ಕಾಲ ಬಂದಾಗ ಬರುವುದು.

ರೋಗಿ:—ನಿರ್ಭಾಗ್ಯೆ ! ನಿನ್ನ ಗಂಡನಿಗೂ ಕಾಲವಾಗಿದ್ದಿತೊ ?

ನಭಾ:—ಆಗಿದ್ದುದರಿಂದಲೇ ಹೋದರು. ನನ್ನಕಾಲ ಪರಿಪಕ್ವವಾದಂದು ನಾನೂ ಹೋಗುವೆನು.

ರೋಗಿ:—ನಿನ್ನ ಅನುಭವವು ಇಷ್ಟಕ್ಕೆ ಸಾಕು; ಬೇಕೆಂದರೆ ಮೃತ್ಯು ಬರುವುದಿಲ್ಲವೆ ?

ನಭಾ:—ಅಮ್ಮ ! ಬರುವ ಕಷ್ಟವು ಎಂದಿದ್ದರೂ ತಪ್ಪದು, ನನಗೆ ಪ್ರಾಪ್ತವಾಗಬೇಕಾಗಿದ್ದ—ಭಗವತ್ಸಂಕಲ್ಪದಂತೆ ಬರಬೇಕಾಗಿದ್ದ—ವಿರೂಪವೇನೋ ಬಂದುಬಿಟ್ಟಿತು. ಇಂದು ಸತ್ತರೆ, ಬರುವ ಲಾಭವೇನು ? ಮುಂದೆ ಸತ್ತರೆ, ಆಗುವ ನಷ್ಟವೇನು ? ಈಗ ಸತ್ತಮಾತ್ರಕ್ಕೆ ಅನುಭವವು ತಪ್ಪಿಹೋದೀತೆ ?

ರೋಗಿ:—ಈಗಲೇ ಸಾಯಿ. ಅದೇ ಒಳ್ಳೆಯದು.

ನಭಾ:—ಹೇಗೆ ?

ರೋಗಿ:—ಮಗು ! ಕಾಲವು ಕೆಟ್ಟು ಹಾಳಾಗಿದೆ. ಎಲ್ಲೆಲ್ಲಿಯೂ ದುರಾಚಾರವು ಹೆಚ್ಚಿ, ಮಾನ, ಕೀರ್ತಿಗಳು ಉಳಿವಂತಿಲ್ಲ. ವೃಥಾ ದುಷ್ಕರ ಅಪವಾದಕ್ಕೆ ಸಿಕ್ಕಿ ನರಳಬೇಕಾಗುವುದು.

ನಭೆಗೆ ಮುಂದೆ ದುಃಖವು ತಡೆಯಲಾರದುದಾಗಿ ಕಂಡುಬಂದಿತು. ತಾಯಿಯ ಮುಖವನ್ನೇ ನೋಡುತ್ತ ಗದ್ಗದಕಂಠದಿಂದ ಹೇಳಿದಳು;—"ಅಮ್ಮಾ ! ನಿನ್ನ ನುಡಿಗಳೆಲ್ಲವೂ ನಿಜವೇ ಆದರೂ, ನಿನ್ನ ಅಂತ್ಯಕಾಲದ ಆಶೀರ್ವಾದದಿಂದ ಈ ನಿನ್ನ ಮಗಳು ಸನ್ಯಾಸಿನಿ ! ಚಿರಸನ್ಯಾಸಿನಿ ! ಇವಳು ಇನ್ನು ಮುಂದೆ ಸ್ವಸುಖಾಭಿಲಾಷೆಯಿಂದ ವಿಷಯೋಪಭೋಗಗಳಿಗೆ ಸ್ವಲ್ಪವಾದರೂ ಕಂಬನಿಗರೆಯುಳು. ಮನವನ್ನು ಲೋಭಾದಿಗಳಿಗೆ ವಶಪಡಿಸಿ ಕರ್ತವ್ಯವಿಮುಖಳಾಗುವುದಿಲ್ಲ. ಪ್ರಮಾಣ ಮಾಡುತ್ತೇನೆ.

" ಅಮ್ಮಾ! ಸತ್ಯದಲ್ಲಿ ಬಲವೂ, ಧರ್ಮದಲ್ಲಿ ಜಯವೂ, ಜ್ಞಾನದಲ್ಲಿ ವೈರಾಗ್ಯವೂ, ವೈರಾಗ್ಯದಲ್ಲಿ ಭಕ್ತಿಯೂ, ಭಕ್ತಿಯಲ್ಲಿಯೇ ನಿತ್ಯಮುಕ್ತಿಸುಖವೂ ಇರುವ ಪರ್ಯಂತ, ನಿನ್ನ ಮಗಳು ಇಹಸುಖಕ್ಕೆ ಮನವನ್ನು ಕೊಡಳೆಂದು ಇಂದು ಭರವಸೆಯನ್ನು ಕೊಡಬಲ್ಲಳು. ಕುಲ, ಕೀರ್ತಿ, ಧರ್ಮಾದಿಗಳಿಗೆ ಎಷ್ಟು ಮಾತ್ರಕ್ಕೂ ಅಪಮಾನವನ್ನು ತಾರಳು. ನೀನು ನಿನ್ನ ಮಾರ್ಗವನ್ನು ಸುಗಮವನ್ನಾಗಿ ಮಾಡಿಕೊ! ಈಗ ನಾನು ಸಾಯಲಾರೆ. ಮುಂದೆ ಅಂತಹ ಸಂದರ್ಭವು ಬಂದಾಗ ಸಾಯುತ್ತೇನೆ. ದೇವರ ಚಿತ್ತದಲ್ಲಿದ್ದಂತಾಗಲಿ; ಬಂದುದನ್ನೆಲ್ಲಾ ಅನುಭವಿಸುತ್ತೇನೆ. ಈಗ ಇದಕ್ಕೂ ಹೆಚ್ಚಿಗೆ ಹೇಳಲಾರೆ.

ರೋಗಿ:-- ಹಾಗಾದರೆ ನಾನು ಹೋದಮೇಲೆ ನಿನ್ನ--ಗತಿ ?

ಸಭಾ:— ನನಗೆ ಪ್ರಾರಬ್ಧವೊಂದಲ್ಲದೆ ಮತ್ತೆ ಗತ್ಯಂತರವಿಲ್ಲ. ನಿರಾಲೋಚನೆಯಿಂದ ನೀನು ಹೊರಡು.

ರೋಗಿಯು ಶೋಕಾಧಿಕ್ಯದಿಂದ “ ಹಾ! ಹಾಳುದೈವವೇ! ಕಣ್ಣಿಲ್ಲವೆ? ಅಯ್ಯೋ! ಮಗು! ನನ್ನ ಸಭಾ! ಏನುಮಾಡುವೆ?” ಎಂಬ ಪ್ರಲಾಪದೊಡನೆಯೇ ಇಹಲೋಕವನ್ನು ಬಿಟ್ಟು ಹೋದಳು.

ಇವಳ ಅಂತ್ಯಕಾಲದ ಆರ್ತಧ್ವನಿಯಿಂದ ಮನೆಯ ಅಂಗಳವೇ ಪ್ರತಿಧ್ವನಿತವಾಯಿತು. ಸಭೆಯು ಸತ್ತುಬಿದ್ದಿದ್ದ ತಾಯಿಯನ್ನು ನೋಡಿ, ಮುಂದಿನ ಕಾರ್ಯಕ್ರಮವನ್ನು ಕುರಿತು ಆಲೋಚಿಸತೊಡಗಿದಳು. ಸಭೆಯು ಸ್ತ್ರೀಯಾದರೂ ಸಾಧಾರಣಸ್ತ್ರೀಯರಂತೆ ಬಡಿದುಕೊಳ್ಳದೆ ಮನಸ್ಸನ್ನು ಘಟ್ಟಿಮಾಡಿಕೊಂಡು ತನ್ನ ದುರ್ಗತಿಯನ್ನು ಕುರಿತು ದುಃಖಿಸುವುದನ್ನು ಕಡೆಗಿಟ್ಟು ಮೃತಳ ದಹನಸಂಸ್ಕಾರಕ್ಕೆ ಮುಂದೇನುಮಾಡಬೇಕೆಂದು ಆಲೋಚಿಸತೊಡಗಿದಳು. ರೋಗಿಯ ಆಕ್ರಂದನವನ್ನು ಕೇಳಿದ ನೆರೆಮನೆಯ ವೃದ್ಧಳೊಬ್ಬಳು ಸಭೆಯ ಮನೆಗೆ ಓಡಿಬಂದು, ಅವಳ ಸ್ಥಿತಿಯನ್ನು ನೋಡಿ, ಕನಿಕರದಿಂದ ಕೇಳಿದಳು:— “ಸಭಾ! ನಿಮ್ಮ ಅಮ್ಮನು ಹಾಗೇಕೆ ಕೂಗಿಕೊಂಡಳು? ವರ್ತಮಾನವೇನು ?”

ಸಭಾ:— ಏನೆಂದು ಹೇಳಲಿ? ತಾಯಿ! ಅಮ್ಮನು ಅಳಿದ ಅಳಿಯನಿಗೂ, ಅಳಿಯಲೊಲ್ಲದ ಮಗಳಿಗೂ ಅತ್ತು ಅತ್ತು ಸತ್ತಳು.

ವೃದ್ಧೆ;— ಏನು—ಏನು? ನಿಮ್ಮಮ್ಮನು ಸತ್ತಳೆ? ಅಳಿಯ, ಏನು? ಅರು, ನಿನ್ನ ಗಂಡ..................

ಸಭೆಯು ಉತ್ತರವಿಲ್ಲದೆ ಕಣ್ಣೀರು ತುಂಬಿದಳು.

ವೃದ್ಧೆಯ ಕಣ್ಣಿನಲ್ಲಿ ನೀರು ತುಂಬಿತು. ಅವಳು ಅನುಕಂಪದಿಂದ—“ಅಯ್ಯೋ! ಹೀಗಾಗಬಹುದೆ?” ಎಂದಳು.

ಸಭಾ:— ನನ್ನ ದುಷ್ಕರ್ಮವು ಹೀಗಿರುವಾಗ ಆಗಬಾರದೆಂದರೆ ಬಿಟ್ಟೀತೆ? ತಾಯಿ, ಈಗ ಅಳುತ್ತ ಕೂಡುವಂತಿಲ್ಲ ಈ ಸಮಯದಲ್ಲಿ ನನಗೆ ನೀವು ಸ್ವಲ್ಪ ಉಪಕಾರಮಾಡಲಾರಿರಾ?

ವೃದ್ಧೆ:—ಸಭಾ, ಇಂತಹ ಕಾಲದಲ್ಲಿ ಮಾಡುವುದು ಉಪಕಾರವೇ?

ಅದೇನು ಹೇಳು; ಅಗತ್ಯವಾಗಿ ಮಾಡುತ್ತೇನೆ.

ಸಭಾ:—ನನ್ನ ಚಿಕ್ಕಪ್ಪ ಶಂಕರನಾಥನ ಬಳಿಗೆ ಹೋಗಿ........

ವೃದ್ಧೆ:—ಆತನು ನಿಮ್ಮಮ್ಮನ ಜನ್ಮದ್ವೇಷಿ. ಅಂಥವನಿಂದ ನಿನಗೇನು ಸಹಾಯವಾದೀತು?

ಸಭಾ:—ದ್ವೇಷಾಸೂಯಾದಿಗಳನ್ನು ಸಾಧಿಸುವುದು ಆರಿಗೂ ಒಳ್ಳೆಯದಲ್ಲ. ನನಗಾರೂ ಅಹಿತರಿಲ್ಲ. ದಯೆಯಿಟ್ಟು ಆತನ ಬಳಿಗೆ ಹೋಗಿ, "ಅಪ್ಪಾ, ಇಂದು ನಿನ್ನ ಮಗಳು ಅನಾಥೆ; ಅನನ್ಯಗತಿಕಳಾಗಿ ನಿನ್ನ ಮರೆಹೊಕ್ಕಿರುವಳು. ಇಬ್ಬರೂ ದಯೆಯಿಟ್ಟು ಹಿಂದಿನ ದ್ವೇಷಗಳನ್ನೆಲ್ಲ ತೊರೆದು ಸಹಾಯ ಮಾಡಬೇಕೆಂದು ಬೇಡುವಳು." ಎಂದು ಹೇಳಿರಿ.

"ಆರಿಗೆ ಆವಕ್ಷಣಕ್ಕೇನು ಪ್ರಾಪ್ತವಾಗುವುದೋ ಬಲ್ಲವರಾರು? ಈ ಅಸ್ಥಿರವಾದ ಪ್ರಪಂಚದಲ್ಲಿ ಆವುದು ಸ್ಥಿರ? ಆದರೂ ಮೂಢನಾದ ಮಾನವನು ಹೊನ್ನು ಹೆಣ್ಣು ಮಣ್ಣುಗಳಿಗೆ ಮರುಳಾಗಿ ಆಚರಿಸಬಾರದ, ಸ್ಮರಿಸಲೂ ಯೋಗ್ಯವಲ್ಲದ ಕೃತ್ಯಗಳನ್ನು ಮಾಡಿ ಪಾಪಭಾಗಿಯಾಗುವನು. ಸಾವಿನಂಜಿಕೆಯಿಲ್ಲದವನು ಆವ ಧರ್ಮವನ್ನೂ ಆರ್ಜಿಸಲಾರನು. ಪ್ರತಿಕ್ಷಣದಲ್ಲಿಯೂ ಮೃತ್ಯುವು ಸನ್ನಿಹಿತವಾಗಿರುವುದೆಂದು ತಿಳಿದಿರುವನಿಂದಲೇ ಪ್ರಪಂಚಕ್ಕೇನಾದರೂ ಉಪಯೋಗವುಂಟು." ಇದನ್ನು ವಿಚಾರ ಮಾಡುತ್ತ ವೃದ್ಧೆಯು ಶಂಕರನಾಥನ ಮನೆಗೆ ಹೋದಳು. ಸ್ವಲ್ಪ ಹೊತ್ತಿನಲ್ಲಿ ಇಬ್ಬರೂ ಬಂದು ಮನೆಯ ತಲೆಬಾಗಿಲಲ್ಲೇ ನಿಂತರು. ಒಳ ಹೊಗಲಿಲ್ಲ.

ಸಭೆಯು ಎದ್ದು ನಿಟ್ಟುಸಿರನ್ನು ಬಿಟ್ಟು ಅಂಗವಸ್ತ್ರವನ್ನು ಸರಿಪಡಿಸಿಕೊಂಡು ಹೊರಟುಬಂದು ಬಾಗಿಲಲ್ಲಿಯೇ ನಿಂತಿದ್ದ ಚಿಕ್ಕಪ್ಪನ ಕಾಲುಗಳನ್ನು ಬಲವಾಗಿ ಹಿಡಿದು, ಅವುಗಳಮೇಲೆ ತಲೆಯನ್ನಿಟ್ಟು, ಕಣ್ಣೀರು ಸುರಿಸುತ್ತ—"ಅಪ್ಪಾ! ಸತ್ತಿರುವ ಅಮ್ಮನಮೇಲಿದ್ದ ದ್ವೇಷವನ್ನು ಇನ್ನು ನನ್ನ ಮೇಲಿಡಬೇಡ. ನಾನು ಪಾಪಿ! ಕ್ಷಮೆ ಬೇಡುವೆನು. ಇಂದು ನಾನು ನನ್ನ ಸರ್ವಸ್ವವನ್ನೂ, ಮಾತೃವನ್ನೂ ಕಳೆದುಕೊಂಡಿದ್ದರೂ, ಚಿರದುಃಖಿಯಾಗಿದ್ದರೂ ಹೃದಯವನ್ನು ಗಟ್ಟಿಮಾಡಿಕೊಂಡು ನಿನ್ನ ಕಾಲುಹಿಡಿದು ಬೇಡುತ್ತಿದ್ದೇನೆ. ಈಗ ನನಗೆ ನೀನೇ ದಿಕ್ಕು; ಈ ಶವವನ್ನು ಸಾಗಿಸಲು

ಬೇಕಾದುದನ್ನು ನೀನೇ ಮಾಡಬೇಕು." ಎಂದು ಪ್ರಾರ್ಥಿಸಿಕೊಂಡಳು.

ಶಂಕರ:—ನಡೆದ ಕಾರ್ಯಕ್ಕೆ ಮಿಡುಕಿ ಫಲವಿಲ್ಲ. ಸಂತೈಸಿಕೊ! ನಿನ್ನ ತಾಯಿಗೆ ನಾನೊಬ್ಬನೇ ಮೈದುನನಲ್ಲ; ಚಿದಾನಂದನೂ ಇರುವನು. ನಾನು ಬಹು ಅಸಮರ್ಥನಾಗಿರುವೆನು. ನನಗೆ ಅನುಕೂಲವಿಲ್ಲ.

ನಭಾ:—ನಾನೆಲ್ಲಿ, ಚಿದಾನಂದನೆಲ್ಲಿ? ಆತನು ಬರುವ ವರೆಗೂ ಈ ಶವವನ್ನು ಇಲ್ಲಿಡಲಾಗುವುದೆ? ಅನುಕೂಲವೆಂದರೇನು? ಹಣಕ್ಕಾಗಿ ಆಲೋಚಿಸಬೇಕಾಗಿಲ್ಲ.

ಶಂಕರ:—ಎಷ್ಟಿರುವುದು?

ನಭಾ:—"ಅಪ್ಪಾ! ಇಲ್ಲಿ ಇಪ್ಪತ್ತು ರೂಪಾಯಿಗಳಿವೆ. ಇಷ್ಟರಲ್ಲಿಯೇ ಕಾರ್ಯಗಳೆಲ್ಲವನ್ನೂ ನೆರವೇರಿಸಿರಿ." ಎಂದು ಹೇಳುತ್ತ ತಾಯಿಯ ತಲೆಗಿಂಬಿನಲ್ಲಿದ್ದ ರೂಪಾಯಿಯ ಗಂಟನ್ನು ಚಿಕ್ಕಪ್ಪನ ಕೈಯ್ಯಲ್ಲಿಟ್ಟಳು.

ಶಂಕರ:-ಇದೇನು, ಎರಡು ದಿನಗಳಿಗಾಗಬಹುದು; ಮುಂದಕ್ಕೊ?

ನಭಾ:—ಮುಂದಕ್ಕೆ ನೋಡಿಕೊಳ್ಳುವ. ಮೊದಲು ಇಂದಿನ ಕೆಲಸವು ನಡೆಯಲಿ.

ಶಂಕರನು ರೂಪಾಯಿಗಳನ್ನು ತೆಗದುಕೊಂಡು ಮನೆಗೆ ಹೋದನು. ಅಲ್ಲಿಂದ ಮುಂದೆ ಬ್ರಾಹ್ಮಣರಬಳಿಗೂ ಹೋದನು. ಅವನು ಹಿಂದಿರುಗುವುದರಲ್ಲಿ ಅವನ ಕಿರಿಹೆಂಡತಿಯು ಓಡಿಬಂದು, ನಭೆಯಮುಂದೆ ಕಣ್ಣೀರನ್ನು ಸುರಿಸುತ್ತ ನಿಂತಳು. ನಭೆಯು ಅವಳ ಆ ಅಶ್ರುವು ನಿಜಸಂತಾಪ ಸೂಚಕವಾದುದೆಂದು ನಂಬಿ ತನ್ನ ಕಷ್ಟಗಳನ್ನು ಹೇಳಲುಪಕ್ರಮಿಸಿದಳು. ಅದಕ್ಕವಳು "ನಭಾ! ಅತ್ತರೆ, ಸತ್ತವರು ಬರುವರೆ? ಏಕೆ ಅಳುವೆ! ಉಳಿವವರಾರು! ಎಲ್ಲರೂ ಸಾಯಬೇಕು. ಅಳಬೇಡ" ಎಂದು ಸಮಾಧಾನ ಪಡಿಸಿ ಒಳಗೆ ಕರೆತಂದಳು.

ನಭಾ:—ಅಮ್ಮ! ಅವಾವುದಕ್ಕೆಂದು ಅಳಲಿ?

ಚಿಕ್ಕಮ್ಮ:—ಅತ್ತರೆ ಕಷ್ಟಗಳು ತಪ್ಪುವುವೆ?

ನಭಾ:—ಹಣೆಯಲ್ಲಿ ಬರೆದಿರುವುದನ್ನೆಲ್ಲಾ ಅನುಭವಿಸಲೇಬೇಕು.

ಚಿಕ್ಕಮ್ಮ:—ನೀನು ಹುಟ್ಟಿದಂದಿನಿಂದಲೂ ನಮ್ಮ ವಂಶಕ್ಕೆ ಕಷ್ಟಗಳೇ ಬರುತಿವೆ. ಏನುಮಾಡುವುದು? ಕೆಲವರು ಹುಟ್ಟಿದವೇಳೆ.

ಇವರ ಸಂಭಾಷಣೆಯನ್ನು ಕೇಳುತಿದ್ದ ನೆರೆಮನೆಯ ವೃದ್ಧಳು "ಇದೇನಮ್ಮ? ಶರಾವತಿಬಾಯಿಯವರೆ! ಇಂತಹ ಸಂಕಟಕಾಲದಲ್ಲಿಯೂ ಒಂದಾದರೂ ಮೃದುವಾಕ್ಯವು ಬೇಡವೆ? ಅಯ್ಯೋ, ಪಾಪ! ಈ ಹುಡುಗಿಗೆ ಈ ವಯಸ್ಸಿನಲ್ಲಿ ಇಂತಹ ಅವಸ್ಥೆಯು ಪ್ರಾಪ್ತವಾಗಬಹುದೆ?" ಎಂದಳು.

ಶರಾವತಿಯು ಸಿಟ್ಟಿನಿಂದ "ಏನು! ಏನಿರೆ, ಅದು? ನಿಮ್ಮನ್ನೆಲ್ಲ ಕರಸಿದವರಾರು ? ಮೃದುವಾಕ್ಯವನ್ನು ಬಲ್ಲವರು ನೀವೇನೋ ? ಆ ಸುಟ್ಟ ಮೋರೆಯವಳು, ಈಗ ಉರಿದು ಬೂದಿಯಾಗುವ ಆ ಬಜಾರಿಯು, ಕೊಟ್ಟಿರುವ ಯಾತನೆಗಳನ್ನು ಸ್ಮರಿಸಿಕೊಂಡರೆ, ಮೈ ಉರಿದು ಹೋಗುವುದು. ಏನೋ ಹುಡುಗಿ-ಎಂದು ಬಂದರೆ, ಒಳ್ಳೇ ಮರ್ಯಾದೆಯನ್ನೇ ಕೊಟ್ಟಿರಮ್ಮ! ತಾವೇ ಸಭೆಗೆ ಬಂಧುಗಳು. ನಾವೇನು? ಸಭಾ! ನಾನು ಹೋಗಲೇನಮ್ಮ? ನಿನ್ನ ಹಿತಚಿಂತಕರಿವರೇ ಇದ್ದಾರಲ್ಲ." ಎಂದು ಕೇಳಿದಳು.

ಸಭಾ:—ಅಮ್ಮಾ ! ನಾನಿಂದು ನಿಸ್ಸಹಾಯಕಳು. ನಿಮ್ಮನ್ನೇ ಮರೆಹೊಕ್ಕಿರುವೆನು. ಅವರಿವರ ಮೇಲಿನ ಸಿಟ್ಟಿನಿಂದ ನನ್ನನ್ನು ಬಿಟ್ಟು ಕೊಡಬೇಡಿರಿ.

ಶರಾವತಿ:—ನ್ಯಾಯ! ಅದೀಗ ಒಪ್ಪತಕ್ಕ ಮಾತು. ಊರವರೆಲ್ಲರೂ ಬೇಕಾದುದನ್ನು ಹೇಳಲಿ. ನಮಗಿರುವ ಅಭಿಮಾನವು ಎಲ್ಲಿ ಹೋಗುವುದು?

ಇಷ್ಟುಹೊತ್ತಿಗೆ ಶವವನ್ನು ತೆಗೆದುಕೊಂಡು ಹೋಗಲು ಸಮಸ್ತವನ್ನೂ ಸಿದ್ಧಪಡಿಸಿ, ಶಂಕರನು ಒಳಹೊಕ್ಕು ಶವದ ಬಳಿಗೂ ಹೋದನು. ಶರಾವತಿಯು ಅಡ್ಡಕಟ್ಟಿ " ಏನು ಮಾಡುವಿರಿ ? ಆವಾಗಲೂ ದುಡುಕೇ! ನಿಮ್ಮ ಹಣೆಯ ಬರೆಹವೇ ಇಷ್ಟು! ಎಲ್ಲಾದರೂ ಒಂದೇ" ಎಂದು ಆರ್ಭಟಿಸಿದಳು.

ಶಂಕರ:—ಏನು! ನಾನು ಆತುರಿಸಿದುದೇನು?

ಶರಾವತಿ:—ಶವವನ್ನು ಮುಟ್ಟುವಿರಲ್ಲ; ಮುಂದಿನ ಕೆಲಸಗಳನ್ನು ನಡೆಯಿಸುವರಾರು?

ಶಂಕರ:—ಸದ್ಯಕ್ಕೆ ನಾನಲ್ಲದೆ ಮತ್ತಾರೂ ಇಲ್ಲ.

ಶರಾವತಿ:—ಯಾಕೆ? ಎಲ್ಲರೂ ಹಾಳಾದರೋ? ಆಲೋಚನೆಮಾಡಿ ಕೆಲಸಮಾಡಿರಿ, ದುಡುಕಬೇಡಿರಿ.-ತಾಳಿ.

ಶಂಕರ:—ಬಿಡಲಾಗುವುದಿಲ್ಲ; ಜನರಾದರೂ ಏನೆಂದಾರು? ಹಿಂದಾದರೂ ನಿಂದಿಸರೆ?

ಶರಾವತಿ.—ನಿಂದಿಸುವರ ನಾಲಿಗೆಯು ಹುಣ್ಣಾಗಲಿ; ಆದಾಯವಿಲ್ಲದ ಕೆಲಸಕ್ಕೆ ಎಂದೂ ಕೈಯೊಡ್ಡಲಾಗದು.

ನಭೆಯ ಹೃದಯವು ಕಳಚಿಬಿದ್ದಂತಾಯಿತು. ತಲೆತಿರುಗಲಾರಂಭವಾಯಿತು. ಕೈಕಾಲುಗಳು ತರತರನೆ ನಡುಗಿದುವು. ಮನಸ್ಸಿನ ಸ್ಥಿತಿಯನ್ನು ಹೇಳಲಾಗದಂತಾಯಿತು. ಆದರೂ ನಭೆಯು ಬಹುಕಷ್ಟದಿಂದ "ಅಮ್ಮಾ! ಆದಾಯವೆಂದರೆ ಅರ್ಥವೇನು," ಎಂದಳು.

ಶರಾವತಿ:— ಅರ್ಥವೊ, ಅನರ್ಥವೊ? ಕಷ್ಟಕ್ಕೆ ತಕ್ಕ ಫಲವು ದೊರೆಯಲೇ ಬೇಕು. ಹತ್ತುದಿನವೂ ಮೂರುಸಾರೆ ತಣ್ಣೀರಿನಲ್ಲಿ ಮುಳುಗಿ ಸಾಯಬೇಡವೆ?

ನಭಾ:—ಫಲವಿದ್ದೇ ಇರುವುದು. ಇಹದ ಫಲದಿಂದ ತೃಪ್ತಿಯಿಲ್ಲದಿದ್ದರೆ, ಪರದಲ್ಲಿ.............

ಶರಾವತಿ:—ನಿನ್ನ ಪರವನ್ನು ಸುಡು! ಇಲ್ಲಿ ಸತ್ತರೂ ಚಿಂತೆಯಿಲ್ಲ. ಪರ—ಅಂತೆ, ಪರ!"

ನಭೆಯು ಮಾತನಾಡಲಾರದೆ ನಿಟ್ಟುಸಿರು ಬಿಟ್ಟಳು.

ಶಂಕರ:—ಈಗ ಇಪ್ಪತ್ತು ರೂಪಾಯಿಗಳನ್ನು ಕೊಟ್ಟಿರುವಳು.

ಶರಾವತಿ:—ಅದೇನು, ಸುಟ್ಟುಬರುವುದರಲ್ಲಿ ಮುಗಿಯುವುದು.

ಶಂಕರ:—"ಮುಂದಿನ ಖರ್ಚಿಗೆ ನೋಡುವ!" ಎಂದು ಹೇಳಿರುವಳು.

ಶರಾವತಿ:—ನೋಡುವುದೇನು, ತೋಡುವುದು; ಸರಿಯಾದ ರೀತಿಯಲ್ಲಿ ಎಲ್ಲವೂ ವ್ಯವಸ್ಥೆಯಾಗದಿದ್ದರೆ, ಅದರ ಪ್ರಸ್ತಾಪವೇ ಬೇಡ; ನಡೆಯಿರಿ.

ಈ ಸಂಭಾಷಣೆಯನ್ನು ಕೇಳುತ್ತ, ಅಲ್ಲಿಯೇ ನಿಂತಿದ್ದ ನೆರಮನೆಯ ವೃದ್ಧಳು,ಧರ್ಮ, ದಯೆ, ದಾಕ್ಷಿಣ್ಯ, ಪರೋಪಕಾರ, ಔದಾರ್ಯಗಳೇ ಮೊದಲಾದ ಸದ್ಗುಣಗಳಿಗೆ ಜನ್ಮಸ್ಥಾನವೆನ್ನಿಸಿರುವ ಭಾರತಮಾತೆಯ ಉದರದಲ್ಲಿ ಇಂತಹ ದುಷ್ಟಸ್ತ್ರೀಯರು ಇನ್ನೂ ಇರುವುದಕ್ಕಾಗಿ ಚಿಂತಿಸಿ, ಬೆರ

ಗಾಗಿ, " ಇದೇನಮ್ಮ! ಇದು ನ್ಯಾಯವಾದ ವ್ಯಾಪಾರವೆ? ಈ ಮಾತನಾಡಲು ನಾಲಿಗೆ........" ಎಂತೆನ್ನುವಷ್ಟರಲ್ಲಿಯೇ ಶರಾವತಿಯು ಹುಬ್ಬುಗಳನ್ನು ಗಂಟುಹಾಕಿ ಹಲ್ಲು ಕಡಿಯುತ್ತ, " ಬಲ್ಲೆನಮ್ಮ, ಬಲ್ಲೆ- ನಿಮ್ಮ ವಿವೇಕವನ್ನು:—ಹೊರಡಿರಿ, ನಮ್ಮ ಹಣೆಯ ಬರಹ! ಮಾತನಾಡಲೇನು ಖರ್ಚು? ಕೈಯಲ್ಲಿ ಕೆಲಸ ಮಾಡಿದರೆ, ತಿಳಿದೀತು. ಈ ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಂಡು ನೀವೇ ಕೆಲಸ ನಡೆಯಿಸಿ; ನೋಡುವ. " ಎಂದು ಕೂಗಿದಳು. ವೃದ್ಧಳು ಮುಂದೆ ಮಾತಾಡಲಿಲ್ಲ.

ಸಭೆಗೆ ಆಗ ಉಂಟಾದ ಸಂಕಟವನ್ನು ವಿವರಿಸಿ ಹೇಳುವಂತಿರಲಿಲ್ಲ. ಬಿಸಿಬಿಸಿಯಾದ ಕಣ್ಣೀರನ್ನು ಸುರಿಸುತ್ತ, ಕಂಪಿತ ಸ್ವರದಿಂದ "ಅಮ್ಮ! ನನಗೆ ಅರ್ಥಾರ್ಜನೆಯಿಂದ ಫಲವೇನು ? ಸನ್ಯಾಸಿನಿಯಾಗುವ ನನಗೆ ಒಂದು ಹಿಡಿ ಪಿಂಡ, ಒಂದು ತುಂಡು ಬಟ್ಟೆಯಾದರೆ ಸಾಕು. ಉಳಿದ ಸರ್ವಸ್ವವೂ ನಿಮ್ಮದೇ ಆಗಿದೆ. " ಎಂದಳು-

ಶಂಕರ:—ಎಂದಿದ್ದರೂ ಹುಡುಗಿಯು ನಮ್ಮವಳು.

ಶರಾವತಿ:—ಈಗ ಹಾಗೆಯೇ! ಆಮೇಲೆ ಅವಳಾರೋ-ನಾವಾರೋ! ಅದೆಲ್ಲ ಆಗದು. ಏನಮ್ಮ! ಎಲ್ಲವನ್ನೂ ಬರೆದುಕೊಟ್ಟರೆ, ಕೆಲಸ ಮಾಡುವರು; ಇಲ್ಲವಾದರೆ ಆಗದಮ್ಮ! ಈ ಕಲಿಕಾಲದ ವೈರಾಗ್ಯವನ್ನು ನಾನು ಬಲ್ಲೆ.

ಸಭೆಯು ಬಹುಕಷ್ಟದಿಂದ ಹೃದಯದ ವೇಗವನ್ನು ತಡೆದು ಸ್ಥಿರಭಾವದಿಂದ ಹೇಳಿದಳು:— " ಅಮ್ಮ ! ಕ್ಷಣಿಕವೈರಾಗ್ಯವು ನನಗೆ ತಿಳಿಯದು; ಮಾವಿನಬೀಜದಿಂದ ಬೇವಿನ ಗಿಡವು ಹುಟ್ಟುವುದಿಲ್ಲ. ಮಾವು ಮಾವೇ; ಬೇವು ಬೇವೇ; ನನ್ನ ತಂದೆಯಲ್ಲಿದ್ದ ದೃಢಸಂಕಲ್ಪ, ಧೈರ್ಯಾದಿಗಳಲ್ಲಿ ಸ್ವಲ್ಪವಾದರೂ ನನ್ನಲ್ಲಿ ಇಲ್ಲದೆ ಇಲ್ಲ. ನಾನು ಹುಡುಗಿಯೆನಿಸಿಕೊಂಡರೂ ಬೊಂಬೆಯಾಟವಾಡುವ ಮಗುವಲ್ಲ. ತಕ್ಕಮಟ್ಟಿಗೆ ತಿಳಿದುಕೊಳ್ಳುವಷ್ಟು ವಯಸ್ಸಾಗಿದೆ. ಇಂದಿನ ಕಾರ್ಯವು ನಡೆಯಲಿ; ಕಾಗದ ಪತ್ರಗಳನ್ನು ಮಾಡಿಕೊಡುವೆನು. ಆಲೋಚಿಸಬೇಡಿರಿ. ಅಮ್ಮನ ಆಸ್ತಿಯೆಲ್ಲವೂ ನಿಮ್ಮದಾಗುವುದೇ ಹೊರತು ನನ್ನದಾಗದು. "

ಶರಾವತಿಯು ಸಮ್ಮತಿಸಿದಳು, ಹಣವನ್ನು ಸಾಗಿಸಿದರು. ವೃದ್ಧೆಯು ಆಶ್ಚರ್ಯಚಕಿತಳಾಗಿ ಈ ಪೃಥ್ವಿಯಲ್ಲಿ ದ್ರವ್ಯವು ಎಂತಹದೆಂಬುದನ್ನು ಪ್ರತ್ಯಕ್ಷವಾಗಿ ಗ್ರಹಿಸಿ ಹೊರಟುಹೋದಳು. ಶರಾವತಿಯೂ ಮಗಳನ್ನು ಮನೆಗೆ ಕರೆದುಕೊಂಡು ಹೋದಳು.

ಸಹೃದಯರೆ! ಕ್ಷಮಿಸಿರಿ, ಕಥಾರಂಭದಲ್ಲಿಯೇ ನಿಮ್ಮ ಹೃದಯವನ್ನು ಶೋಕಮಯವಾಗಿ ಮಾಡಿದ ನಮ್ಮ ತಪ್ಪನ್ನು ಕ್ಷಮಿಸಿರಿ. "ಶ್ರೇಯಾಂಸಿ ಬಹುವಿಘ್ನಾನಿ." ಎಂಬಂತೆ ಶ್ರೇಯಸ್ಸು ಬರಲು ಅನೇಕ ವಿಘ್ನಗಳಿದ್ದೇ ಇರುವುವು. ವಿಘ್ನಗಳೆಲ್ಲವನ್ನೂ ತಳ್ಳಿ, ಹಿಡಿದ ಕಾರ್ಯವನ್ನು ಸಾಧಿಸುವವರೇ ಧೀರರು. ಅವರೇ ಶೂರರು. ಅವರೇ ಮಹಾತ್ಮರು. ವಾಚಕರೆ! ಇಂತಹ ವಿಷಮಯಬೀಜವೂ, ಬೀಜದಾತೃವಾದ ವೃಕ್ಷವೂ, ಭಾರತವರ್ಷದಲ್ಲಿ ಕಡಿಮೆಯಾಗಿಲ್ಲ. ಇಂತಹ ವಿಷವೃಕ್ಷವನ್ನು ಬೆಳೆಯಿಸುತಿರುವ ಎಷ್ಟೋ ಗೃಹಗಳಿವೆ. ಇಂತಹ ಗೃಹಗಳಲ್ಲಿ ಏನಾಗದು? "ಉತ್ತಮಳಾದ ಸ್ತ್ರೀಗಿಂತ ಉತ್ತಮವಾದ ವಸ್ತುವಿರದಂತೆ ಕೆಟ್ಟ ಹೆಂಗಸಿಗಿಂತ ಕೆಟ್ಟವಸ್ತುವು ಈ ಪೃಥ್ವಿಯಲ್ಲಿ ಇನ್ನೊಂದಿರದು." ಎಂಬ ಪ್ರಶ್ನೆಗೆ ಸಮಂಜಸವಾದ ಉತ್ತರವು ನಿಮ್ಮ ಅನುಭವದಲ್ಲಿ ಕಂಡು ಬಂದಿರುವುದೆ? ಅದರಂತಹ ಕೆಟ್ಟವಸ್ತುವು, ಅದರಂತಹ ನೀಚಪದಾರ್ಥವು ಈ ಪೃಥ್ವಿಯಲ್ಲಿಯೇ ಇರಲಾರದೆಂದು ನಮಗೆ ತೋರುವುದು. ಆ ವಸ್ತುವಿನ ಹೃದಯವು ಪಾಷಾಣ; ಮನಸ್ಸೂ ಪಾಷಾಣ. ಆ ಪಾಷಾಣಮಯ ವಸ್ತುವಿನ ಅನಿರ್ವಚನೀಯ ಕೃತ್ಯಗಳಿಂದಲೇ ಎಷ್ಟೋ ಸಂಸಾರ, ಎಷ್ಟೋ ಮನೆ, ಎಷ್ಟೋ ಮನೆತನ, ಎಷ್ಟೋರಾಜ್ಯ, ಎಷ್ಟೋ ದೇಶಕೋಶಗಳು ನಾಶವಾಗಿ ಹೋಗಿವೆ. ಅದರಿಂದಲೇ, ಅವತಾರ ಪುರುಷನಾದ ಶ್ರೀರಾಮಚಂದ್ರನು ಕೂಡ ವನವಾಸವನ್ನು ಅನುಭವಿಸಿದನು. ಎಲೆ, ಅಬಲಾ ದೌರ್ಜನ್ಯವೆ, ನಿನ್ನ ಪ್ರಬಲತರ ಶಾಸನಕ್ಕಾಗಿ ಧಿಕ್ಕಾರ,ಧಿಕ್ಕಾರ, ಧಿಕ್ಕಾರ!!!

## ತೃತೀಯ ಪರಿಚ್ಛೇದ.

### (ಕೌತುಕವ್ಯಾಪಾರ)

**ನಭೆಯು** ಅದೃಷ್ಟಸೂರ್ಯನು ಅಸ್ತಂಗತನಾದನೆಂಬುದನ್ನು ಸೂಚಿಸುವಂತೆ ದಿನನಾಥನು ಅಸ್ತನಾದನು. ನಭೆಯು ಚಿಂತಾಂಗನೆಯ ಸಹವಾಸದಿಂದ ಮಲಿನವಾಗುತ್ತಿದ್ದುದನ್ನು ತೋರ್ಪಡಿಸಲು ದಿಶಾಂಗನೆಯು ಕೃಷ್ಣವರ್ಣವನ್ನು ತಾಳಿದಳು. ನಭೆಯ ತಾಯಿಯು ಮೃತಳಾಗಿ ಇಂದಿಗೆ ಹತ್ತು ದಿನಗಳು. ಒಂಭತ್ತು ದಿನಗಳು ಕಳೆದುಹೋಗಿವೆ. ರಾತ್ರಿ ಒಂಭತ್ತು ಘಂಟೆಗಳು ಹೊಡೆದು ಹೋಗಿದ್ದರೂ ಶಂಕರನಾಥನು ಮನೆಗೆ ಬಂದಿರಲಿಲ್ಲ. ಶರಾವತಿಯು ಪತಿಗೆ ಪ್ರಸಾದವನ್ನು ಅನುಗ್ರಹಿಸುವುದಕ್ಕಾಗಿ ಬಾಗಿಲಿನಲ್ಲಿಯೇ ನಿಂತಿರುವಳು. ನಭೆಯು ಅಂಗಳದ ಹಿಂಭಾಗದಲ್ಲಿದ್ದ ಕಿರುಮನೆಯಲ್ಲಿ ಕುಳಿತಿರುವಳು. ಆಪಳ ಅಂಗದಲ್ಲಿ ಆಭರಣವಿದ್ದ ಕುರುಹಾಗಲೀ, ಉತ್ಸಾಹ-ಶಾಂತಿಗಳಾಗಲೀ, ಕಂಡುಬರುತಿರಲಿಲ್ಲ. ತಾಯಿಯು ಮೃತಳಾದ ಮೂರನೆಯ ದಿನವೇ ಎಲ್ಲ ಸಂಪತ್ತನ್ನೂ ವಿಕ್ರಯಪತ್ರದ ಮೂಲಕ ಶರಾವತಿದೇವಿಯವರಿಗೆ ಸಮರ್ಪಿಸಿಯಾಯಿತು. ಮನೋನಿಗ್ರಹವೊಂದೇ ಅವಳ ಆಭರಣಸರ್ವಸ್ವವಾಗಿತ್ತು.

ವಾಚಕ ಮಹಾಶಯ! ಧನಪಿಶಾಚಗ್ರಸ್ತರಿಗೆ ಮಾತಾ, ಪಿತೃ, ಗುರು, ಭ್ರಾತೃ, ಬಂಧುಗಳಲ್ಲಿ ಅವಶ್ಯಕವಾಗಿರಬೇಕಾದ ಮರ್ಯಾದೆಯಾಗಲೀ ನ್ಯಾಯಾನ್ಯಾಯ ವಿಮರ್ಶನಶಕ್ತಿಯಾಗಲೀ ಇರುವುದೇನು ? ಹಣದ ಮಹಾತ್ಮೆಯಿಂದಲೇ, ಅಪರಾಧಿಯು ನಿರಪರಾಧಿ; ಮೂಢನು ವಿದ್ಯಾವಂತ. ಧನಮಹಿಮೆಯು ಹೀಗಿರುವುದರಿಂದಲೇ "ಹಣವೆಂದರೆ ಹೆಣವೂ ಬಾಯ್ಬಿಡುವದು." ಎಂದು ಹಿರಿಯರಾಡುವರು.

ಇಂದಿನವರೆಗೂ ನಭೆಯ ತಾಯಿಗೆ ಅಪರಕ್ರಿಯೆಗಳು ಸಾಂಗವಾಗಿ ನಡೆದಿವೆ. ಇಷ್ಟಾದರೂ, ನಭೆಯ ವಿಷಯವಾದ ಪ್ರಸ್ತಾಪವು ಇನ್ನೂ ನಡೆದಿಲ್ಲ. ವಿಷವೃಕ್ಷವನ್ನು ಬಹು ಎಚ್ಚರದಿಂದ ಕಾಪಾಡಬಲ್ಲವಳಾದ ಶರಾವತಿಯ ಹೃದಯದಲ್ಲಿ, ನಿಗೂಢವಾಗಿದ್ದ ಆ ಬಲವದುದ್ವೇಶವು ಇಂದು

ಹೊರಹೊರಡಬೇಕಾಗಿದೆ. ಅದೇನು? ಸಭೆಯು ಶಿರೋಮುಂಡನಾದಿಕ್ರಿಯೆ ಗಳ ವಿಚಾರ; ಸಭೆಯು ಇದರ ಪರಿಣಾಮವನ್ನು ತಿಳಿಯಲು ಆತುರದಲ್ಲಿ ರುವಳು. ಶರಾವತಿಯು ಬೀದಿಯನ್ನು ನೋಡುತ್ತಿರುವಳು; ಶಂಕರ ನಾಥನು ಎಲ್ಲೆಲ್ಲಿಯೋ ಅಲೆದು ಮನೆಗೆ ಬಂದನು; ಹೊಸಲಿನೊಳಗೆ ಕಾಲಿಡುವುದರೊಳಗಾಗಿ ಶರಾವತಿಯು ತನ್ನ ಗೃಧ್ರದೃಷ್ಟಿಯಿಂದ ನೋಡಿ, "ಅಯ್ಯೋ, ಊರೆಲ್ಲ ಸುತ್ತಿಬಂದುದು; ನಿಮ್ಮ ಹಣೆಯಬರೆಹವೇ ಅಷ್ಟು!" ಎಂಬ ಕಠೋರ ವಾಗ್ಬಾಣಗಳನ್ನು ಪ್ರಯೋಗಿಸಿದಳು.

ಶಂಕರನಾಥನು ಕಿರುನಗೆಯಿಂದಲೇ ಪತ್ನಿಯ ಮುಖವನ್ನು ನೋಡಿ, " ಏನು, ಯಜಮಾನಿಯವರಿಗೆ ಮಹದಾಗ್ರಹವೆಂದು ತೋರು ವುದು? ಈ ದಿನ ಇಷ್ಟು ಕೋಪಕ್ಕೆ ಯಾರು ಕಾರಣರು? "

ಶರಾವತಿ:—ನನಗೆ ಯಾರಮೇಲೆಯೂ ಕೋಪವಿಲ್ಲ. ಯಾರ ಮೇಲೆ ಕೋಪಿಸಿಕೊಳ್ಳುವ ಅಧಿಕಾರವುತಾನೇ ನನಗಿರುವುದು? ನಿಮ್ಮ ಕೆಲಸವನ್ನು ನೀವು ಮಾಡಿಕೊಂಡುಹೋಗಿರಿ, ಯಾರಿಗೇನು? ಅನುಭವಿ ಸುವರು ನೀವೇ.

ಶಂಕರನಾಥನು ನಕ್ಕು; ''ಇಷ್ಟು ಕೋಪವೇಕೆ? ಹೆಸರಿಗೆ ತಕ್ಕಂತೆ ಪ್ರತಿವಾಕ್ಯವೂ ತೀಕ್ಷ್ಣಶರವಾಗಿಯೇ ಪರಿಣಮಿಸುತಿರುವುದಲ್ಲಾ?

ಶರಾವತಿ:—ಅಹುದು, ನಾನೇನೋ ಅಂತಹಳೇ ಸರಿ. ತಿಳಿದು ತಿಳಿದು, ನನ್ನ ಹತ್ತಿರ ಹಾಸ್ಯ ವಿನೋದಗಳೇಕೆ ?

ಶಂಕರ:—ನೀನು ನನ್ನಲ್ಲಿ ಆಗ್ರಹಮಾಡುವುದೂ, ನಾನು ನಿನ್ನೊ ಡನೆ ಹಾಸ್ಯಮಾಡುವುದೂ ಸಹಜವೇ ಸರಿ.

ಶರಾವತಿ:—ನನಗೆ ನಿಮ್ಮ ಹಾಸ್ಯವು ಬೇಕಾಗಿಲ್ಲ.

ಶಂಕರ:—ಏಕೆ ?

ಶರಾವತಿ:—ಹೇಳಿದ ಮಾತಿಗೆ ಬೆಲೆಯಿದ್ದರಲ್ಲವೆ ?

ಶಂಕರನಾಥನು ಬೆನ್ನುತಟ್ಟಿ ಹೇಳಿದನು:—" ಸರಿ, ಸರಿ. ಈಗ ತಿಳಿಯಿತು. ಇಂದು ನಾನು ನಿನ್ನಲ್ಲಿ ನಿಜವಾಗಿಯೂ ಅಪರಾಧಿಯಾಗಿರು ವೆನು. ನಿನ್ನ ಮಾತಿನಪ್ರಕಾರ ಜಾಗ್ರತೆಯಾಗಿ ಬರಬೇಕಾಗಿದ್ದಿತು. ಆದರೆ, ನಾಳಿನ ಕಾರ್ಯಗಳಿಗಾಗಿ ಸಾಮಗ್ರಿಗಳನ್ನು ತರಲು ಹೋಗಿದ್ದೆ

ನಾದಕಾರಣ ಸಾವಕಾಶವಾಗಿದೆ. ಕ್ಷಮೆಯಿರಲಿ. ಏನುಬೇಕೆಂದಿದ್ದರೂ ಅದನ್ನು ಈಗ ಹೇಳಬಹುದು. ನಡೆಯಿಸಿಕೊಡಲು ಸಿದ್ಧನಾಗಿರುತ್ತೇನೆ. ”

ಶರಾವತಿಯು ಮುಖವನ್ನು ತಿರುಗಿಸಿಕೊಂಡು ಹೇಳಿದಳು:-“ನಾನು ಹೇಳುವುದೇನು ? ನೀವು ಕೇಳುವುದೇನು ? ಹೇಳಿದುದಕ್ಕಾಯಿತಲ್ಲ ?”

ಶರಾವತಿಯ ಮಾತಿಗೆ ಶಂಕರನಾಥನು ಭ್ರಾಂತನಾಗಿ “ ಇಲ್ಲ, ನೀನು ಹೇಳಿದಂತೆಯೇ ನಡೆಯಿಸಿಕೊಡುತ್ತೇನೆ. ” ಎಂದು ಹೇಳುತ್ತ, ಪಡಸಾಲೆಯಲ್ಲಿದ್ದ ಒಂದು ಕಿರುಮನೆಗೆ ಕರೆದುಕೊಂಡು ಹೋದನು.

ನಡುವೆಯಲ್ಲಿಯೇ ನಿಂತು, ಈ ವ್ಯಾಪಾರವನ್ನು ನೋಡುತ್ತಿದ್ದ ಸಭೆಯು ಮನಸ್ಸಿನಲ್ಲಿಯೇ ಆಲೋಚಿಸಿದಳು:—“ಏನು ? ಯಾರಲ್ಲಿ ಇಷ್ಟು ಆಗ್ರಹ ? ಸತಿಯು ಸರ್ವಸ್ವವಾದ ಪತಿಯಲ್ಲಿಯೆ ? ಪರದೇವತಾ ಸ್ವರೂಪನಾದ ಪತಿಯಲ್ಲಿ ಇಂತಹ ಆಗ್ರಹವೆ ? ರಾಮ ! ರಾಮ !! ಪ್ರಪಂಚದ ಸ್ಥಿತಿಯು ಎಷ್ಟು ಕಠೋರ ? ಇಂದಿನ ಆಚರಣೆಗಳು, ಮಾತುಗಳು, ಇವನ್ನು ನೋಡಿದರೆ ನನಗೇನೋ ಶಂಕೆಯಾಗುತ್ತಿದೆ. ಇಂದು ಇವರು ನನ್ನ ವಿಷಯವನ್ನೇ ಕುರಿತು ಚರ್ಚಿಸಬಹುದು ; ಮಾತನಾಡಬಹುದು. ಆದುದರಿಂದ ನಾನು ಇವರ ಸಂಭಾಷಣೆಯನ್ನು ಕೇಳಲೇಬೇಕು. ” ಎಂದು ನಿಶ್ಚೈಸಿ ಬಾಗಿಲಿನಬಳಿಯಲ್ಲಿಯೇ ನಿಂತು, ಕೇಳಲು ಪಕ್ರಮಿಸಿದಳು. ಅವರ ಸಂಭಾಷಣೆಯು ಈ ಪರಿಯಾಗಿದ್ದಿತು.

ಶಂಕರ:—ಆಹುದು. ಒಂಭತ್ತು ದಿನಗಳು ಕಳೆದುಹೋದುವು, ಆದರೇನು ?

ಶರಾವತಿ:—ಮುಂದಿನ ಕೆಲಸಕ್ಕೆ ಏನು ಏರ್ಪಡಿಸಿರುವಿರಿ?

ಶಂಕರ:—ಮುಂದಿನ ಕೆಲಸವೇನು ?

ಶರಾವತಿ:—ಹುಡುಗಿಯ ವಿಚಾರ.

ಶಂಕರ:—ಹುಡುಗಿಯ ವಿಚಾರವೇನು ?

ಶರಾವತಿ:—ಅಲಂಕಾರ ವಿಸರ್ಜನೆ.

ಶಂಕರ:—ಉಳಿದಿರುವುದೇನು ? ಮೈಮೇಲಿದ್ದುದೆಲ್ಲವನ್ನೂ ತೆಗೆದಿದೆ.

ಶರಾವತಿ:—ತಲೆಯೊ ?

ಶಂಕರನಾಥನು ಭ್ರಾಂತನಾದನು. ಅವನ ತಲೆ ತಿರುಗಲಾರಂಭ ವಾಯಿತು. ಸುಮ್ಮನೆ ಕುಳಿತನು.

ಶರಾವತಿ:—ಸುಮ್ಮನೆ ಕುಳಿತರೆ ಅರ್ಥವೇನು ?

ಶಂಕರ:—ಹಾಗೆಯೇ ಇರಕೂಡದೇಕೆ ?

ಶರಾವತಿಯು ಕೈಯಿಂದ ಹಣೆಯನ್ನು ಕುಟ್ಟಿಕೊಳ್ಳುತ್ತ "ನಿಮ್ಮ ಆಚಾರವು ಹಾಳಾಗಲಿ ! ದೇವರು ನಿಮಗೇಕೆ ಇಂತಹ ಬುದ್ಧಿಯನ್ನು ಕೊಟ್ಟನೊ? ಗಂಡನಿಲ್ಲದವಳಿಗೆ ಹಾಳು ಮೈಲಿಗೆ ಕೂದಲು ಬೇರೆ ಕೇಡು."

ಶಂಕರ:—ಪಾಪ ! ಹುಡುಗಿಗೆ ಇನ್ನೂ ಚಿಕ್ಕವಯಸ್ಸು. ಅದರಲ್ಲಿಯೂ—ತಾಯಿ, ಗಂಡ-ಇಬ್ಬರ ವಿಯೋಗದುಃಖದಿಂದ ಪರಿತಪಿಸುತಿರುವಳು. ಅವಳಿಗೆ ಈ ಕ್ರೂರಶಿಕ್ಷೆಯನ್ನೂ ಕೊಡುವುದೆಂತು ?

ಶರಾವತಿ:—ಬೇಡವೆಂದು ಹೇಳುತ್ತೀರಿ, ನೀವು ಗಂಡಸರು. ಹೇಗೆ ಬೇಕಾದರೂ ಮಾಡಬಹುದು. ನಮಗೆ ಒಳಗೆ ಬೇಗೆಹತ್ತಿಕೊಂಡು ಬೇಯುವುದಲ್ಲ ?

ಶಂಕರ:—ಬೇಯುವುದೆಲ್ಲಿ ? ಬೇಗೆಯಾಗುವುದು ?

ಶರಾವತಿ:—ತಿರುತಿರುಗಿ ಯಾವುದೆಂದು ಕೇಳುವಿರಾ ? ಹೆಂಗಸಿಗೆ ಅಲಂಕಾರವಾವುದು ? ಕೂದಲಲ್ಲವೆ ? ಈಗಿನ ಅಂಗಸೌಷ್ಟವ, ವಯಃಪ್ರಾಬಲ್ಯಗಳಿಗೆ ಕೇಶಸೌಂದರ್ಯವೂ ಸೇರಿದರೆ, ಮುಂದಿನ ವಿಲಾಸಗಳು ಹೇಗೆ ತಿರುಗಬಹುದೆಂಬುದನ್ನು ಆಲೋಚಿಸಿರಿ. ದುರಾಚಾರಕ್ಕೆ ಕೇಶರಾಶಿಯು ಬಲವತ್ತರ ಸಹಕಾರಿಯಲ್ಲವೆ ? ಹಾಗಾದರೆ ನಿಮ್ಮ ಕುಲಕ್ಕೇ ಕೊಡಲಿಯ ಕಾವು ಬಿದ್ದಂತಾಗುವುದಿಲ್ಲವೆ ? ಇಷ್ಟಕ್ಕೂ ಗಂಡನೇ ಹೋದ ಮೇಲೆ ಅದೇಕೆ ?ಆಚಾರಕ್ಕೂ ಇಲ್ಲ, ಧರ್ಮಕ್ಕೂ ಇಲ್ಲ

ಶಂಕರ:—ಆಗಲಿ, ಈಗಲೇ ಬೇಡ. ಅದಕ್ಕೂ ಬೇರೆ ಕಾಲವು ಬರುವುದು.

ಶರಾವತಿ:—ಈಗಲೇ ಏಕೆ ಆಗಬಾರದು ? ಕಾಲಬರುವುದಾವಾಗ ?

ಶಂಕರ:—ಇನ್ನು ಐದಾರುತಿಂಗಳಾದರೂ ಹೋಗಲಿ.

ಶರಾವತಿ:—ಈಗಲೇ ಆಗಬಾರದೇಕೆ ?

ಶಂಕರ:—ನೀನೇಹೇಳು. ಅವಳ ಸ್ಥಿರಚರ ಆಸ್ತಿಗಳನ್ನೆಲ್ಲಾ ಕಿತ್ತು

ಕೊಂಡು, ತಲೆಯುನ್ನೂ ಬೋಳಿಸಿಕಳಿಸಿದರೆಂಬ ಅಪವಾದಕ್ಕೆ ಗುರಿಯಾಗಲೆ? ಸದ್ಯಕ್ಕೆ ಈ ಕೆಲಸವು ಬೇಡ, ನನ್ನಿಂದ ಈ ಕೆಲಸವಾಗಲಾರದು.

ಶರಾವತಿಗೆ ಕೋಪವಧಿಕವಾಯಿತು, ಹೇಳಿದಳು:—"ಹಾಗಾದರೆ, ಅನುಭವಿಸಿರಿ ! ಹಿರಿಯರ ಕೀರ್ತಿಗೆ ಭಂಗತರುವ ಕೆಲಸಮಾಡುವಿರಿ. ನಿಮ್ಮ ದಯೆಯಿಂದಲೇ ಕುಲಕ್ಕೆ ಅಪವಾದ ಬರುವುದು, ತಿಳಿದಿರಲಿ !

ಶಂಕರ:—ಸುಮ್ಮನೆ ಕೂಗಿದರಾಯಿತೆ ?"

ಶರಾವತಿಗೆ ಕೋಪವು ಮಿತಿಮೀರಿತು. ಅಲ್ಲಿಂದ ಎದ್ದು "ನಾವು ಕೂಗಿಕೊಳ್ಳುವರು. ನಾವು ಕೆಲಸಕ್ಕೆ ಬಾರದವರು. ತಾವೇ ಸರ್ವಜ್ಞರು. ಬೇಕಾದುದನ್ನು ಮಾಡಿರಿ." ಎನ್ನುತ್ತ ಹೊರಟುಹೋದಳು.

ಸಭೆಯು ಈ ಸಂವಾದವನ್ನು ಆಮೂಲಾಗ್ರವಾಗಿ ಕೇಳಿ ಪರಿತಪಿಸುತ " ಹಾ, ವಿಧಾತ ! ನಿನ್ನ ವಿಲಾಸದ ಮಹಿಮೆಯು ಹೀಗೆಯೂ ಇರುವುದೆ ? ಆಗಲಿ, " ಅವಶ್ಯಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಂ" ಎಂಬಂತೆ ನಮ್ಮ ಕರ್ಮಕ್ಕೆ ತಕ್ಕ ಫಲವನ್ನು ನಾವೇ ಅನುಭವಿಸಬೇಕಲ್ಲವೆ ? ಹಾ ! ಹರಿ ! ಹರಿ !! ಏನುಮಾಡಿದೆ ? ಎಂದು ಹೇಳಿಕೊಳ್ಳುತ್ತ ತನ್ನ ಸ್ಥಳಕ್ಕೆ ಹೊರಟುಹೋದಳು.

---

## ಚತುರ್ಥ ಪರಿಚ್ಛೇದ.

### ( ಕ್ರೋಧಾನಲದ ಮಧ್ಯದಲ್ಲಿ )

ಕಾಲಪುರುಷನು ಸ್ವತಂತ್ರನು. ಹೇಗಿದ್ದರೂ ಕಾಲ ಕಳೆದು ಹೋಗುವುದು. ಅಳುತಿರಲಿ, ನಗುತಿರಲಿ, ಚಿಂತಿಸುತ್ತಿರಲಿ, ಸುಮ್ಮನಿರಲಿ, ಕೆಲಸಮಾಡುತಿರಲಿ, ಒಂದೆಡೆ ಮೂಲೆಯಲ್ಲಿ ನಿಸ್ತಬ್ಧತೆಯಿಂದ ಕುಳಿತಿರಲಿ, ದುಃಖಪಡುತಿರಲಿ, ಸಂತೋಷದಿಂದ ಇರಲಿ, ಹೇಗಿದ್ದರೂ ಕಾಲಪುರುಷನು ಆರನ್ನೂ ಲಕ್ಷಿಸದೆ ಎಲ್ಲರನ್ನೂ ಜಯಿಸಿ ಮುಂದೆ ನಡದೇಬಿಡುವನು-ಅವನು ನಿಷ್ಪಕ್ಷಪಾತಿ. " ಸೋಮಾರಿಯು ಕಡಿಮೆ, ಕೆಲಸಗಾರನು ಹೆಚ್ಚು,

ಬಡವನು ಹೀನನು, ದೊಡ್ಡವನು ಮಹಾತ್ಮನೆಂಬ " ಭೇದವು ಲವಲೇಶವಾದರೂ ಅವನಿಗಿಲ್ಲ. ಮನೆಮನೆಗೆ ಭಿಕ್ಷವೆತ್ತಿ ತಿನ್ನುವ ದರಿದ್ರನಾಗಲಿ, ಸಕಲಸಾಮ್ರಾಜ್ಯ ಪದಾಧಿಕಾರಿಯಾದ ಸಾರ್ವಭೌಮನಾಗಲೀ ಎಲ್ಲರೂ ಕಾಲಪುರುಷನ ವಶವರ್ತಿಗಳೇ ಆಗಿರುವರು. ಈ ದಿನ ಈ ವೇಳೆಯಿಂದ ನಾಳೆಯದಿನ ಈ ವೇಳೆಗೆ ದರಿದ್ರನಿಗೆಷ್ಟುವೇಳೆಯೊ, ಸಾರ್ವಭೌಮನಿಗೂ ಅಷ್ಟೇವೇಳೆಯು. ಆದರೆ ಆ ಕಾಲಪುರುಷನು ಸರ್ವರ ವಶದಲ್ಲಿಯೂ ಇದ್ದು ಅವರವರು ಉಪಯೋಗಿಸಿಕೊಳ್ಳುವಂತೆ ಪರಿಣಮಿಸುವನು.

ನಭೆಯು ಚಿಕ್ಕಮ್ಮನ ವಾಕ್ಯರಹತಿಯಿಂದ ಅನುದಿನವೂ ಪರಿತಪಿಸುತ ಎರಡು ತಿಂಗಳುಗಳನ್ನು ಕಳೆದಳು. ದಿನಗಳು ಕಳೆದಮೇಲೆ ಅವನ್ನು ಲೆಕ್ಕಿಸಿದರೆ, ದೊಡ್ಡದಾದರೂ ಮನಸ್ಸಿನಲ್ಲಿ ಸಣ್ಣದೆಂಬ ಭಾವನೆಯು ಇರುವುದರಿಂದಲೇ ಹೃದಯದಲ್ಲಿ ಒಂದು ವಿಧವಾದ ಪರಿವರ್ತನೆಯುಂಟಾಗುವುದು. ತಲೆಕೂದಲನ್ನು ತೆಗೆಯಸದಿದ್ದ ತಪ್ಪಿತಕ್ಕಾಗಿಯೇ ಎರಡು ತಿಂಗಳಕಾಲ ಇವಳು ಅನುಭವಿಸಿದ ಕಷ್ಟಗಳನ್ನು ವರ್ಣಿಸಿ ತೀರದು. ಏಕಾಂಗಿಯಾಗಿ ಕುಳಿತಾಗಲೆಲ್ಲಾ ಶರಾವತಿ—ಶಂಕರನಾಥರ ಏಕಾಂತ ಭಾಷಣವು ನೆನಪಿಗೆ ಬಂದು ಹೃದಯವು ಒಡೆದುಹೋಗುವಂತಾಗುತ್ತಿದ್ದಿತು.

ಬೆಳಿಗ್ಗೆ ಒಂಭತ್ತುಘಂಟೆ. ನಭೆಯು ಹಿತ್ತಿಲಕಡೆಯ ಕಿರುಮನೆಯಲ್ಲಿ ಏಕಾಂಗಿಯಾಗಿ ಕುಳಿತು—" ಈಗೇನು ಮಾಡುವ ? ಕೂದಲಿರುವುದೇನೋ ಒಂದು ಹೊರೆಯಂತೆಯೇ ಸರಿ; ಆದರೆ, ಇದನ್ನು ತೆಗೆಯಿಸುವುದೆಂತು ? ನೀಚನ ಕರಸ್ಪರ್ಶದಿಂದಲ್ಲವೇ ? ಚಿಃ ! ಆಗದು. ಅಂತಹ ಕೆಲಸವು ನನ್ನಿಂದ ಆಗದು. ಕೂದಲು ತೈಲಾದಿಗಳಿಂದ ಸಂಸ್ಕೃತವಾದರಲ್ಲವೆ, ಅಲಂಕಾರ ಪ್ರಾಯವಾಗುವುದು? ಜಟಾಬಂಧಿತವಾದರೆ ಕುಂದೇನು ? ಕೇಶರಾಶಿಯಿಂದಾಗುವ ಲಕ್ಷಣವನ್ನು ಹಾಳುಮಾಡಿದರೆ, ಅದನ್ನು ತೆಗೆವುದರಿಂದಾಗುವ ಫಲವಾಗಲಿಲ್ಲವೇ ? " ಎಂದು ತನ್ನಲ್ಲಿಯೇ ಆಲೋಚಿಸುತ್ತಿದ್ದಳು.

ನಭೆ ಹೀಗೆ ಅನನ್ಯಮನಸ್ಕಳಾಗಿ ಚಿಂತಿಸುತ್ತಿರುವಾಗ ಅವಳ ಇದಿರಿಗೆ ಸುಮಾರು ಇಪ್ಪತ್ತು—ಇಪ್ಪತ್ತೈದು ವರ್ಷ ವಯಸ್ಸಿನ ಒಬ್ಬ

ಯುವಕನು ಬಂದು ನಿಂತನು. ಚಿಂತಾಂಗನಾಲಿಂಗನದಿಂದ ಪರವಶಳಾಗಿದ್ದ ಸಭೆಯನ್ನೂ, ಶಿರೋಜಬಂಧನದ ವಿಧಾನವನ್ನೂ ನಿರುತ್ಸಾಹ ಸೂಚಕವಾದ ಅವಳ ಸ್ಥಿತಿಯನ್ನೂ ನೋಡಿ, ಆ ಯುವಕನು ಕನಿಕರದಿಂದ “ ಅಯ್ಯೋ, ಸಭಾ !! ” ಎಂದು ಕೂಗಿ ಅಲ್ಲಿಯೇ ಸ್ತಬ್ಧನಾಗಿ ಕುಳಿತುಬಿಟ್ಟನು.

ಸಭೆಯು ಎಚ್ಚೆತ್ತು ಗಾಬರಿಯಿಂದ ಆ ಯುವಕನಿಗೆ ಶರಗಿನಿಂದ ಗಾಳಿಯನ್ನು ಬೀಸುತ್ತ “ ಅಣ್ಣಾ ! ಅಣ್ಣಾ !! ” ಎಂದು ಕೂಗಿದಳು.

ಸಭೆಯು ಶೈತ್ಯೋಪಚಾರಗಳಿಂದ ಎಚ್ಚೆತ್ತ ಆ ಆಗಂತುಕನು ಕಣ್ಣೀರು ಸುರಿಸುತ್ತ ಕುಳಿತನು. ಸಭೆಯು “ ಅಣ್ಣಾ ! ನಿರಂಜನ ! ಇದೇಕೆ ಹೆಂಗಸಿನಂತೆ ಅಳುವೆ? ನೀನೇ ಅತ್ತರೆ, ಮುಂದಿನ ಪರಿಣಾಮವೇನು ? ” ಎಂದಳು.

ನಿರಂಜನ:—ಸೌಭಾಗ್ಯದ ಅಧಿದೇವತೆಯಂತೆ ಪ್ರಕಾಶಿಸುತ್ತಿದ್ದ ನಿನ್ನನ್ನು ನೋಡಿದ್ದ ಈ ಕಣ್ಣುಗಳಿಂದಲೇ ಈಗ ಈ ರೀತಿ ನೋಡಬೇಕಾಯಿತಲ್ಲಾ-ಸಭಾ ! ನಿರ್ಭಾಗ್ಯನಾದ ನನಗೆ ದೇವರೇಕೆ, ಈ ಗತಿಯನ್ನು ಕೊಟ್ಟಿರಬಹುದು?

ಸಭಾ:— ಅಣ್ಣಾ ! ಆಶಾಲೋಭಗಳನ್ನು ತೊರೆಯಬೇಕಾದುದು ಪ್ರತಿಯೊಬ್ಬರ ಕರ್ತವ್ಯವಲ್ಲವೆ ? ಇವುಗಳೆಲ್ಲವೂ ಸುಖವೆಂದೇ ತಿಳಿಯಬೇಕು. ಭಗವಂತನ ಲೀಲೆಯಿದು! ಸಮಾಧಾನದಿಂದ ಅನುಭವಿಸಬೇಕು.

ನಿರಂಜನ:—ನಿನ್ನನ್ನು ನೋಡಿದರೆ, ನನಗೆ ಬಹು ಸಂಕಟವಾಗುವುದು. ನೋಡಿ ಸಹಿಸುವುದಕ್ಕೆ ಅಸಾಧ್ಯವು.

ಸಭಾ:—ಅಣ್ಣಾ! ಸಹಿಸಲಾರೆನೆಂದರೇನು ? “ಧೈರ್ಯಂ ಸರ್ವತ್ರ ಸಾಧನಂ” ಎಂದಿಲ್ಲವೆ ? ಕರ್ತವ್ಯದಲ್ಲಿ ನಿರತರಾದವರು ಎಂತಹ ಕಷ್ಟ ಕಾಲವು ಪ್ರಾಪ್ತವಾದರೂ ಎದೆಗುಂದದೆ ಧೈರ್ಯದಿಂದ ಹಿಡಿದ ಕಾರ್ಯವನ್ನು ಸಾಧಿಸಬೇಕಲ್ಲವೆ? ಆ ವಿಷಯವಿರಲಿ. ನೀನು ಯಾವಾಗ ಬಂದೆ?

ನಿರಂಜನ:—ಈಗಲೇ ಬಂದೆನು.

ಸಭಾ:—ಕಾಂತರಾಜಪೇಟೆಯಿಂದಲೆ? ಎಲ್ಲರೂ ಕ್ಷೇಮವಷ್ಟೆ ?

ನಿರಂಜನ:—ಅಹುದು, ದೇವರ ಕೃಪೆಯಿಂದ ಎಲ್ಲರೂ ಕ್ಷೇಮವಾಗಿರುವರು.

ನಭಾ:—ಅಹಾ! ನೀನು ಬರುವಾಗ ಚಿಕ್ಕಪ್ಪ-ಚಿಕ್ಕಮ್ಮನವರನ್ನು ನೋಡಿದ್ದೆಯಷ್ಟೆ?

ನಿರಂಜನ:—ಬರುವಾಗ ನೋಡಿದ್ದೆನು. ಅವರ ಇಷ್ಟಾನುಸಾರವಾಗಿಯೇ ಇಲ್ಲಿಗೆ ಬಂದೆನು.

ನಭಾ:—ಚಿಕ್ಕಪ್ಪನು ಏನನ್ನಾದರೂ ಹೇಳಿ ಕಳುಹಿದನೆ ?

ನಿರಂಜನ:—ಅವನು ನಿನ್ನ ದುಃಸ್ಥಿತಿಗಾಗಿ ಬಹಳ ಕೊರಗುತಿರುವನು. ಇಲ್ಲಿಗೆ ಬರಲು ಒಂದೆರಡುಸಾರಿ ಪ್ರಯತ್ನಿಸಿಯೂ ಪ್ರಯತ್ನಿಸಿದನು. ರಜೆ ದೊರೆಯಲಿಲ್ಲ. ನಿನಗೆ ಖರ್ಚಿಗಾಗಿ ಎರಡುಮೂರು ಸಲ ಹಣವನ್ನು ಕಳುಹಿಸಿದನಂತಲ್ಲ; ಕಾಗದಗಳಿಗೆ ನೀನು ಉತ್ತರವನ್ನೇಕೆ ಬರೆವುದಿಲ್ಲ ? ನಿನ್ನ ವಿಚಾರವೇ ತಿಳಿಯಬರಲಿಲ್ಲವಾದ ಕಾರಣ ನೋಡಿಕೊಂಡು ಬಾರೆಂದು ಅವನೇ ನನ್ನನ್ನು ಕಳಿಸಿದನು.

ನಭಾ:—ಸೇವಾವೃತ್ತಿ ಬಹುಕಷ್ಟ. ನನಗೆ ನಿಮ್ಮ ಊರಿನಿಂದ ಅವ ಕಾಗದವೂ ಬಂದಿಲ್ಲ. ಖರ್ಚಿಗೆ ಕಳುಹಲ್ಪಟ್ಟ ರೂಪಾಯಿ ಎಲ್ಲಿ ಹೋಯಿತೋ ಬಲ್ಲವರಾರು ? ಮುಖ್ಯ, ಬೇಕಾದುದು ಕ್ಷೇಮಲಾಭ. ನಿನ್ನ ತಂದೆತಾಯಿಗಳ ವಿಚಾರವು ನಿನಗೆ ತಿಳಿದೇ ಇರುವುದು.

ನಿರಂಜನ:—ತೃಷ್ಣಾಭರದಿಂದ ತಪಿಸುತಿರುವ ನನ್ನ ತಂದೆತಾಯಿಗಳು ನಿನ್ನ ಖರ್ಚಿಗಾಗಿಬಂದ ದ್ರವ್ಯಕ್ಕೂ ಭಾಗಿಗಳಾಗಬೇಕೆ? ಅಯ್ಯೋ, ನನಗೆ ಈತನು ಜನಕಪಿತೃ; ಆತನೇ ಪಾಲಕಪಿತೃ. ಆತನನ್ನೇ ನಾನು ಪಿತೃದೇವನೆಂದು ನಂಬಿರುವೆನು.

ನಭಾ,—ಜನಕನಲ್ಲಿ ಉದಾಸೀನವು ಧರ್ಮವೆ?

ನಿರಂಜನ:—ಧರ್ಮವಲ್ಲ. ಆದರೆ, ಶುನಶ್ಶೇಫನು ತಾಯಿ ತಂದೆಗಳನ್ನು ಬಿಟ್ಟು, ಗಾಧೇಯನನ್ನೇಕೆ ಸೇರಿದನು?

ನಭಾ:—ನೈಜವಾದ ಪುತ್ರವಾತ್ಸಲ್ಯವನ್ನು ತೊರೆದು ಯಾಗಪಶುವಿಗಾಗಿ ವಿಕ್ರಯಿಸಿದುದರಿಂದ.

ನಿರಂಜನ:—ಅಹುದಷ್ಟೆ! ಅವರೇನೋ ರಾಜಾಜ್ಞೆಯಿಂದ ಬಂಧಿ

ಸಲ್ಪಟ್ಟು, ದಾರಿದ್ರ್ಯರೋಗಕ್ಕೆ ತುತ್ತಾಗಿ ಮಗನನ್ನು ತ್ಯಜಿಸಿದರು. ಇವ ರಾದರೋ ಕೇವಲ ದ್ರವ್ಯವೇ ಪ್ರಪಂಚದಲ್ಲಿ ದೊಡ್ಡದೆಂದು ನಂಬಿ, ಅನೇಕರ ದುರ್ಬೋಧನೆಯಿಂದ ನನ್ನ ವಿದ್ಯಾಭ್ಯಾಸಕ್ಕೆ ವಿಘ್ನಕಾರಿಗಳಾಗಿ ದಯೆ, ಧರ್ಮ, ಪುತ್ರವಾತ್ಸಲ್ಯಗಳನ್ನು ತೊರೆದು ನಿಷ್ಠುರತೆಯಿಂದ ನನ್ನನ್ನು ಹೊರಗೆ ಅಟ್ಟಿದರು.

ನಭಾ:— ಹಿಂದಿನ ಮಾತು ಮರೆತುಹೋಗಲಿ, ಬಿಡು. ಇಲ್ಲಿ ನಿಮ್ಮ ಅಪ್ಪ ಅಮ್ಮನನ್ನು ನೋಡಿದ್ದಿಯೋ ?

ನಿರಂಜನ:—ಇನ್ನೂ ಇಲ್ಲ. ಹೋಗುವಾಗ ನೋಡಿದರಾಯ್ತೆಂದು ಸುಮ್ಮನಿರುವೆನು.

ನಭಾ:—ನೀನು ಹೊರಡುವುದಾವಾಗ?

ನಿರಂಜನ:—ಈ ರಾತ್ರಿಯೇ ಹೊರಡುವೆನು.

ನಭಾ:—ಅದೇಕೆ? ಎರಡುದಿನಗಳಿರಬಾರದೆ?

ನಿರಂಜನ:—ನಾನು ಇಲ್ಲಿದ್ದು ಏನುತಾನೆ ಮಾಡಬಲ್ಲೆನು ? ನಭಾ! ಇದೇಕೆ, ನಿನ್ನ ಕೇಶವನ್ನು ಇಷ್ಟು ಬಿಗಿದುಕಟ್ಟಿರುವೆ ? ಬಾಚಿಕೊಳ್ಳು ವುದೇ ಇಲ್ಲವೇನು? ಹೇಗೆಸಹಿಸುವೆ?

ನಭೆಯು ಸ್ವಲ್ಪ ನಕ್ಕು “ ನನ್ನ ಚಿರಸನ್ಯಾಸವ್ರತಧಾರಣೆಗೆ ಇದೇ ಪ್ರಥಮದೀಕ್ಷೆ. ಇದನ್ನೇ ನಾನು ನಿರ್ವಹಿಸಲು ಶಕ್ತಳಲ್ಲವಾದರೆ, ಮಿಕ್ಕ ವುಗಳನ್ನು ಸಹಿಸುವುದೆಂತು?” ಎಂದಳು.

ನಿರಂಜನ:— ಅವುದನ್ನಾದರೂ ತಡೆಯಬಹುದು. ತಲೆಯನ್ನು ಬಾಚಿಕೊಳ್ಳದಿದ್ದರೆ ತಲೆಯಲ್ಲಿ ಹೇನುಬರುವುಲ್ಲವೆ?

ನಭಾ:—ಅಣ್ಣಾ! ನಿಜ; ಏತರಿಂದ? ಎಣ್ಣೆ, ಪರಿಮಳ, ಉಷ್ಣೋದ ಕಾದಿಗಳಿಂದ ಹೇನು ಹುಟ್ಟುವುದು. ಶುದ್ಧೋದಕ ಸ್ನಾನದಿಂದ ದುರ್ವಾ ಸನೆ, ದುಷ್ಟಕ್ರಿಮಿ ವಾಸನಾದಿಗಳು ನಾಶವಾಗಿ ಹೋಗುವುವು.

ನಿರಂಜನ:—ನಭಾ ! ಹೇಗೇ ಆದರೂ ನಾನು ನಿನ್ನನ್ನು ನೋಡಿ ಸಂಕಟವನ್ನು ಸಹಿಸಲಾರೆನು; ನಮ್ಮ ತಂದೆಯಾದರೂ ತೊಂದರೆ ಕೊಡ ದಿರುವನೊ?

ನಭಾ:—ಪಾಪ! ಆತನೇನೋ ಯಾವ ಮಾತನ್ನೂ ಆಡದೆ ಸುಮ್ಮ

ನಿರುವನು. ಆದರೆ, ನಿಮ್ಮಮ್ಮನು ಆರೆಗಳಿಗೆಯೂ ಸುಮ್ಮನಿರಳು. ನೀನು ಇಲ್ಲಿ ಒಂದು ದಿನವಾದರೂ ಇದ್ದರೆ, ಇಲ್ಲಿಯ ವಿದ್ಯಮಾನಗಳೆಲ್ಲವೂ ತಿಳಿದು ಬರುವುವು.

ನಿರಂಜನ:—ನಿನ್ನ ಸ್ಥಿತಿಗಳನ್ನು ತಿಳಿಯಲೋಸುಗವೇ ಬಂದಿರುವೆನು. ಅದಕ್ಕಾಗಿಯೇ ಚಿಕ್ಕಪ್ಪನು ಕಳಿಸಿರುವನು.

ಇವರು ಈ ರೀತಿ ಮಾತನಾಡುತಿರುವಾಗಲೇ ಹಿತ್ತಿಲಕಡೆ ಬಾವಿಯ ಬಳಿ ಇಬ್ಬರು ಹೆಂಗಸರು ಏನೇನೋ ಮಾತನಾಡಿಕೊಳ್ಳುವಂತೆ ಕೇಳಬಂದಿತು. ಆ ಸುಳಿವನ್ನು ತಿಳಿದ ಸಭಾ ನಿರಂಜನರು ಸುಮ್ಮನಾದರು. ಆ ಸ್ತ್ರೀಯರ ಸಂಭಾಷಣೆಯಲ್ಲಿ ಕೆಲವು ವಿಷಯಗಳು ಮಾತ್ರ ನಮ್ಮ ಕಿವಿಗೆ ಬಿದ್ದುವು.

"ಏನು, ಶರಾವತಿಯಮ್ಮನವರೆ! ಕೆಲಸವಾಯಿತೆ?"

"ಏನು ಕೇಳಿದಿರಿ? ಕೆಲಸವೆ? ಎಂದಿಗೆ ಮುಗಿವುದು. ನನ್ನ ಹೆಣ ವೆತ್ತಿದಾಗ! ಹಾಳು ಕೆಲಸವಿದ್ದೇ ಇದೆಯಮ್ಮ! ನಾನು ಸತ್ತದಿನವೇ ಆಗುವುದು."

"ಸಾಯುವವರೆಗೆ ಎಲ್ಲರೂ ಕೆಲಸ ಮಾಡಬೇಕು."

"ಸುಮ್ಮನೆ ಕುಳಿತಿರುವ ಪುಣ್ಯಾತ್ಮರಿಲ್ಲವೇನಮ್ಮಾ?"

"ಸುಮ್ಮನೆ ಯಾರು ಕುಳಿತಿರುವರು."

"ಓದುಬರೆಹ ಬಲ್ಲ ರಂಡೆಯರು, ಸೊಗಸುಗಾತಿಯರು; ನಾವೂ ಓದುಬರೆಹ ಕಲಿತಿದ್ದರೆ, ಕುಳಿತಿರಬಹುದಾಗಿತ್ತು! ಇಲ್ಲವಲ್ಲಮ್ಮ!"

"ಹಾಗೆಂದರೇನಮ್ಮ? ನಿಮ್ಮ ಮಗಳು ವಿದ್ಯೆ ಕಲಿತರೂ, ಕೆಲಸಗಳನ್ನು ಮಾಡುತಿಲ್ಲವೆ!"

"ಯಾರ ಮಗಳು? ನನಗಂತಹ ಭಾಗ್ಯವೆಲ್ಲಿಯದಮ್ಮ?"

"ಏಕಮ್ಮ? ಸಭೆ ನಿಮ್ಮ ಮಗಳಿಗಿಂತ ಹೆಚ್ಚಾಗಿ ನೀವು ಹೇಳಿದಂತೆ ಕೇಳಿಕೊಂಡಿಲ್ಲವೆ?"

"ಏನಮ್ಮ? ನೀವೂ ಸರಿಯೆ! ನಾನು ಪ್ರಾಣವನ್ನು ಬಿಡುತ್ತಿದ್ದರೂ ಅವಳು ನೋಡುವುದಿಲ್ಲ."

"ಇನ್ನೂ ಹುಡುಗಿ, ತಿಳಿಯದು; ಕೆಲಸಗಳನ್ನು ಕಲಿಸಬೇಕು."

" ಎಂತಹ ಕೇಡುಗಾಲದ ಹುಡುಗಿಯಮ್ಮ? ಅವಳ ವಯಸ್ಸಿನಲ್ಲಿ ನಾನು ಸಂಸಾರದ ಭಾರವನ್ನೆಲ್ಲ ಹೊತ್ತಿದ್ದೆನು. ಅದೃಷ್ಟವಿದ್ದರೆ ಎರಡು ಮಕ್ಕಳೂ ಆಗುತ್ತಿದ್ದುವು ಅವಳಿನ್ನೂ ಅರಿಯದ ಹುಡುಗಿಯೆ ? ಕೆಲಸ ಮಾಡಲಾರದ ಸೊಗಸುಗಾತಿ ?"

" ಹಾಗೆಂದರೇನಮ್ಮ ? ಅವಳು ಕೆಲಸ ಮಾಡುವದಿಲ್ಲವೆ ?"

" ಅದೆಂತಹ ಕೆಲಸವಮ್ಮ ! ಹಾಳುವ್ಯೈಲಿಗೆಯುಕೂದಲು ತಲೆಯು ತುಂಬ ಇರುವಾಗ ?"

"ಅಡುಗೆಗೇನೋ ಹೋಗಲಿ, ಉಳಿದ ಹೊರಗಿನ ಕೆಲಸಗಳಿಗೇನು?"

" ಅದನ್ನೂ ನಾನು ಅವಳಿಗೆ ಹೇಳುವುದಿಲ್ಲ. ಅವಳ ಇಷ್ಟ !"

" ಇದೇಕೆ, ಹೀಗೆ ಹೇಳುವಿರಿ ? "

" ಅಷ್ಟಲ್ಲದೆ ಮತ್ತೇನು ? ಮನಸ್ಸಿನಲ್ಲಿ ಇಲ್ಲದುದನ್ನು ಮಾಡಿಸಲಾಗುವುದೇ ? ಎಷ್ಟೋ ಆದರೂ ಓದು ಬರೆಹ ಬಲ್ಲವರು; ಈಗಿನ ನಾಗರಿಕತೆಯು ಸಮಾಜಕ್ಕೆ ಸೇರಿದವರ ವಿಷಯವನ್ನು ಹೇಳುವುದೇನು ? ಮುಸುರೆ ತಿಕ್ಕಿದರೆ, ಕೈ ಮಸಿಯಾಗುವುದು; ಗೋಮಯವನ್ನು ಒಳಿದರೆ ಕೈ ವಾಸನೆಯಾಗುವುದು; ಕಸಗುಡಿಸಿದರೆ, ಮೈಯೆಲ್ಲ ಧೂಳಾಗುವುದು; ನೀರನ್ನು ಸೇದಿದರೆ ರಟ್ಟೆ ಬಾತು ನೋಯುವುದು; ಮನೆಯಲ್ಲಿ ತಿರುಗಾಡಿದರೂ ಕಾಲೇ ಬಿದ್ದು ಹೋಗುವುದು. ಹೀಗಿರುವಾಗ ಏನು ಕೆಲಸವನ್ನು ಮಾಡಿಸಬಹುದು ? ನೀವೇ ಹೇಳಿ. ಅವರವರ ಕೆಲಸಗಳೇ ಅವರಿಗೆ ಹೆಚ್ಚು. ಕಸೂತಿ, ಹೊಲಿಗೆ, ಲಲ್ಲೆ. ಓದು, ಬರೆಹ, ಮಣಿ ಮೊದಲಾದ ಪ್ರಸಂಗಗಳಲ್ಲೇ ಅವರಿಗೆ ಹೊತ್ತು ಹೋಗುವುದು."

" ಸರಿಯಮ್ಮಾ ಸರಿ. ಕೇಡುಗಾಲದ ಬುದ್ಧಿ! ಈಗಲೇ ಆ ಹಾಳು ಕಸ— ಮೈಲಿಗೆಯನ್ನು ತೆಗೆಯಿಸಿ, ಕೆಲಸದಲ್ಲಿ ನುರಿಗಿಸಬಾರದೆ ?"

" ಅದನ್ನೇಕೆ ಹೇಳುವಿರಿ ? ಸುಮ್ಮನಿರಬಾರದೆ ? ಮನೆಯ ಯಜಮಾನರಿಗೇ ಇಷ್ಟವಿಲ್ಲವಂತೆ."

" ಚೆನ್ನಾಯ್ತಮ್ಮ ! ಚೆನ್ನಾಯ್ತು. "

" ಚೆನ್ನಾಗಿಲ್ಲದೆ ಏನಮ್ಮ ? ಆ ನಿರ್ಭಾಗ್ಯಳು ತಾಯಿಯನ್ನೂ ಗಂಡನನ್ನೂ ಕಳೆದುಕೊಂಡು ನಮ್ಮ ಮನೆಗೆ ಎಂದು ಕಾಲಿಟ್ಟಳೋ,

ಅಂದೇ, ನಮ್ಮ ಮನೆಗೆ ಅಪವಾದವೂ ಅಪಕೀರ್ತಿಯೂ ತಪ್ಪಿದುದಲ್ಲ ವೆಂದು ಚೆನ್ನಾಗಿ ತಿಳಿದೆನು. ಮನೆ ಹಾಳಾಯಿತಮ್ಮ! ನನಗಂತೂ ನರಕ ದಲ್ಲಿದ್ದಂತೆಯೇ ಆಗಿದೆ.

" ಅಯ್ಯೋ, ಪಾಪ! ನಿಮ್ಮ ಹಣೆಯ ಬರಹ! ಯಾರಿದ್ದರೇನು ? ನಿಮ್ಮ ಭಾಗಕ್ಕೆ ಯಾರೂ ಇಲ್ಲದಂತಿದೆಯಮ್ಮ !"

" ಯಾರಸುದ್ದಿ ನನಗೇಕೆ ? ಹಾಳಾಗಲಿ !"

ನಿರಂಜನನಿಗೆ ಕೋಪವು ಅತಿಯಾಯಿತು. ದೇಹವೆಲ್ಲವೂ ಕಂಪಿತ ವಾಗಿ ಬೆಮರಿತು. ಪೆಟ್ಟುತಿಂದ ಸರ್ಪದಂತೆ ಬುಸುಗುಟ್ಟುತ್ತ ಮೇಲಕ್ಕೆದ್ದು "ಹಾಳಾಗಲೇ? ಕೆಟ್ಟನಾಲಗೆ !" ಎಂದು ಹೊರಹೊರಡಲನುವಾದನು.

ನಭೆ ಅವನ ಕೈಯನ್ನು ಹಿಡಿದು ಕೇಳಿದಳು:—

" ಅಣ್ಣಾ! ಇದೇನು? ಎಲ್ಲಿಗೆ ಹೋಗುವೆ ?"

ನಿರಜಂನ:— ನಭೆ! ಬಿಡು. ಇನ್ನು ನನ್ನನ್ನು ತಡೆಯದೆ ಬಿಡು. ವೃಥಾಲಾಪದಿಂದ ಕಾಲವನ್ನು ಕೊಲ್ಲುವ ನಾಲಗೆಗೆ ತಕ್ಕ ಶಿಕ್ಷೆ ಕೊಡುವೆನು.

ನಭಾ:— ಬಿಡುವೆನು; ನಿಧಾನಿಸು. ಈಗ ಬೇಡ.

ನಿರಂಜನ:— ಇಲ್ಲ; ನಾನು ನಿಧಾನಿಸಲಾರೆನು.

ನಭೆ ಕೈಯನ್ನು ಬಿಟ್ಟಳು; ನಿಟ್ಟುಸಿರು ಬಿಡುತ್ತೆ, " ಅಣ್ಣಾ! ನನಗೆ ಹಿತವಾದುದನ್ನು ಮಾಡಲಾರೆಯಾ ?" ಎಂದಳು.

ನಿರಂಜನನು ಕುಳಿತುಕೊಂಡು; " ನಭಾ ! ನಿನಗೆ ಹಿತವಾದುದಾ ವುದು ?" ಎಂದನು.

ನಭಾ:— ಹೇಳುವೆನು; ಈಗ ಸುಮ್ಮನಿರು.

ನಿರಂಜನನು ನಿರುತ್ತರನಾಗಿ ನಭೆಯ ಮುಖವನ್ನು ನೋಡಿದನು. ಅವಳಾಮುಖದ ಅನಿರ್ವಚನೀಯವಾದ ಅಮೋಘಕಾಂತಿಯೊಂದನ್ನು ನೋಡಿ, ಪ್ರೀತಿವ್ಯಂಜಕ ಸ್ವರದಿಂದ ಕೇಳಿದನು:— " ನಭಾ, ಹೇಳು; ಯಾವ ಶಕ್ತಿಯಿಂದ ಇಷ್ಟು ಯಾತನೆಗಳನ್ನೂ ತಡೆಯುತಲಿರುವೆ ?"

ನಭೆ " ಅಣ್ಣಾ! ಶಕ್ತಿ ಯಾವುದು ? ಪತಿಯ ಅಂತ್ಯಾಜ್ಞೆಯನ್ನು ಭದ್ರವಾಗಿಟ್ಟಿರುವೆನು. ನೋಡು !" ಎಂದು ಉಡಿಯಲ್ಲಿಟ್ಟಿದ್ದ ಭರಣಿ

ಯೊಂದನ್ನು ಹೊರಗೆ ತೆಗೆದು ತೋರಿಸಿದಳು. ಅದರಲ್ಲಿ ಅವಳ ಗಂಡನ ಕಾಗದವಿದ್ದಿತು. ಹೇಳಿದಳು:— “ ಅಣ್ಣಾ! ನನ್ನ ಸ್ವಾಮಿಯ ಅಂತ್ಯಕಾಲದ ಆಜ್ಞಾ ಬಲದಿಂದಲೇ ಇವುಗಳನ್ನು ಅಲ್ಪವೆಂದು ಎಣಿಸುವೆನು. ಅನುಗ್ರಹದಪ್ರಭಾವದಿಂದಲೇ ಇನ್ನೂ ಮುಂದೆ ಬರಬಹುದಾದ ಅಗಾಧ ನಷ್ಟ ಕಷ್ಟಗಳಿಷ್ಟಿದ್ದರೂ ಸಹಿಸುವೆನು. ಭಗವದನುಗ್ರಹವೂ, ಸ್ವಾಮಿಸಹಾಯವೂ ಗುರುಜನರ ಹಿತೋಪದೇಶವೂ, ಭ್ರಾತೃವರ್ಗದ ಪ್ರೋತ್ಸಾಹವೂ ನೆರವಾಗಿದ್ದರೆ, ಅಧೀರತೆಯಿಂದ ಎಂದೂ ಕರ್ತವ್ಯವನ್ನು ಕೆಡಿಸಿಕೊಳ್ಳುವುದಿಲ್ಲವೆಂಬ ನಂಬುಗೆ ಚೆನ್ನಾಗಿದೆ !”

ನಿರಂಜನನ ಕಣ್ಣುಗಳಿಂದ ನೀರುಹರಿಯುತ್ತಿದ್ದಿತು. ಬಹು ಕಷ್ಟದಿಂದ ನಭೆಯನ್ನು ಒಮ್ಮೆ ನೋಡಿದನು. ಮತ್ತಷ್ಟು ನೀರು ಹೆಚ್ಚಿತು.

ನಭಾ:— ನಿರಂಜನನನ್ನು ನೋಡಿ “ಅಣ್ಣಾ! ನೀನು ಸ್ತ್ರೀಯರಂತೆ ಶೋಕವನ್ನು ವಹಿಸಿ, ಹೀಗೇಕೆ ಕಣ್ಣೀರು ಸುರಿಸುವೆ ? ವಿದ್ಯಾವಂತನಾಗಿ ಪ್ರಾಪಂಚಿಕ ಸ್ಥಿತಿಗಳನ್ನು ತಿಳಿಯದ ಮೂಢರಂತೆ ಅಳುವೆಯಲ್ಲ? ಮೂಢಳಾದ ನಾನೇ ವಿದ್ಯಾವಂತನಾದ ನಿನಗಿಂತ ಬುದ್ಧಿಶಾಲಿಯಾದಂತಾಯಿತು. ನೋಡು, ನಾನು ಎಷ್ಟು ಸಮಾಧಾನದಿಂದಿರುವೆನು ?”

ನಿರಂಜನ:— ಕಷ್ಟದಿಂದ ಮನಸ್ಸನ್ನು ಸಮಾಧಾನಪಡಿಸಿಕೊಂಡು “ತಾಯಿ! ಅಳುವುದನ್ನು ಬಿಟ್ಟೆನು. ನಾನಿನ್ನು ಹೊರಡಬೇಕು. ನನಗಾಗಿ ಸ್ನೇಹಿತರು ಕಾದಿರುವರು. ಮತ್ತೆ ಬರಲಾಗುವುದಿಲ್ಲ. ಏನಿದ್ದರೂ ಈಗಲೇ ಹೇಳಿಬಿಡು. ಚಿಕ್ಕಪ್ಪನು ನೀನು ಹೇಳುವುದನ್ನೆಲ್ಲ ಚೆನ್ನಾಗಿ ಕೇಳಿಕೊಂಡು ಬರುವಂತೆ ಹೇಳಿರುವನು.”

ನಭಾ:—ನಾನೇನು ಹೇಳಲಿ? ನನಗೇನೋ ಸಹಿಸಲಾರದಕಷ್ಟವಿಲ್ಲ. ಅಂತಹ ಕಷ್ಟಬಂದರೆ, ನಾನೇ ಹೊರಟುಬರುವೆನು.

ನಿರಂಜನ:— ಹಾಗಾಗಿದ್ದರೆ, ಸದ್ಯದಲ್ಲಿ ನನ್ನಿಂದ ಆಗಬೇಕಾದುದೇನೂ ಇಲ್ಲವೆ?

ನಭಾ:— ಮತ್ತೇನೂ ಇಲ್ಲ; ನಾನು ವೃಥಾಕಾಲಹರಣಮಾಡಲಾರೆನು. ನನ್ನಂತಹ ವಿಯೋಗಿನಿಯರಿಗೆ ಉಚಿತವೂ ಇಹಜನ್ಮಧಾರಣೆಗೆ

ಸಾರ್ಥಕ್ಯವನ್ನುಂಟುಮಾಡುವುದೂ ಆದ ಉಪಾಯಸಾಧನವು ನಿನಗಾವು ದಾದರೂ ತಿಳಿದಿದ್ದರೆ ಹೇಳು.

ನಿರಂಜನ:— ತಾಯೀ ! ಸದ್ಬೋಧಾಮೃತವನ್ನುಂಟುಮಾಡುವ ಸದ್ಗ್ರಂಥಸಮಾಲೋಚನೆಯೊಂದಲ್ಲದೆ. ನಿಮ್ಮಂತಹರಿಗೆ ಮತ್ತಾವುದೂ ಉಚಿತವಾದುದಿಲ್ಲವೆಂದು ತಿಳಿ.

ನಭಾ:— ನನಗೆ ಹೇಗೆತಾನೇ ಸಾಧ್ಯವಾಗುವುದು?

ನಿರಂಜನ:—ಎಲ್ಲವೂ ಸಾಧ್ಯವಾಗುವುದು. ನಭಾ! ಈಗಣ ವ್ಯಾಸಂಗವೆಂಬುದು ಕೇವಲ ಭಯಂಕರವೇ ಆಗಿರುವುದಲ್ಲದೆ, ವಿದ್ಯಾವ್ಯಾಸಂಗವಾಗಿರುವುದಿಲ್ಲ. ಆ ವಿದ್ಯಾಭ್ಯಾಸವಾಗಲಿ ಅದರ ಫಲವಾಗಲಿ ನಿನಗೆ ಬೇಡ. ಅಂತಹ ವಿದ್ಯಾಪಾರಂಗತರಾದ ಅನೇಕ ಮಂದಿ ಸ್ತ್ರೀಯರು ಸಮಾಜಸುಧಾರಣೆ, ದೇಶೋದ್ಧಾರಕಾರ್ಯಗಳೆಂದು ಹೊರಹೊರಟು ನಾಗರಿಕತೆಯನ್ನೂ ದೇಶವನ್ನೂ ನಾಶಮಾಡುತಿರುವರೆಷ್ಟು ಬಹುದು. ಈಗ ಸುಶಿಕ್ಷಣವು ಮಲಿನವಾಗುತಲಿದೆ. ಬಾಲ್ಯದಲ್ಲಿ ಸುಶಿಕ್ಷೆಯಿಲ್ಲದೆ, ವಿದ್ಯಾಭ್ಯಾಸವು ವಿಪರೀತವಾಗಿ ಪರಿಣಮಿಸುತಿರುವುದು. ಮಾಡತಕ್ಕುದೇನು? ಆದರೂ.....................

ನಭೆಗೆ ಪ್ರಪಂಚದ ಸ್ಥಿತಿಯೂ ಸ್ವಲ್ಪಮಟ್ಟಿಗೆ ಗೊತ್ತು; ಅವಳು ಸಂಕಟದಿಂದ ಹೇಳಿದಳು:—"ಅಣ್ಣಾ! ನನಗಂತಹ ವಿದ್ಯೆ ಆವಶ್ಯಕವಿಲ್ಲ. ಈವರೆಗಿನ ಬಾಲ್ಯದ ಸುಶಿಕ್ಷಣವು ಹೃದಯದಲ್ಲಿ ದೃಢವಾಗಿರುವುದು. ಹಿಂದಿನ ವಿದ್ಯಾಭ್ಯಾಸವು ಮುಂದಿನ ಮಾರ್ಗಕ್ಕೆ ಸಹಕಾರಿಯಾಗಿದ್ದರೆ, ಸಾಕಾಗಿದೆ. ಸ್ತ್ರೀಜನಸಹಜವಾದ ಭಯ, ಚಾಪಲ್ಯ, ಅಭಿಮಾನ, ಅಸೂಯೆ, ದುಃಖಾದಿಗಳು ನಿಃಶೇಷವಾಗಿ; ಧೈರ್ಯ, ಸ್ಥೈರ್ಯ, ಸ್ವಾರ್ಥತ್ಯಾಗ, ದೃಢಸಂಕಲ್ಪ, ಮನಶ್ಶಾಂತಿ, ಸಂತೋಷಾದಿಗಳು ಮನದಲ್ಲಿ ಬೇರೂರಿ, ದೇಶಸೇವೆಯಲ್ಲಿ ಮುಂಬರಿದು ಬಂದು ನಿಲ್ಲುವಂತಾಗುವ ವರೆಗೂ ನಾನು ಜನಗಳ ದೃಗ್ಪಥಕ್ಕೆ ವಿಶೇಷವಾಗಿ ಬೀಳಲಾರೆನು. ಸದ್ಯದಲ್ಲಿ ಅಂತಹ ಶಕ್ತಿ ನಿನ್ನ ಸತ್ಪರಾಮರ್ಶದಿಂದಲ್ಲದೆ ಮತ್ತೇತರಿಂದಲೂ ಸಾಧ್ಯವಾಗಲಾರದೆಂದು ನಂಬಿರುವೆನು."

ನಿರಂಜನ:—ತಾಯೀ, ಹಾಗೆಯೇ ಮಾಡು. ನನ್ನ ಕೈಯಲ್ಲಾ

ಗುವ ವರೆಗೂ ನಾನು ನಿನಗೆ ಸರಿಯಾದ ಉತ್ತೇಜನವನ್ನು ಕಲ್ಪಿಸಿಕೊಡು ತಿರುವೆನು. ಆದರೆ, ನೀನು ಎಲ್ಲಿಯುವರೆಗೆ ಈ ಕೊಲೆಪಾತಕರ ಕೈಯ ಲ್ಲಿರುವೆಯೋ ಅಲ್ಲಿಯುವರೆಗೂ ನನಗೆ ಸಂತೋಷವಿಲ್ಲ.

ನಭಾ:— ಹೇಗಾದರೂ ಆಗಲಿ; ನೀನು ನನಗೆ ಪದೇ ಪದೇ ಸದ್ಗ್ರಂಥಗಳನ್ನು ಕಳುಹಿ ಕೊಡುತ್ತಿರಬೇಕೆಂಬುದೇ ನನ್ನ ಮುಖ್ಯ ಪ್ರಾರ್ಥನೆ.

ನಿರಂಜನ:— ಹಾಗೆಯೇ ಆಗಲಿ! ದೇವರು ನಿನಗೆ ಒಳ್ಳೆಯದನ್ನು ಮಾಡಲಿ! ಆದಷ್ಟು ಜಾಗ್ರತೆಯಾಗಿ ನಿನ್ನನ್ನು ಚಿಕ್ಕಪ್ಪನು ಕರೆಸಿಕೊಳ್ಳು ವನು. ಅವನು ಕರಸಿಕೊಳ್ಳುವ ವರೆಗೂ ಹೇಗಾದರೂ ಮಾಡಿ ತಾಳಿ ಕೊಂಡಿರು.

ನಿರಂಜನನು ಈ ರೀತಿ ಹೇಳಿ ಹೊರಟನು. ಶರಾವತಿಯು ನೀರು ತರಲು ಹೊರಗೆ ಹೋಗಿದ್ದವಳು, ಬಾಗಿಲಕಡೆಗೇ ನೀರು ತರುತ್ತಿದ್ದಳು. ನಿರಂಜನನು ಶರಾವತಿಯನ್ನು ನೋಡಿದರೂ ನೋಡದವನಂತೆ ಮುಂದೆ ಹೊರಟನು. ಶರಾವತಿಯು ಮನೆಯೊಳಗೆ ಕಾಲಿಟ್ಟು ನಿಟ್ಟುಸಿರುಬಿಟ್ಟು, "ಅದ್ಯಾವನೆ, ಈಗ ತಾನೇ ಹೊರಗೆ ಹೊರಟುಹೋದವನು?" ಎಂದಳು.

ನಭಾ:—ಅಮ್ಮಾ! ಇದೇಕೆ, ಅವನು ನಿರಂಜನನಲ್ಲವೆ?

ಶರಾವತಿ:—ಅವಾಗ ಬಂದನೋ, ನನಗೇನು ಗೊತ್ತು?

ನಭಾ:— ಈಗ ತಾನೇ ಬಂದನಂತೆ!

ಶರಾ:— ಅದೇಕೆ, ಹೊರಟುಹೋದ?

ನಭಾ:—ಸ್ನೇಹಿತರು ಕಾದಿರುವರಂತೆ; ಅದಕ್ಕೆ ಹೊರಟುಹೋದ!

ಶರಾ:— ಅದೇನು? ನನ್ನನ್ನು ಕಂಡರೂ ಮಾತನಾಡಿಸದೆ ಹೋಗು ವಷ್ಟು ದ್ವೇಷ?

ನಭಾ:— ನಾನೇನು ಬಲ್ಲೆ? ದ್ವೇಷವೆಂದರೇನು? ಏಕೆ?

ಶರಾ:— ನಾನೇನುಬಲ್ಲೆ! ನಿಮ್ಮ ಗುಣವನ್ನು ನಾನು ಚೆನ್ನಾಗಿ ಬಲ್ಲೆನೆ! ಅವನು ಹೇಗೆ ಬೇಕಾದರೂ ನಡೆಯಲಿ; ನನಗಿರುವ ಅಭಿಮಾ ನವು ಹೋಗುವುದೇನು? ಕರೆ, ಒಂದುಸಲ ನೋಡಿಯಾದರೂ ಸಂತೋಷ ಪಡುವೆನು.

ನಭೆಯು ಬೀದಿಯ ಬಾಗಿಲಿಗೆ ಹೋಗಿ ಕೂಗಿದಳು. ನಿರಂಜನನ ಕಿವಿಗೆ ಕೂಗು ಕೇಳಿಸಿದೊಡನೆಯೇ ಹಿಂದಿರುಗಿ ಬಂದು, "ನಭಾ! ಏನು?" ಎಂದನು. ನಭೆ "ಅಮ್ಮನು ಕರೆಯುತ್ತಾಳೆ." ಎಂದಳು.

ನಿರಂಜನನು ಸಂತೋಷದಿಂದ ಮನೆಯೊಳಕ್ಕೆ ಪ್ರವೇಶಿಸಿದನು. ಶರಾವತಿಯು ಕೋಪದಿಂದಲೇ, ಕೊಡವನ್ನು ಹೊತ್ತಂತೆಯೇ 'ಅದೇನು, ಕಂಡರೂ ಕಾಣದಂತಹ ದ್ರೋಹ? ನಾನೇನು ಅಂತಹ ದ್ರೋಹವನ್ನು ಮಾಡಿರುವೆನು? ಈ ದ್ವೇಷವೇಕಪ್ಪ? ಮಾತನಾಡಿಸದೆ ಹೋಗುವಷ್ಟು ದುರಹಂಕಾರವೆ?"

ನಿರಂಜನ:—ನೀನು ಬೇಕಾದುದನ್ನು ಹೇಳಬಹುದು. ನಿನ್ನ ಸ್ವಭಾವವು ನನಗೆ ತಿಳಿಯದೆ? ಈಗ ಕರೆಯಿಸಿದುದೇಕೆ? ಸುಮ್ಮನೆ ವ್ಯಾಜ್ಯ ತೆಗೆಯಲೊ? ಇಲ್ಲ—ಕೆಲಸವೇನಾದರೂ ಉಂಟೊ?

ಶರಾವತಿ:—ನಿನಗೇನು, ತಲೆ ತಿರುಗುವುದೊ? ನನ್ನ ಸ್ವಭಾವವು ನಿನಗೇನು ತಿಳಿದಿದೆಯೊ? ಏನು ತಲೆಯಲ್ಲಾ ಹರಟುವೆ?

ನಿರಂಜನ:—ಅಮ್ಮಾ! ತಪ್ಪಾಯಿತು. ಕ್ಷಮಿಸು. ಹೋಗಲಿ. ನನಗಾಗಿ ಎಷ್ಟು ಹೊತ್ತು ಕೊಡವನ್ನು ಹೊತ್ತುಕೊಂಡು ನಿಂತಿರುವೆ? ಕೆಳಗಿಡಬಾರದೆ?

ಶರಾವತಿಯು ಹುಬ್ಬು ಗಂಟುಹಾಕಿಕೊಂಡು ಕಣ್ಣೀರನ್ನು ಸುರಿಸುತ್ತ, "ಹೋಗು, ಹೊಗು; ನನ್ನ ಮುಂದಿನ ಹುಡುಗರೂ ನನ್ನನ್ನು ಅನ್ನುವಂತಾದರು. ಅಯ್ಯೋ! ಹಣೆಯಬರಹ! ಏಕೆ ಬಂದಿದ್ದೆ?"

ನಿರಂಜನ:— ಕೆಲವು ಮಂದಿ ಸ್ನೇಹಿತರೊಡನೆ ಶಾಲಾಕಾರ್ಯ ಗೌರವದಿಂದ ಬಂದಿದ್ದೆನು. ಹಾಗೆಯೇ ನಿಮ್ಮನ್ನೂ ನಭೆಯನ್ನೂ ನೋಡಿಕೊಂಡು ಹೋಗಬೇಕೆಂದು ಇತ್ತ ಬಂದೆನು.

ಶರಾವತಿ:—ನಮ್ಮನ್ನು ನೋಡಲಿಲ್ಲ? ನಭೆಯನ್ನು ನೋಡಲೆನ್ನಬಾರದೆ?

ನಿರಂಜನ:—ಹಾಗೆಯೇ ಆಗಲಿ! ಈಗ ನಿಮ್ಮಿಂದ ಆವ ಕಾರ್ಯವು ತಾನೇ ಆಗಬೇಕಾಗಿದೆ? ಅದಕ್ಕಾಗಿಯೇ ಹೋಗುತಿದ್ದೆ!

ಶರಾವತಿ:—ಏನು, ತಂದೆತಾಯಿಗಳಲ್ಲಿ ಕೆಲಸವಿಲ್ಲವೋ ? ತಂಗಿಯಲ್ಲಿ ಬಹು ಕಾರ್ಯವೋ ?

ನಿರಂಜನ:— ಎಲ್ಲವೂ ತಮ್ಮ ಪ್ರಸಾದ!

ಶರಾವತಿ:— ವಿದ್ಯಾವಂತನಾದುದರಿಂದಲೇ ಇಷ್ಟು ಅಹಂಕಾರವೆ? ನೀನೆಷ್ಟು ನೆಗೆದುಬಿದ್ದರೂ ಪೂರ್ವಿಕರ ಪಾಂಡಿತ್ಯ ನಿಮಗೆಲ್ಲಿ ಬರಬೇಕು?

ನಿರಂಜನ:— ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕಾಡುಪಾಲು ಮಾಡಲು ಅಂಜದೆ, ಸಾಕಿ ಸಲಹಿದ ಹುಡುಗಿಯರನ್ನು ದ್ರವ್ಯಾಶೆಯಿಂದ ಜೀವಶ್ಯವಕ್ಕಾದರೂ ಕೊಡಲೊಪ್ಪುವ ಪರಮಪಾಂಡಿತ್ಯವು—ಈಗಿನ ಪ್ರಪಂಚವನ್ನೆಲ್ಲ ಭ್ರಾತೃಭಾವದಿಂದ ನೋಡಬೇಕೆಂಬುವ ನಾಗರಿಕರ ಪಾಂಡಿತ್ಯಕ್ಕೆ ಸಮವಾಗುವುದೆ?

ಶರಾವತಿ:— ನಿಮ್ಮ ವಿದ್ಯೆ ಹಾಳಾಗಲಿ! ಹಾಳು ಸುದ್ದಿಯಿಂದ ನನಗಾಗುವುದೇನು ? ಬಂದವನು ನಿನ್ನ ತಂದೆಯನ್ನು ನೋಡುವೆಯೊ? ನೋಡುವುದಿಲ್ಲವೊ?

ನಿರಂಜನ:—ಹೊತ್ತಾಯಿತು; ಕೆಲಸವಿದೆ.

ಶರಾವತಿ:—ಊಟವನ್ನಾದರೂ ಮಾಡಿಕೊಂಡು ಹೋಗು.

ನಿರಂಜನನು:—"ನನಗಾಗಿ ವೃಥಾ ಕಷ್ಟಪಡಬೇಕಾಗಿಲ್ಲ. ನಾನು ಮತ್ತೊಮ್ಮೆ ಬಂದಾಗ ಊಟಮಾಡಿಯೇ ಮಾಡುವೆನು. ಈಗ ಹೊರಡುವೆನು." ಎಂದು ಹೇಳುತ್ತ ಹೊರಟುಹೋದನು.

ಶರಾವತಿಯು ಕ್ರೋಧಾನಲಮಧ್ಯದಲ್ಲಿ ನಿಂತು ಸಂತಪಿಸುತ್ತ, ಮೈಮುರಿದು, "ಏನು ಕೇಡಗಾಲದ ಹುಡುಗರು? ಎಷ್ಟು ದುರಹಂಕಾರ? ಮುಖವನ್ನು ನೋಡಿದರೆ, ದೇಹವೆಲ್ಲ ಉರಿದುಹೋಗುವುದು. ಹಡೆದ ತಂದೆ ಹುಲ್ಲುಕಡ್ಡಿಗಿಂತ ಕಡೆ !" ಎಂದು ಮುಂತಾಗಿ ಹೇಳಿಕೊಳ್ಳುತ್ತ ಪಾಕಶಾಲಾಭಿಮುಖಳಾದಳು.

## ಪಂಚಮ ಪರಿಚ್ಛೇದ.

( ವಿಮರ್ಶೆ. )

ಪ್ರತಾಪಶಾಲಿಯಾದ ಜಗಚ್ಚಕ್ಷುವು ನಭೋಮಂಡಲಮಧ್ಯವರ್ತಿಯಾಗಿ ಪ್ರಜ್ವಲಿಸುತ್ತಿದ್ದನು. ಪಶುಪಕ್ಷಿಗಳು ವೃಕ್ಷಚ್ಛಾಯೆಯನ್ನನುಸರಿಸಿ ಮಲಗಿದ್ದುವು. ಬೀದಿಯಲ್ಲಿ ಒಬ್ಬರಾದರೂ ತಿರುಗಾಡುತಿರಲಿಲ್ಲ. ಸಾಧಾರಣವಾಗಿ ಎಲ್ಲಾ ಮನೆಗಳ ಬಾಗಿಲುಗಳನ್ನೂ ಹಾಕಿದ್ದರು. ಪ್ರತಾಪಶಾಲಿಯಾದ ಕ್ರೋಧಮಹಾಪುರುಷನ ಶಕ್ತಿಕೂಡ ಇಂತಹ ಸಮಯದಲ್ಲಿಯಲ್ಲವೆ ಹೆಚ್ಚಿರುವದು ? ಈ ಮಹಾಪುರುಷನ ಕೈಯಿಂದಾಗದ ಕಾರ್ಯವಾವುದು ?

ಶರಾವತಿಯು ದುರ್ಜಯಕ್ರೋಧಮಹಾರಾಜನ ಸಮಾವೇಶದಿಂದ ಬಲುಬೇಗ ಅಡುಗೆಯನ್ನು ಮುಗಿಸಿದಳು. ಗಂಡನು ಊಟಕ್ಕೆ ಬಂದು ಕುಳಿತುಕೊಳ್ಳುವವರೆಗೂ ಸುಮ್ಮನೆಯೇ ಇದ್ದಳು. ಶಂಕರನು ಊಟಕ್ಕೆಂದು ಎಲೆಯಮುಂದೆ ಕುಳಿತನು. ಅವನನ್ನು ನೋಡಿ ಹುಬ್ಬುಗಂಟಿಕ್ಕಿಕೊಂಡು ಕರ್ಕಶಸ್ವರದಿಂದ "ಏನು, ನಿಮ್ಮ ಮಗನು ಊಟಕ್ಕೆ ಬರುವನೋ ಇಲ್ಲವೋ?" ಎಂದು ಕೇಳಿದಳು. ಶಂಕರನಾಥನು ಚಮಕಿತನಾಗಿ "ಏನು, ಯಾರು? ನಿರಂಜನನು ಬಂದಿರುವನೆ? " ಎಂದು ವಿಚಾರಿಸಿದನು.

ಶರಾವತಿ:— ಆ ತಲೆಹರಟೆಯವನೇ ಬಂದಿರುವನು.

ಶಂಕರ:— ಆವಾಗ ಬಂದನಂತೆ ?

ಶರಾವತಿ:— ಆರಿಗೆ ಗೊತ್ತು? ಬೆಳಿಗ್ಗೆ ಇಲ್ಲಿಗೆ ಬಂದಿದ್ದನು.

ಶಂಕರ:— ಏಕೊ?

ಶರಾವತಿ:— ತಂಗಿಯನ್ನು ನೋಡುವುದಕ್ಕೇನೊ ?

ಶಂಕರ:— ನನ್ನನ್ನು ನೋಡಲಿಲ್ಲವೇಕೆ ?

ಶರಾವತಿ:— ನೀವು ಮಾಡಿರುವ ದ್ರೋಹಕ್ಕೆ ನಿಮ್ಮ ಮುಖವನ್ನೂ ನೋಡಬೇಕೆ?

ಶಂಕರ:— ಹಾಗೆಂದರೇನು ? ಅವನು ಹೇಳಿದುದನ್ನು ಸರಿಯಾಗಿ ಹೇಳಬಾರದೆ ?

ಶರಾವತಿಯು ನಭೆಯ ಕಡೆಗೆ ತಿರುಗಿ " ಏನೆ ! ಅವನೇನು ಹೇಳಿದನೆ ? " ಎಂದಳು.

ನಭಾ:— ಅವನಿಗೇನೋ ಕೆಲಸವಿದ್ದುದರಿಂದ ಸ್ನೇಹಿತರೊಡನೆ ಬಂದಿದ್ದನಂತೆ! ಅವರು ಕಾದಿದ್ದರಿಂದ ಹೊರಟುಹೋದನು.

ಶಂಕರ:— ಊಟಕ್ಕೇನು ಮಾಡುವನಂತೆ ?

ನಭಾ:— ಸ್ನೇಹಿತರೊಡನೆ ಇರುವಾಗ ಊಟಕ್ಕೇಕೆ ಚಿಂತೆ ?

ಶಂಕರ:— ಹಿಂದಿರುಗಿ ಹೋದನೋ ?

ನಭಾ:— ಸಾಯಂಕಾಲ ಹೊರಡುವನಂತೆ !

ಶಂಕರನಾಥನು ಹಸಿದಿದ್ದನು. ಹಸಿದ ಹಾರುವನ ಬುದ್ಧಿಸ್ಥಿತಿಯನ್ನು ವರ್ಣಿಸಲಸಾಧ್ಯ ! ಅವನು ಸ್ವಭಾವತಃ ಕೋಪಿಷ್ಠನಾದರೂ ಪುತ್ರವ್ಯಾಮೋಹದ ಪ್ರೇರಣೆಯಿಂದ ಶಾಂತನಾಗಿ, " ಈಗಲೇ ಎಲ್ಲಿರುವನೋ ನೋಡಿ ಕರತರುವೆನು. ಪಾಪ! ಇದೊಂದು ದಿನವಾದರೂ ನನ್ನ ಸಂಗಡ ಊಟಮಾಡಲಿ! " ಎಂದು ಮೇಲಕ್ಕೆದ್ದನು.

ಶರಾವತಿಯು ಕಿಡಿಕಿಡಿಯಾಗಿ "ನೀವು ಬುದ್ಧಿಯನ್ನೆಲ್ಲಿಟ್ಟಿರುವಿರಿ? ಜ್ಞಾನವಿದೆಯೋ ಇಲ್ಲವೋ ? ಮಾನಮರ್ಯಾದೆಗಳೇ ತಿಳಿಯದ ಮೇಲೆ ಅವನು ಇದ್ದರೇನು ? ಸತ್ತರೇನು ? ಮನಸ್ಸಿಗೆ ಬಂದಂತೆಲ್ಲ ಬಗುಳಿ ಹೋದ ಆ ನಾಯಿಯನ್ನು ಹುಡುಕಿಕೊಂಡು ಹೋಗುವುದಂತೆ! ನಾಚಿಕೆಯಿಲ್ಲವೇ? " ಎಂದು ಆರ್ಭಟಿಸಿದಳು.

ನಭೆಗೆ ಸ್ವಲ್ಪ ಕೋಪಬಂದಿತು. ಆದರೂ ಸಮಾಧಾನ ಮಾಡಿಕೊಂಡು, "ಅಮ್ಮ! ನೀನು ದೊಡ್ಡವಳು. ಅವನೆಷ್ಟೇ ಆದರೂ ಚಿಕ್ಕವನು. ಅವನು ತಿಳಿಯದೆ ಒಂದೆರಡು ಮಾತಾಡಿದ್ದರೂ ನೀನು ಕ್ಷಮಿಸಬೇಕು. ಏನೂ ಇಲ್ಲದೆ ಅವನನ್ನು ನಾಯಿ ಸರಿಯೆಂದು ಸುಮ್ಮನೆ ಅಪ್ಪನನ್ನೇಕೆ ಸಿಟ್ಟಿಗೆಬ್ಬಿಸುವೆ ? " ಎಂದಳು.

ಶರಾವತಿ:— ನಾಯಿಯಷ್ಟೇ ಅಲ್ಲವೇ ? ಅದು ಹುಚ್ಚನಾಯಿ.

ನಭಾ:— ಹಾಗೆಯೇ ಆಗಲಿ. ನಾಯಿಯಲ್ಲಿರುವ ಸ್ವಾಮಿಭಕ್ತಿ,

ಕೃತಜ್ಞತೆ, ಸಂತ್ಯಸಂಧತೆಗಳೇ ಮೊದಲಾದ ಸದ್ಗುಣಗಳಾದರೂ ಅವನಲ್ಲಿ ದೆಯೊ ಇಲ್ಲವೊ ?

ಶರಾವತಿಯು ಪುನಃ ಅದೇ ಕುಪಿತಸ್ವರದಿಂದ, " ಸಾಕು, ಬಿಡಿ! ನಿನ್ನ ಹರಟೆ. ನಿನ್ನನ್ನು ಮಧ್ಯಸ್ಥಕ್ಕೆ ಇಲ್ಲಿ ಕರೆಯಲಿಲ್ಲ. ಹಾಕಿದ್ದನ್ನು ತಿಂದುಕೊಂಡು ಬಿದ್ದಿರಬೇಕಾದ ರಂಡೆಗೇಕೇ, ಈ ಸುದ್ದಿಗಳು ? " ಎಂದಳು.

ಶಂಕರ;—ಹೋಗಲಿ, ಬಿಡಿ; ಅವನು ನಾಯಿಯಾದರೂ ಆಗಲಿ, ಕತ್ತೆಯಾದರೂ ಆಗಲಿ. ಹೇಗಿದ್ದರೂ ನನಗೆ ಮಗನೇ. ನಿನ್ನ ಇಷ್ಟದಂತೆಯೇ ಆಗಲಿ. ಈಗ ಊಟಕ್ಕೆ ಬಡಿಸು.

ಊಟವಾಯಿತು. ಶಂಕರನಾಥನಿಗೆ ಮನಸ್ಸು ನಿಲ್ಲಲಿಲ್ಲ. ಎಲೆಯಡಕೆ ಹಾಕಿಕೊಂಡು, ನಿರಂಜನನು ಇಳಿದಿದ್ದ ಮನೆಗೆ ಹೊರಟನು. ಆದರೆ, ಅವನು ಅಲ್ಲಿರಲಿಲ್ಲ. ಹತಾಶನಾಗಿ ಮನೆಗೆ ಹಿಂದಿರುಗಿದನು. ಅವನ ಆಗಮನವನ್ನೇ ನಿರೀಕ್ಷಿಸುತ್ತ ಶರಾವತಿಯು ಬೀದಿಯ ಬಾಗಿಲಿನಲ್ಲಿಯೇ ನಿಂತಿದ್ದಳು. ಅವನು ಹೊಸಲನ್ನು ಮೆಟ್ಟಿದೊಡನೆಯೇ "ಏನು! ನಿಮಗೂ ಆಯಿತೋ ? "

ಶಂಕರನಾಥನು ಅಸಮಾಧಾನದಿಂದ " ಅವನು ಮನೆಯಲ್ಲಿಲ್ಲ." ಎಂದನು.

ಶರಾವತಿ:— ಎಲ್ಲಿ ಹಾಳಾಗಿ ಹೋದ?

ಶಂಕರ:— ಎಲ್ಲಿಯೋ ಯಾರು ಬಲ್ಲರು ?

ಶರಾವತಿಯ ಮುಖವು ಪ್ರಫುಲ್ಲವಾಯಿತು. ಅವಳು ಸ್ವಲ್ಪ ನಕ್ಕು " ಹೋಗಲಿ, ಬಿಡಿ. ಅದಕ್ಕೇಕೆ ಆಲೋಚಿಸುವಿರಿ ? ಅವನು ನಿಮ್ಮನ್ನು ಎಂದು, ಕಸಕ್ಕಿಂತ ಕಡಿಮಾಡಿದನೋ ಅಂದೇ ಅವನು ನಿಮ್ಮ ಭಾಗಕ್ಕೆ ಸತ್ತಂತಲ್ಲವೆ ? " ಎಂದಳು.

ಶಂಕರ:—ನೀನು ಹೇಗೆ ಬೇಕಾದರೂ ಹೇಳು. ನನ್ನ ಮನಸ್ಸೇನೋ ಸಮಾಧಾನವಾಗಿಲ್ಲ.

ಶಂಕರನಾಥನು ಬಹು ವ್ಯಾಕುಲಿತನಾಗಿ ಅಂಗಳದಲ್ಲಿಯೇ ಕುಳಿತಿದ್ದನು. ಒಬ್ಬ ಮನುಷ್ಯನು ಒಂದು ಪತ್ರವನ್ನು ತೆಗೆದುಕೊಂಡು ಬಂದು

ಅವನ ಕೈಗೆ ಕೊಟ್ಟನು. ಅದನ್ನು ನೋಡಿದೊಡನೆಯೇ ನಿರಂಜನನ ಹಸ್ತಾಕ್ಷರವೆಂದು ಬೋಧೆಯಾಯಿತು. ಶಂಕರನು ನಭೆಯನ್ನು ಕರೆದು, "ನಭಾ! ಈ ಪತ್ರವನ್ನು ಓದು; ನನಗೆ ಚೆನ್ನಾಗಿ ಕಾಣಿಸುವುದಿಲ್ಲ; ಇಲ್ಲವಾದರೆ, ಕನ್ನಡಕವನ್ನು ತೆಗೆದುಕೊಂಡು ಬಾ !" ಎಂದನು.

ನಭೆ, ಓದಲುಪಕ್ರಮಿಸಿದಳು. ಅದು ಈ ರೀತಿ ಬರೆಯಲ್ಪಟ್ಟಿದ್ದಿತು.

**"ಪೂಜ್ಯತಮ ಜನಕ!**

ಮನೆಗೆ ಬಂದ ನಾನು ತಮ್ಮನ್ನು ನೋಡದೆ ಹೊರಟುದಕ್ಕೆ ಅನೇಕ ಕಾರಣಗಳಿವೆಯೆಂಬುದು ತಮಗೆ ತಿಳಿಯದ ಅಂಶವಲ್ಲ. ಆ ಕಾರಣಗಳನ್ನು ಇಲ್ಲಿ ತಿಳಿಸುವುದಕ್ಕಿಂತ ತಮ್ಮ ದರ್ಶನವಿಲ್ಲದೆ ಹೊರಟುದಕ್ಕಾಗಿ ಕ್ಷಮೆ ಬೇಡುವೆನು.

ತಮ್ಮ ಬಳಿಯಲ್ಲಿ ನನ್ನ ಹೃದಯದ ಕ್ಲೇಶಗಳನ್ನು ಹೊರಪಡಿಸಿ ಅವಿಧೇಯತೆಯನ್ನೂ, ಹಿಂದಿನ ವಿಚಾರಗಳ ದೆಸೆಯಿಂದ ತಾಯಿಯ ವಿಷಯದಲ್ಲಿ ನನಗಿರುವ ಅಸಂತುಷ್ಟಿಯನ್ನೂ ತೋರ್ಪಡಿಸಿಕೊಳ್ಳಲು ಇಷ್ಟವಿಲ್ಲವಾದುದರಿಂದ ನೋಡಲಿಲ್ಲ.

ಪ್ರಿಯಜನಕ! ತಾವು ನನಗೆ ಚಿರಸ್ಮರಣೀಯರು; ವಂದನೀಯರು; ಪರದೇವತಾ ಸ್ವರೂಪರು. ಈ ವಿಷಯದಲ್ಲಿ ನಾನು ತಮಗೆ ಸ್ವಲ್ಪವಾದರೂ ಅವಿಧೇಯನಾಗಿರುವೆನೆಂದು ಭಾವಿಸಬಾರದು. ಮನಸ್ಸಿನಲ್ಲಿ ನಾಟಿರುವ ಕ್ಲೇಶವನ್ನು ತೊಲಗಿಸಿಕೊಳ್ಳಲು ಪ್ರಯತ್ನ ಪಡುತ್ತಿರುವೆನು. ಪ್ರಯತ್ನ ಸಾಫಲ್ಯವಾಗುವವರೆಗೂ ತಮ್ಮ ಸಮ್ಮುಖದಲ್ಲಿ ಬಂದು ನಿಲ್ಲಲಾರದಿರುವೆನು.

ಪೂಜ್ಯತಮ! ಧರ್ಮ, ದಯಾ, ದಾಕ್ಷಿಣ್ಯಾದಿಗಳನ್ನು ತೊರೆದು ಲೋಕಾಪವಾದ ಭೀತಿಯನ್ನು ಳಿದು, ಹೀಗೆ ಸ್ವರೂಪನಾಶಕಾರಿಗಳಾದ ತೃಷ್ಣಾಲೋಭಗಳೆಂಬ ಕ್ರೂರಪಿಶಾಚಿಗಳ ಕ್ಷುದ್ರಪಾಶಕ್ಕೊಳಗಾಗಿ, ವಿಚಾರವಿಮರ್ಶೆಯಿಲ್ಲದೆ, ತಾವು ಅಧೀರರಾಗಿರುವುದಕ್ಕಾಗಿ ವಿಷಾದಿಸುವೆನು. ಆದರೆ, ಮಾಡತಕ್ಕುದೇನು ? ಹೀಗೆ ಉದ್ವಿಗ್ನತೆಯಿಂದ ಮರ್ಯಾದೆ ಮೀರಿ ಬರೆದಿರುವೆನೆಂದು ಆಗ್ರಹಿಸಿ ಶಪಿಸದೆ, ಕ್ಷಮಿಸಲು ಬೇಡುವೆನು.

ಲೋಕದಲ್ಲಿ ಗಂಡಸರಿಗೆ ಮಾತಾಪಿತೃಸೇವೆಗಿಂತ ಹೆಚ್ಚಿನದು ಮ ತ್ತಾವುದೂ ಇಲ್ಲ. ಎಂದೆಂದಿಗೂ ತೀರಿಸಲಾಗದ ಮಾತೃಋಣವನ್ನು ಸ್ವಲ್ಪವಾದರೂ ತೀರಿಸಲು ನಾನು ಶಕ್ತನಾಗಲಿಲ್ಲ. ದೇವರಾಗಿರುವ ತಮ್ಮ ಸೇವೆಯೂ ಲಭ್ಯವಿಲ್ಲದಿರುವುದಕ್ಕಾಗಿ ಎಷ್ಟು ವಿಷಾದಿಸಲಿ? ಏನು ಮಾಡಲಿ ? ಭಾವೀಕರ್ತವ್ಯವನ್ನು ತಿಳಿದು ಹೇಳುವವರಾರು ? ಇನ್ನು ಮುಂದಾದರೂ ತಮ್ಮ ಸೇವೆ ದೊರೆತರೆ, ಸಂತೋಷದಿಂದ ಮಾಡಿ ಕೃತ ಕೃತ್ಯನಾದೇನು !

ಪೂಜ್ಯತಮೆ! ಆಗ್ರಹಗೊಳ್ಳದೆ, ಚಿರಕಾಲವೂ ನನ್ನ ಮನವು ಕರ್ತ ವ್ಯದಲ್ಲಿ ಕಟ್ಟುಬಿದ್ದಿರುವಂತೆ ಪುತ್ರವಾತ್ಸಲ್ಯದಿಂದ ಕಟಾಕ್ಷಿಸಿ, ಅನುಗ್ರಹಿ ಸಬೇಕೆಂಬುದೇ ನನ್ನ ಮುಖ್ಯಪ್ರಾರ್ಥನೆ.

ಇತಿ— ತಮ್ಮ ಪುತ್ರ,

**ನಿರಂಜನ.”**

ನಭೆಯು ಪತ್ರವಾಚನವನ್ನು ಮುಗಿಸಿ ಮಡಿಸಿ ಕೆಳಗಿಟ್ಟಳು. ಶಂಕ ರನಾಥನು ದುಃಖವನ್ನು ತಡೆಯಲಾರದೆ ಮಗುವಂತೆ ಅತ್ತುಬಿಟ್ಟನು. ಇದನ್ನೆಲ್ಲ ನೋಡುತ್ತಿದ್ದ ಶರಾವತಿಯು “ ಇದೇಕೆ, ಹೀಗೆ ಅಳುವುದು? ಸತ್ತವರಿಗೆ ಅಳುವುದಕ್ಕಿಂತ ಹೆಚ್ಚಾಗಿದೆಯಲ್ಲ, ಗೋಳು! ಏನು ಬಂದಿ ದೆಯೋ ಹಾಳುಸುದ್ದಿ?” ಎಂದು ಘರ್ಜಿಸಿದಳು.

ಶಂಕರ:-- ನಿನ್ನ ಮಾತು ಸಾಕು; ನಾನೇನೋ ಅಳುವೆನು. ಏನು ಮಾಡಲಿ? ಕೈಯ್ಯಲ್ಲಿರುವ ಹಣ್ಣು ಬಾಯಿಗೆ ಬಾರದು.

ಶರಾವತಿಯು ಬಹುಕೋಪದಿಂದ ಹೇಳಿದಳು:— “ ಹಾಗೋ ! ಕೈಯಲ್ಲಿರುವ ಫಲವನ್ನೇ ತಿನ್ನಿ. ಈಗಲೇ ನನ್ನನ್ನು ಕಳಿಸಿಕೊಟ್ಟುಬಿಡಿ. ನಿಮ್ಮಭಾಗಕ್ಕೆ ನಾನು ಸತ್ತಂತೆಯೇ ತಿಳಿಯಬಹುದು.”

ನಭೆಗೆ ಸಂಕಟವಾಯ್ತು. ಅವಳು ಹೇಳಿದಳು:— “ ಅಮ್ಮಾ, ನೀನು ಈಗ ಹೀಗೆ ಹೇಳಬಾರದು ! ”

ಶರಾವತಿಯು ಪುನಃ ಆದೇಕಂಠದಿಂದ “ ಸಾಕು, ಸಾಕು, ನಿಲ್ಲಿಸೆ! ನಿನ್ನ ನಾಲಗೆಯನ್ನು ಯಾರು ಕಾಣರು ? ನಿನ್ನ ವೇದಾಂತವನ್ನು ನಾನು

ಬಲ್ಲೆ! ನೀನು ಸರ್ವಜ್ಞಳು. ಆದರೆ, ಆ ಹಾಳು ಮೈಲಿಗೆಯು ಕೂದಲನ್ನು ತೆಗೆಸಲು ಮಾತ್ರ ತಿಳಿಯದಲ್ಲವೆ ? ”

ನಭಾ:— ಸುಮ್ಮನೆ ಕೂಗಿದರೇನುಫಲ ? ಅಮ್ಮಾ! ಮೈಲಿಗೆಯು ತಲೆಯ ಕೂದಲಿನಲ್ಲಿಲ್ಲ. ಅದಿರುವುದು ಮನಸ್ಸಿನಲ್ಲಿ.

ಶರಾವತಿ:—ಅಹುದಹುದು; ಶಾಸ್ತ್ರವೇ ಸುಳ್ಳು. ಶಾಸ್ತ್ರವನ್ನು ಬರೆದವರೂ ದಡ್ಡರು.

ನಭಾ:— ಕಾಲ, ದೇಶ, ವರ್ತಮಾನಗಳಿಗನುಸಾರವಾಗಿ ಶಾಸ್ತ್ರವೂ ಪರಿವರ್ತಿಸುವುದು. ಆ ಕಾಲದವರಿಗೆ ಅದು ಅವಶ್ಯವಾಗಿದ್ದಿತು; ಈ ಕಾಲಕ್ಕೇಕೆ ?

ಶರಾವತಿ:— ಈಗ ಶಾಸ್ತ್ರದಂತೆ ಆಚರಿಸುವರೆಲ್ಲ ಮೂರ್ಖರು. ಮುತ್ತೈಳರು. ನೀನೇ ಬಹು ಬುದ್ಧಿವಂತೆ !

ನಭಾ:— ಈ ರೀತಿ ಮಾಡಬೇಕೆಂದು ಆವ ಶಾಸ್ತ್ರದಲ್ಲಿಯೂ ಇರುವಂತೆ ಕಾಣೆ ! ಈ ಆಚಾರಗಳೆಲ್ಲವೂ ಸಂಪ್ರದಾಯಾನುಸಾರವಾಗಿ ಕೆಲವರು ತಮ್ಮ ಅನುಕೂಲಕ್ಕಾಗಿ ಆಚರಣೆಗೆ ತಂದಂತಹವು. ಆದರಿಂದ ಉಪಯೋಗವಾದರೂ ಏನೋ ?

ಶರಾವತಿ:—ಅಹುದಮ್ಮಾ—ಅಹುದು. ಆಚರಣೆಗೆ ತಂದವರು ಹುಚ್ಚರು. ನೀನು ಜಾಣೆ ! ನೀನೇಕೆ ಆಲೋಚನೆ ಮಾಡುವೆ ? ನೀನೇ ಬೇರೊಂದು ಧರ್ಮಶಾಸ್ತ್ರವನ್ನು ಬರೆದು ಆಚರಣೆಗೆ ತಂದುಬಿಡು.

ನಭಾ:—ಅಮ್ಮಾ! ತಲೆಯನ್ನು ಬೋಳಿಸಿಕೊಂಡ ಮಾತ್ರಕ್ಕೆ ಪವಿತ್ರರಾಗುವರೋ?

ಶರಾವತಿ:— ಕೂದಲನ್ನು ತೆಗೆಸಲು ಇಷ್ಟವಿಲ್ಲೆಂದು ಹೇಳು ! ಅಷ್ಟನ್ನು ಹೇಳಲು ಎಷ್ಟು ತತ್ವಗಳನ್ನು ತಂದೊಡ್ಡುವಿಯೆ? ಏನಾದರೂ ಮಾಡಿಕೊ! ಹಾಳಾಗು !!

ನಭಾ:—ಒಳ್ಳೆ ಹೆಂಗಸು ಒಳ್ಳೆಯವಳೇ! ಕೆಟ್ಟವಳು ಕೆಟ್ಟವಳೇ! ಒಳ್ಳೆಯವಳು ಮುಂಡನಾದಿಗಳಿಂದಲೇ ಸಭ್ಯಳಾಗಿರುವಳೆಂದು ಹೇಳುವಂತಿಲ್ಲ. ಸತೀಧರ್ಮಪರಾಯಣೆಯರು ಸರ್ವದಾ ಪರಿಶುದ್ಧರೇ ಅಹುದು.

ಶರಾವತಿ:— ಹೇಗಾದರೂ ಹಾಳಾಗವ್ವ !! ಯಾರಿಗೇನು ? ಹೇಳುವಂತೆ ಕೇಳುವುದಾದರೆ ಸರಿ; ಯಾವನಾದರೊಬ್ಬ ಬ್ರಾಹ್ಮಣನಿಗೆ ಒಂದು ಪಂಚಪಾತ್ರೆ ನೀರನ್ನಾದರೂ ಕೊಟ್ಟರೆ, ಜನ್ಮಸಾರ್ಥಕವಾದೀತು; ಅದಕ್ಕೂ ಅಧಿಕಾರವಿಲ್ಲದೆ, ಸಾಯುವೆ! ನಿನ್ನ ಹಣೆಯಬರಹ! ಆರೇನು ಮಾಡಿಯಾರು?

ಸಭಾ:—ಯುಕ್ತಾಯುಕ್ತ ವಿಚಾರವೂ ಪಾತ್ರಾಪಾತ್ರ ತಾರತಮ್ಯವೂ ಇಲ್ಲದ ಕಪಟಾಚಾರನಿಷ್ಠನಾದ ಬ್ರಾಹ್ಮಣನಿಗೆ ನಾನು ನೀರು ಕೊಡುವದೇ ಇಲ್ಲ. ಅಂತಹ ಬ್ರಾಹ್ಮಣನಿಗೆ ನೀರು ಕೊಡುವದಕ್ಕಿಂತ ಪವಿತ್ರವಾದ ಕಾರ್ಯಗಳನ್ನು ಈ ಹಸ್ತವು ಮಾಡಬಲ್ಲುದು.

ಶರಾವತಿಗೆ ಉತ್ತರಕೊಡಲಾಗಲಿಲ್ಲ. ಅವಳು ಗಂಡನಕಡೆಗೆ ತಿರುಗಿ ಹೇಳಿದಳು:— "ಏಕೆ ಮಾತೇ ಇಲ್ಲ. ಮಂಕುಬಡಿಯಿತೇನು? ನನಗೇನು ಹೇಳುವಿರಿ ? "

ಶಂಕರ:— ಏಕೆ ?

ಶರಾವತಿ:— ನಿಮ್ಮ ಮಗನನ್ನು ಕರೆಯಿಸಿಕೊಳ್ಳಿರಿ; ನನ್ನನ್ನು ಕಳಿಸಿ ಬಿಡಿರಿ.

ಶಂಕರ:— ನಿನ್ನ ಮಾತಿನಂತೆ ನಡೆಯಲು ಮಗನನ್ನು ಎಂದೋ ತೊರೆದಾಗಿದೆ. ನಿನ್ನನ್ನೂ ಕಳುಹಿ ನಾನು ಮಾಡಲೇನು ?

ಶರಾವತಿ:— ಏನಾದರೂ ಮಾಡಿರಿ, ಯಾರಿಗೇನು? ಮಗಬೇಕೊ! ನಾನು ಬೇಕೊ ?

ಶಂಕರನು ನಿಟ್ಟುಸಿರುಬಿಡುತ್ತ—" ನನಗೆ ನೀನೇ ಬೇಕು." ಎಂದು ಮೆಲ್ಲಗೆ ಹೇಳಿ, ಸಭೆಯನ್ನು ಕುರಿತು " ಸಭಾ ! ಮಶೀದೌತಿ, ಲೇಖಣಿಯನ್ನು ತೆಗೆದುಕೊಂಡು ಬಾರವ್ವ! ಅವನಿಗೊಂದು ಕಾಗದವನ್ನಾದರೂ ಬರೆಯುವೆನು! " ಎಂದನು.

ಸಭೆ ತಂದಿಟ್ಟಳು. ಶಂಕರನು ಲೇಖನಿಯನ್ನು ಹಿಡಿದು ಒಂದೆರಡು ಪಂಕ್ತಿಗಳನ್ನು ಬರೆದನು. ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಸುರಿಯಲಾರಂಭವಾಗಿ ಕೈನಡುಗಲಾರಂಭವಾಯ್ತು. ಸಭೆಯು ಅವನ ಸ್ಥಿತಿಯನ್ನು ನೋಡಿ " ಅಪ್ಪಾ! ಇದೇನು, ನೀನು ಹೀಗೆ ಅಳುವುದು ಸರಿ

ಯಲ್ಲ." ಎಂದಳು. ಹಾಗೆಯೇ— ಅಳುತಲೇ ಕಾಗದವನ್ನು ಬರೆದು ಮುಗಿಯಿಸಿ, ನಭೆಯು ಕೈಗೆ ಕೊಟ್ಟು ಓದುವಂತೆ ಹೇಳಿದನು. ನಭೆಯು ಓದಿದಳು ಚಿರಂಜೀವಿ ನಿರಂಜನನಿಗೆ ವೇದೋಕ್ತ ಆಶೀರ್ವಾದಗಳು.

ನಿರಂಜನ! ನಿನ್ನ ಪತ್ರವು ಈಗತಾನೆ ಕೈಸೇರಿದೆ. ನಿನ್ನ ಸಂಕಲ್ಪವೂ ಇಲ್ಲಿಯ ವಿದ್ಯಮಾನಗಳೂ ನನಗೆ ತಿಳಿಯದೇಇದೆ. ನನ್ನ ಹೃದಯದಲ್ಲಿ ಈಗ ಇರುವ ಸ್ಥಿತಿಯನ್ನು ವರ್ಣಿಸಲು ಕೇವಲ ಅಶಕ್ತನಾಗಿರುವೆನು. ನಿನ್ನ ಕಾಗದಕ್ಕೆ ಏನು ಉತ್ತರವನ್ನು ಬರೆಯಬೇಕೊ ತಿಳಿಯದವನಾಗಿರುವೆನು. ಆದರೆ, ಇಹದಲ್ಲಿ ಪುತ್ರಸುಖವನ್ನು ನಾನೂ ಪಿತ್ರಸುಖವನ್ನು ನೀನೂ ತಿಳಿಯಲಸಮರ್ಥರಾಗಿರುವೆವು.

ಮತ್ತೇನು ಬರೆಯಲಿ? ಭಗವಂತನೇ ನಿನಗೆ ಶರಣನಾದುದರಿಂದ ಅವನೇ ನಿನ್ನನ್ನು ಕುಲವರ್ಧನನೂ, ಯಶಸ್ವಿಯೂ, ಧರ್ಮರತನೂ, ಚಿರಜೀವಿಯೂ ಆಗಿರುವಂತೆ ಮಾಡಲೆಂದು ಅವನನ್ನೇ ಅನನ್ಯಭಾವದಿಂದ ಪ್ರಾರ್ಥಿಸುತಿರುವೆನು.

ಇಂತು ಆಶೀರ್ವದಿಸುವ, ನಿನ್ನ ಜನಕ

**ಶಂಕರನಾಥ"**

ನಭೆಯು ಶಂಕರನಾಥನ ಇಷ್ಟಾನುಸಾರವಾಗಿ ಪತ್ರವನ್ನು ಮಡಿಸಿ, ನಿಯೋಗಿಯ ಕೈಯಲ್ಲಿಟ್ಟು, ನಿರಂಜನನಿಗೇ ಕೊಡುವಂತೆ ಹೇಳಿದಳು; ಭೃತ್ಯನು ಆಶ್ಚರ್ಯಚಕಿತನಾಗಿ ಹೊರಟುಹೋದನು.

ಸಹೃದಯರೆ ! ಶಂಕರನಾಥ ಶರಾವತಿಯರ ಗುಣಗಳ ವಿಚಾರ ವಿಮರ್ಶೆಯು ನಿಮ್ಮ ಹೃದಯದಲ್ಲಿ ನಡೆಯುತಲಿರಬಹುದಲ್ಲವೆ? ನಿಮ್ಮಲ್ಲಿ ಅನೃತವಾಡಲು ನಮಗಿಷ್ಟವಿಲ್ಲ. ಇದ್ದ ಸ್ಥಿತಿಗಳನ್ನು ಸಹಜವಾಗಿಯೇ ನಿಮ್ಮಮುಂದೆ ಇಟ್ಟಿರುವೆವು. ಅನ್ಯವಿಧವಾದ ಭಾವನೆಗೆ ಅವಕಾಶವಿಲ್ಲದಿದ್ದರೆ, ಒಳ್ಳೆಯದಲ್ಲವೆ ? ಅಲ್ಲಿಗಲ್ಲಿಗೆ ಕಾಣಿಸುತ್ತಿರುವ ಶರಾವತಿಯರಂತಹ ಹೆಂಗಸರನ್ನು ನೀವು ಹುಟ್ಟಿದಂದಿನಿಂದ ನೋಡಿಯೇ ಇಲ್ಲದಿದ್ದರೆ, ಅದು ನಮ್ಮ ಲೇಖನಿಯದಾಗಲೀ ನಮ್ಮದಾಗಲೀ ದೋಷವಲ್ಲ. ಅದು ನಿಮ್ಮ ಅನನುಭವದ ದೋಷ.

## ಷಷ್ಠ ಪರಿಚ್ಛೇದ.

( ಮಾತ್ಸರ್ಯ ಸಾಮ್ರಾಜ್ಯ )

**ಅರಿಷಡ್ವರ್ಗ**ಗಳಲ್ಲಿ ಮಾತ್ಸರ್ಯಮೂರ್ತಿಯ ಶಕ್ತಿಯು ಅನ್ಯಾದೃಶವಾದುದು. ಮಾತ್ಸರ್ಯಮಹಾರಾಯನ ವೀರಾವೇಶವನ್ನು ಹೊಂದಿದ ಮಹನೀಯರು ಸ್ವಸುಖವನ್ನು ನಾಶಮಾಡಿಕೊಳ್ಳುವರಲ್ಲದೆ, ಪ್ರಪಂಚವನ್ನೂ ಹಾಳುಮಾಡಬೇಕೆಂದು ಬಹುವಾಗಿ ಪ್ರಯತ್ನಿಸುವರು. ಮಾತ್ಸರ್ಯಮಹಾಪುರುಷನು ಹೃದಯದಲ್ಲಿ ಪ್ರವೇಶಿಸಿ, ಅಲ್ಲೇ ಬೆಳೆದು ಪ್ರಬಲಿಸಿ ಹೃದಯಕೋಶವನ್ನು ಒಡೆದು, ದೇಹವನ್ನೇ ನಾಶಮಾಡಲಂಜನು.

ಪ್ರಾಯಃ, ನಮ್ಮ ಭಾರತವರ್ಷದ ಸ್ತ್ರೀಮಂಡಳಿಯಲ್ಲಿ ಮಾತ್ಸರ್ಯರಾಯನ ವಿಲಾಸವು ಅಧಿಕವಾಗಿರುವುದರಿಂದಲೇ ಮಾತೃಭೂಮಿಯು ಇಂತಹ ಶೋಚನೀಯ ಸ್ಥಿತಿಯನ್ನು ಹೊಂದಿದೆಯೆನ್ನಬಹುದು. ಆ ದುಷ್ಟನನ್ನು ಜಯಿಸಿ, ಕೆಳಗೆಹಾಕಿ ತುಳದಿರುವ ಸ್ತ್ರೀಯರು ಬಹು ವಿರಳರೆನ್ನಬಹುದು. ಆ ದುಷ್ಟನ ಸಹವಾಸವು ಸ್ತ್ರೀಜನಾಂಗಕ್ಕೆ ಅತಿಯಾಗಿರುವುದರಿಂದಲೇ "**ನಾರೀ ಪ್ರತ್ಯಕ್ಷ ರಾಕ್ಷಸಿ**" ಇತ್ಯಾದಿ ವಚನಗಳು ರೂಢಿಗೆ ಬಂದವೆನ್ನಬೇಕಾದೀತು. ಹೇಗಾದರೂ ಆಗಲಿ!! ಆ ನೀಚನ ಸ್ನೇಹವನ್ನು ಬೆಳೆಯಿಸಿರುವ ಸ್ತ್ರೀಯರಾಗಲೀ, ಪುರುಷರಾಗಲೀ ರಾಕ್ಷಸ ಸ್ವಭಾವದವರೆಂದು ಹೇಳಲು ಅಡ್ಡಿಯಿಲ್ಲ.

ಪ್ರಕೃತ, ನಮ್ಮ ಶರಾವತಿಗೆ ನಾವು "ಅಭಿನವಶೂರ್ಪನಖಾ" ಎಂಬ ಬಿರುದನ್ನು ಬಹುಖೇದದಿಂದ ಕೊಡುವೆವು. ಅವಳ ಸಂಕುಚಿತ ಹೃದಯಕೋಶದಲ್ಲಡಗಿದ್ದ ಮಾತ್ಸರ್ಯ—ಕ್ರೋಧಮಹಾಪುರುಷರು ಬೆಳೆದು ಹೃತ್ಕೋಶವನ್ನೊಡೆದು ಹೊರಹೊಮ್ಮಿದರು. ಅಜೇಯರೆಂದೆನಿಸಿಕೊಂಡಿರುವ ಅವರನ್ನು ಜಯಿಸಲಾರದ ಶರಾವತಿಯು ಸಂಪೂರ್ಣವಾಗಿ ಅವರ ವಶವಾದಳು.

ನಿರ್ಭಾಗ್ಯಳಾದ ಸಭೆಯು ಇವಳ ದೃಷ್ಟಿಗೆ ಶೂಲ. ಸಭೆಯ ಸಹನ ಸೌಜನ್ಯತೆಗಳು ಹೆಚ್ಚಿದಂತೆಲ್ಲ ಶರಾವತಿಯ ಕ್ರೋಧ–ಮಾತ್ಸರ್ಯಗಳೂ ಪ್ರಬಲವಾಗುತ್ತ ಬಂದವು. ಆದುದರಿಂದ ಸಭೆ ಆ ಸಕೇಶಿ ಸಭೆ–ಮುಟ್ಟಿದುದೆಲ್ಲ ಅಶುದ್ಧ. ನೋಡಿದುದೆಲ್ಲ ಬಹಿಷ್ಕೃತ ಅವಳ ಸಹವಾಸಕ್ಕೊಳಪಟ್ಟುದೆಲ್ಲ ಪಂಚಗವ್ಯಪ್ರಾಯಶ್ಚಿತ್ತವಾಗಲೇ ಬೇಕು. ಇತ್ಯಾದಿ ನಿರ್ಬಂಧಗಳು ಹೆಚ್ಚಿದುವು. ಆಜ್ಞಾನುಸಾರವಾಗಿ ಮಾಡಿದ ಕಾರ್ಯವೂ ಕುಲಗೆಟ್ಟುಹೋಗುಳು. ಶರಾವತಿಯ ತೀಕ್ಷ್ಣವಾಕ್ಯಶರಪ್ರಯೋಗದಿಂದ ಸಭೆಯ ಮನವು ಪ್ರತಿಕ್ಷಣವೂ ಛಿನ್ನಭಿನ್ನವಾಗುತ್ತಿದ್ದಿತು. ಆದರೂ. ಅವಳು **“ಕ್ಷಮಾದಾನಂ, ಕ್ಷಮಾಯಜ್ಞಃ”** ಎಂಬ ಆರ್ಯಸೂತ್ರಾಧಾರದಿಂದಲೂ, ಪತಿಯ ಅಂತ್ಯಕಾಲದ ಆಜ್ಞಾವಚನಪ್ರತಿಪಾಲನಾಸಕ್ತಿಯಿಂದಲೂ, ಬಾಲ್ಯದ ಬಲವತ್ತರ ವಿದ್ಯಾಭ್ಯಾಸಬಲದಿಂದಲೂ, ಚಿತ್ತಸ್ಥೈರ್ಯದಿಂದಲೂ ಸಮಸ್ತವನ್ನೂ ಸೈರಿಸುತ್ತಿದ್ದಳು. ಎಷ್ಟೇ ಆದರೂ ಪಾಂಚಭೌತಿಕವಾದ ಮನುಷ್ಯದೇಹವಷ್ಟೆ? ಎಂತಹ ಸಂನ್ಯಾಸಿಗಳಾದರೂ ಪ್ರತ್ಯಹದ ಪರಂಪರಾರೂಪವಾದ ಪರಿತಾಪಜನಕ ವಿಷಯಗಳನ್ನು ಕೇಳಿ ತಡೆವುದು ಕಷ್ಟವಾಗಿದೆ! ಅದರಲ್ಲಿ ಅಬಲೆಯೂ ಅನಾಥೆಯೂ ಪತಿ–ಮಾತೃವಿಯೋಗದುಃಖದಿಂದ ಸಂತಪ್ತಹೃದಯಳೂ ಆಗಿರುವ ಸಭೆಯು ಎಷ್ಟೆಂದು ಸಹಿಸಬಲ್ಲಳು? ಆದರೂ, ಸಹಿಸಿದಳು; ಶಕ್ತಿಮೀರಿ ಸಹಿಸಿದಳು.

ಕೇಶರಾಶಿಯು ಜಡೆಗಟ್ಟಿತು. ಅಲಂಕಾರಾದಿಗಳು ಎಂದೋ ವಿಸರ್ಜಿಸಲ್ಪಟ್ಟುವು. ತೈಲಾಭ್ಯಂಗನಾದಿಗಳು ಮಾತೃಜೀವಿತಕಾಲದಲ್ಲಿಯೇ, ಅವಳಾ ರುಗ್ಣಶಯ್ಯೆಯೊಡನೆಯೇ. ಹೊರಟು ಹೋದುವು. ಇಹಸೌಖ್ಯಾಭಿಲಾಷೆಯಂತೂ ತಿಲಾಂಜಲಿಯನ್ನು ಕೈಗೊಂಡುದು. ಮತ್ತೇನು ? ಮತ್ತೆ ಉಳಿದಿರುವುದು “ಉದರಂಭರಣವೊಂದೇ !” ಪಾಪ! ಆ ಸತದೃಷ್ಟಳನ್ನು ಕ್ಷುದ್ಬಾಧೆಯು ಮಾತ್ರ ಬಿಡಲಾರದಿದ್ದಿತು. ಅದಕ್ಕಾಗಿ ಅವಳು ಬಹಳ ಚಿಂತಾಕುಲಳಾಗಿದ್ದಳು. ಒಮ್ಮೊಮ್ಮೆ ಸಾಧ್ಯವಾದಾಗ ಅದನ್ನು ಬಿಡುತ್ತಲೂ ಇದ್ದಳು. ಅದರೇನು ? ಇಷ್ಟಕ್ಕೆಲ್ಲಾ ಶರಾವತಿಯ ಆತ್ಮನು ತೃಪ್ತನಾಗಬಲ್ಲನೆ? ಊಟದ ವಿಷಯದಲ್ಲಿ ಆಕ್ಷೇಪಣೆಗಳು! ನಿದ್ದೆಗೆ ಆಕ್ಷೇಪಣೆಗಳು!! ಸಭೆಯು ತನಗೆ ಎಲ್ಲಾ

ನರಕಬಾಧೆಗಳೂ ಇಹದಲ್ಲಿಯೇ ಆಗಬೇಕೆಂಬ ದೈವಸಂಕಲ್ಪವಿದೆಯೆಂದು ನಂಬಿ ಕಾಲಚಕ್ರವನ್ನು ತಳ್ಳುತಿದ್ದಳು.

ನೆರೆಹೊರೆಯವರಲ್ಲಿ ಕೆಲವರು ನಭೆಯನ್ನೂ ಮತ್ತೆ ಕೆಲವರು ಶರಾವತಿಯನ್ನೂ ನಿಂದಿಸುತಿದ್ದರು. ನಭೆಯನ್ನು ನೋಡಲು ಅವಳ ಸಖಿಯರಾರಾದರೂ ಬಂದರೆ, ಅವರಿಗೆ ಚಂಡಾಲಸಹಸ್ರನಾಮವಾಗುತಿದ್ದಿತು. ಆದುದರಿಂದ ಯಾರೂ ಬರಲವಕಾಶವಿಲ್ಲ. ಮನೆಯಲ್ಲಾಗುವ ನಷ್ಟಗಳಿಗೆಲ್ಲಾ ನಭೆಯೇ ಕಾರಣ! ಎಲ್ಲ ಅಪವಾದಗಳಿಗೂ ನಭೆಯೇ ಗುರಿ! ಎಲ್ಲ ನಷ್ಟಕ್ಕೂ ನಭೆಯೇ ಮೂಲ! "ಅನಿಷ್ಟಕ್ಕೆ ಶನೀಶ್ವರನೇ ಗುರಿಯಲ್ಲವೆ?"

ನಭೆಗೆ ಕಾಲಹರಣಕ್ಕೂ ಮಾರ್ಗವಿಲ್ಲ. ನಿರಂಜನನು ಮಾತನಾಡಿಸಿ ಹೊರಟುಹೋದ ಇಪ್ಪತ್ತು ದಿನಗಳೊಳಗಾಗಿಯೇ ಈ ದುರವಸ್ಥೆಗಳೆಲ್ಲವೂ ಉಂಟಾದುವು. ನಭೆಯ ಈ ರೀತಿಯಾದ ದಾರುಣ ಮನೋರೋಗವು ಶಾರೀರಕರೋಗವಾಗಿ ಪರಿಣಮಿಸಿತು. ಜ್ವರಾದಿರೋಗಗಳು ಕಾಡಲುಪಕ್ರಮವಾದುವು ಹಾಸಿಗೆಹಿಡಿದು ಮಲಗಿಯೂ ಮಲಗಿದಳು. ಏನುಮಾಡಬಲ್ಲಳು? ಅಣ್ಣನಿಗೆ ಒಂದು ಕಾಗದವನ್ನು ಬರೆದು ಹಾಕಿದಳು ನಿರಂಜನನಿಗೆ ಕಾಗದವನ್ನು ಕಳುಹಿದ ದಿನವೇ ನಭೆಗೆ ಅತಿಶಯ ಜ್ವರ. ಜ್ಞಾನವಿಲ್ಲ. ಕೇಳುವವರಾರು? ಸಕೇಶಿ.—ವಿಧವೆ,—ಪ್ರಪಂಚದಲ್ಲಿ ಇಂಥವರು ಇದ್ದು ಆಗುವ ಪ್ರಯೋಜನವಾದರೂ ಏನು!

ಅಣುರೇಣುತೃಣಕಾಷ್ಠಪರಿಪೂರ್ಣನೂ, ಅನಾಥನಾಥನೂ ದಯಾಮಯನೂ ಆದ ಭಗವಂತನಲ್ಲದೆ ಇಂತಹರಿಗೆ ಬೇರೆ ದಿಕ್ಕಾರು? ಆತನೊಬ್ಬನಲ್ಲದೆ ನಭೆಯನ್ನು ಕೇಳುವವರು ಮತ್ತಾರೂ ಇರಲಿಲ್ಲ.

ಮಹೋದಯರೆ! "ಎಷ್ಟಾದರೂ ಹೆಂಗರಳು." ಎಂದಾಡುವರು ನೀವಾಗಿದ್ದರೆ, ಹೆಂಗಸಾದ ನಮ್ಮ ಶರಾವತಿಯನ್ನು ಜ್ಞಾಪಿಸಿಕೊಳ್ಳಿರಿ. ಅವಳಲ್ಲಿ ಎಷ್ಟು ಕೋಮಲಭಾವವಿದೆಯೆಂದು ನಿಮಗೆ ತೋರುವುದು. ಆದರೆ, ಶರಾವತಿಯನ್ನು ಮಾತ್ರವೇ ಹೀಗೇಕೆ ಕರೆಯಬೇಕು ? ಅಶಿಕ್ಷಿತರೂ ದುರಭಿಮಾನಪರರೂ ಆದ ಮಹಿಳೆಯರನ್ನೆಲ್ಲ ಹೀಗೆನ್ನ ಬಾರದೇಕೆ?

"ವಿಧವೆ. ಸಕೇಶಿ. ಪ್ರೈಲಿಗೆಯಮ್ಮ. ಸತ್ತರೆ ಅಳುವರಾದರೂ ಯಾರು ? ಇದ್ದರೆ, ಫಲವಾದರೂ ಏನು ? ಅವಳಿಗೆ ಸಾಯು

ವುದೇ ತಕ್ಕ ಪ್ರಾಯಶ್ಚಿತ್ತ. ಇಂದೇ ಸಾಯಲಿ! ಸತ್ತರೆ ಎಲ್ಲರಿಗೂ ಅನು ಕೂಲ! ಸೀನೇ ಎಂದು ನನ್ನನ್ನು ಕೇಳುವರಿಲ್ಲದಂತಾಗುವುದು."ಎಂಬೀ ಮೊದಲಾದುವೇ, ಈ ಮೇಲೆ ಹೇಳಲ್ಪಟ್ಟ ಮೃದುಕರುಳಿನ ಮೃದುಲತೆಯಿಂ ದೊಗೆದಾಪುಷ್ಪನಿಚಯವಾದುದರಿಂದ ಶರಾವತಿಯ ಮನಸ್ಸೆಂತಹದಾ ಗಿದ್ದಿತೆಂಬುದನ್ನು ವಾಚಕರೇ ಊಹಿಸಿ ತಿಳಿದುಕೊಳ್ಳಲಿ!

ಇನ್ನು ಶಂಕರನಾಥನ ಪ್ರಕೃತಿಸ್ಥಿತಿಯನ್ನು ತಿಳಿದಿರುವ ವಾಚಕರಿಗೆ ನಾವೇನೂ ಹೇಳಬೇಕಾಗಿಲ್ಲ. ಅವನು ದೃಢಮನಸ್ಸುಮಾಡಿ "ನಭೆಯ ವಿಚಾರವಾಗಿ ಚಿದಾನಂದನಿಗೊಂದು ಕಾಗದವನ್ನು ಬರೆಯಲೇ?" ಎಂದು ಮೆಲ್ಲನೆ ರಾಣಿಯವರನ್ನು ಪ್ರಶ್ನೆಮಾಡಿದನು.

ಶರಾವತಿಯು ಅತ್ಯಾಗ್ರಹದಿಂದ ಹೇಳಿದಳು:— "ನಿಮ್ಮ ಬುದ್ಧಿಗೆ ಇಳಬೇಕು! ಅವನು ಬಂದರೆ,ಸುಮ್ಮನೆ ಹೋಗುವನೇನು? ಇಲ್ಲದ ಕಿತ್ತಾ ಟವನ್ನು ತಂದಿಟ್ಟು ಹುಡುಗಿಯನ್ನೂ ಕರೆದುಕೊಂಡು ಹೋಗುವನು; ಸ್ವತ್ತುಗಳನ್ನೂ ತೆಗೆದುಕೊಳ್ಳಲು ಪ್ರಯತ್ನಪಟ್ಟಾನು! ಕರ್ಮಾಂತರಗಳ ನ್ನು ನಾವು ಮಾಡಿರುವುದರಿಂದ ಅವನಿಗೆ ಅಧಿಕಾರವಿಲ್ಲವೆಂದರೂ ಅನ್ನ ಬಹುದು. ಆದರೂ ಇಲ್ಲದ ನಷ್ಟಕಷ್ಟ ನಿಷ್ಠೂರಗಳಿಗೆ ಒಳಗಾಗಲು ಗ್ರಹ ಚಾರವೇನು? ಸುಮ್ಮನಿರಲಾಗುವದಿಲ್ಲವೋ?

ಶಂಕರ:— ಆದರೆ, ಹುಡುಗಿಯು ಅನ್ಯಾಯವಾಗಿ ಸಾಯುವಳಲ್ಲ! ತಿಳಿಸದಿರುವುದರಿಂದ ಆಕ್ಷೇಪವುಂಟಾದೀತಲ್ಲವೇ?

ಶರಾವತಿ:— ರಂಡೆ, ಸಾಯುವುದರಲ್ಲಿ ನ್ಯಾಯವೇನು? ಅನ್ಯಾಯ ವೇನು? ಸತ್ತರೆ, ಲೋಕವೇ ಮುಳುಗಿ ಹೋಗುವುದೋ? ಆಕ್ಷೇಪವಾ ರದು?

ಶಂಕರ:— ನಮಗೆ ಅಪವಾದವು ತಪ್ಪದಷ್ಟೆ?

ಶರಾವತಿ:— ಅಪವಾದವನ್ನು ಹೊರಿಸುವರ ನಾಲಿಗೆಯು ಸೇದಿ ಹೋಗಲಿ! ನಿಂದಿಸುವರು ಹಣಕೊಡುವರೇನು?

ಶಂಕರನಾಥನು ನಿಟ್ಟುಸಿರನ್ನು ಬಿಡುತ್ತ ಸುಮ್ಮನೆ ಕುಳಿತನು.

ಶರಾವತಿಯು "ಎಚ್ಚರಿಕೆ! ಎಚ್ಚರಿಕೆ!! ಅವನಿಗಾಗಲೀ ಆ ನಿಮ್ಮ

ಮಗನಿಗಾಗಲೀ ತಿಳಿಸೀರಿ! ಜೋಕೆ, ಜೋಕೆ! ತಿಳಿಸಿದರೆ, ನನ್ನ ಮೇಲೆ ಆಣೆಯಿದೆ.'' ಎಂದಳು.

ಇವರ ಸಂಭಾಷಣೆಯು ಮುಗಿವುದರೊಳಗಾಗಿಯೇ ಬೀದಿಯಲ್ಲಿ ಒಂದು ಗಾಡಿಯು ಬಂದು ಮನೆಯ ಬಾಗಿಲಿನಲ್ಲಿಯೇ ನಿಂತ ಶಬ್ದವಾಯಿತು. ಶರಾವತಿಯು ಓಡಿ ಹೋಗಿ ಹೊರಗೆ ನೋಡಿದಳು. ಗಾಡಿಯಿಂದ ಒಬ್ಬ ನಾಲ್ವತ್ತು ವರ್ಷವಯಸ್ಸುಳ್ಳ ಶ್ಯಾಮಲಾಂಗನು ಇಳಿದು ಮನೆಯೊಳಗೆ ಪ್ರವೇಶಿಸಲು ಸಿದ್ಧನಾದನು. ಶರಾವತಿಯು ಒಳಗೆ ಓಡಿ ಬಂದು ಗಂಡನನ್ನು ಕುರಿತು "ಏನುಮಾಡಿದಿರಿ? ಒಳಗೊಂದು ಹೊರಗೊಂದೋ? ಬಾಯಲ್ಲಿ ಹೇಳುವುದೊಂದಾದರೆ ಕೈಯಲ್ಲಿ ಮಾಡುವುದೊಂದೋ? ನಿಮ್ಮ ಬುದ್ಧಿಗೆ ಅಳಬೇಕು. ಕಾಗದವನ್ನು ಬರೆದಮೇಲೆ "ಕಾ-ಗ-ದ ಬರೆಯಲೆ?" ಎಂದು ನನ್ನನ್ನು ಕೇಳಲು ನಾಚಿಕೆಬರಲಿಲ್ಲವೇ? ನೋಡಿ, ಅವನೇ ಬಂದ— ಅನುಭವಿಸಿ." ಎಂದಳು.

ಶಂಕರನಿಗೆ ಆಶ್ಚರ್ಯವಾಯಿತು. ಅವನು "ಏನು, ಚಿದಾನಂದನು ಬಂದನೆ? ಅವನು ತನ್ನ ಪತ್ನಿಗೆಯು ಸತ್ತಂದಿನಿಂದ ಬರೆದ ಕಾಗದಗಳಿಗೆಲ್ಲಾ ನಾನು ಉತ್ತರ ಕೊಡದಿದ್ದುದಕ್ಕೂ, ಮನಿಯಾರ್ಡರುಗಳು ತಪ್ಪಿದುದಕ್ಕೆ ವರ್ತಮಾನ ಕೊಡದಿದ್ದುದಕ್ಕೂ ಆಗ್ರಹಗೊಂಡು ಬಂದಿರಬಹುದು! ನಾನೇನೋ ನಿನ್ನಾಣೆಗೂ ಕಾಗದವನ್ನು ಬರೆಯಲಿಲ್ಲ" ಎಂದನು. ಶರಾವತಿಯು "ನಾನು ಸತ್ತರೆ, ನಿಮಗೇನು? ಆಣೆಯಂತೆ, ರೂಪಾಯಿಗೆ ಹದಿನಾರಾಣೆ!" ಎಂದಳು. ಇವಳಮಾತು ಪೂರೈಸುವುದರೊಳಗಾಗಿ ಚಿದಾನಂದನು ಒಂದು ಹಣ್ಣು ಔಷಧಿಗಳ ಬುಟ್ಟಿಯನ್ನು ಕೈಯಲ್ಲಿ ಹಿಡಿದು ಒಳಹೊಕ್ಕನು. ಶಂಕರನು "ಒಳಗೆ ಬಾರಪ್ಪಾ! ಎಲ್ಲರೂ ಕುಶಲವಷ್ಟೆ!" ಎಂದನು.

ಚಿದಾನಂದ:— ಬಂದೇ ಇದ್ದೇನೆ. ನೀವೆಲ್ಲರೂ ಕುಶಲಿಗಳಷ್ಟೆ?

**ಶರಾವತಿ—:** "ನಮ್ಮ ಕುಶಲವೇನು! ನೀವಾದರೆ ಮಕ್ಕಳೊಂದಿಗರು. ನಿಮ್ಮ ಕ್ಷೇಮವೇ ಮುಖ್ಯ." ಎಂದಳು.

**ಚಿದಾನಂದ:—** "ಎಲ್ಲರೂ ಕ್ಷೇಮ" ಎಂದನು.

ಶಂಕರ:—ಇದೇಕೆ ಹೀಗಿರುವೆ? ದೇಹಸ್ಥಿತಿಯು ಸರಿಯಾಗಿದೆಯಷ್ಟೆ?

ಚಿದಾನಂದ:— ಸರಿಯಾಗಿಯೇ ಇದೆ. ಸಭೆಯೆಲ್ಲಿ? ಬದುಕಿರುವಳೋ, ಸತ್ತಳೊ?

ಶಂಕರ:— ಇದೇಕೆ ಹೀಗೆ ಕೇಳುವೆ?

ಚಿದಾನಂದ:— ಮತ್ತೇನೂ ಇಲ್ಲ. ಅವಳ ಮುಖವನ್ನಾದರೂ ನೋಡುವ ಭಾಗ್ಯವಿದೆಯೋ, ಇಲ್ಲವೋ, ಯಾರುಬಲ್ಲರು?

ಶಂಕರ:— ಇದೇಕೆ, ಹೀಗೆ ಮಾತನಾಡುವೆ?

ಚಿದಾನಂದ:— ನಾನು ಬರೆದ ಒಂದು ಕಾಗದವಾದರೂ ನಿಮಗೆ ಮುಟ್ಟಲಿಲ್ಲವೋ? ಒಂದಕ್ಕಾದರೂ ಏಕೆ ಉತ್ತರವಿಲ್ಲ? ಮನಿಯಾರ್ಡರನ್ನು ತೆಗೆದುಕೊಂಡುದಕ್ಕೂ ಉತ್ತರ ಬೇಡವೆ? ಅದೂಹೋಗಲಿ; ಹುಡುಗಿಯು ಸಾಯುವಂತಾಗಿದ್ದರೂ ವರ್ತಮಾನಕೊಡಬೇಡವೆ? ಹೆಣ್ಣುಮಕ್ಕಳೇನು ಬೀದಿಯಲ್ಲಿ ಬಿದ್ದಿರುವರೆ? ಗಂಡಸತ್ತಮಾತ್ರಕ್ಕೆ ಅವರೇನು, ಮನುಷ್ಯಜಾತಿಯನ್ನು ಬಿಟ್ಟಂತೆಯೇ?ಅಂತವರಲ್ಲಿರುವ ಸದ್ಗುಣಗಳು ಹೋಗುವುವೇ? ಅವರಲ್ಲಿ ಜೀವಾತ್ಮನಾದರೂ ಇಲ್ಲವೆ? ಅವರ ವಿಷಯದಲ್ಲಿ ಇಷ್ಟು ಬೇಸರವು ಸರಿಯಲ್ಲ.

ಶಂಕರ:— ಅಪ್ಪಾ! ನಾನೇನುಮಾಡಲಿ? ನನ್ನ ಸ್ವಭಾವವು ನಿನಗೆ ತಿಳಿದುದೇ ಆಗಿದೆ.

ಶರಾವತಿ:— ಅವರು ಬರೆಯುದಿದ್ದರೇನು? ನಿಮಗೆ ಈಗ ತಿಳಿಯಲಿಲ್ಲವೆ? ನೀವು ಬರಲಿಲ್ಲವೆ? ಅವರನ್ನೇಕೆ ನಿಂದಿಸುವುದು?

ಚಿದಾನಂದನಿಗೆ ಕೋಪವು ಮಿತಿಮೀರಿತು. ಉತ್ತೇಜಕಸ್ವರದಿಂದ "ಅಹುದು, ನಿಮ್ಮನ್ನೇಕೆ ನಿಂದಿಸಬೇಕು?" ನೀವು ತಿಳಿಸದಿದ್ದ ಮಾತ್ರಕ್ಕೆ ಪ್ರಪಂಚವೇ ಹಾಳೆ? ನೀವೇನು ಮಾಡೀರಿ? ನಿಮಗೆ ತಟ್ಟಿರುವ ಧನಪಿಶಾಚಿಯ ಮಹಾತ್ಮೆಯು ಅಂತಹುದು; ಆ ನಿರ್ಭಾಗ್ಯಳ ಹಣೆಯಬರಹವು ಅಂತಹುದು! ನಾನು ಈಗ ಇಲ್ಲಿಗೆ ವ್ಯಾಜ್ಯವನ್ನು ಹೂಡಲು ಬಂದವನಲ್ಲ! ಸಭೆಯೆಲ್ಲಿ ಮಲಗಿರುವಳೋ ತೋರಿಸಿರಿ.

ಶರಾವತಿ:— ತೋರಿಸದೆ ಓಡಿಹೋಗುವೆವೇನು? ಸ್ವಲ್ಪ ವಿಶ್ರಮಿಸಿಕೊಳ್ಳಬಾರದೆ?

ಚಿದಾನಂದ:— ಅತ್ತಿಗೆ! ನಿಮ್ಮ ಯುಕ್ತಿಗಳೆಲ್ಲವನ್ನೂ ನಾನು ಬಲ್ಲೆನು. ನಾನು ಇಲ್ಲಿಗೆ ನೀವು ಊಹಿಸಿರುವಂತೆ ಹಣಕಾಸುಗಳಿಗಾಗಿ ಬಂದವನಲ್ಲ; ನನಗವು ಬೇಡವೂಬೇಡ. ನಭೆಯೆಲ್ಲಿ ?

ಶರಾವತಿ:— ಇದೇಕೆ? ನೀವು ಹೊರಗಿನವರಂತೆ ಮಾತನಾಡುವಿರಿ? ಚೆನ್ನಾಯ್ತು. ನೀವೇನು ಮಾಡೀರಿ? ನಮ್ಮ ಗ್ರಹಚಾರ !!

ಚಿದಾನಂದ:— ಅತ್ತಿಗೆಯವರೆ ! ನನ್ನನ್ನು ವೃಥಾ ಸಿಟ್ಟಾಗುವಂತೆ ಮಾಡಬೇಡಿರಿ. ನಾನು ವಿಚಾರಹೀನನಾದ ಮಾನವನಲ್ಲ. ಎಲ್ಲವೂ ತಮ್ಮ ಗ್ರಹಚಾರವೇಆಗಲಿ; ಈಗ ನಭೆಯೆಲ್ಲಿ ?

ಶರಾವತಿಯು ಮತ್ತೆ ಅದೇ ಮಾತನಾಡಲು ಪ್ರಯತ್ನಪಟ್ಟಳು. ಚಿದಾನಂದನು ಜಿಗುಪ್ಸೆಯಿಂದ ಅಣ್ಣನಕಡೆಗೆ ತಿರುಗಿ "ಅಣ್ಣಾ ! ಇದೇನು ರಗಳೆ ? ನಭೆಯಿರುವಳೋ ? ಸತ್ತಳೋ ? ಇದ್ದರೆ, ಎಲ್ಲಿ ? ಮೊದಲು ಹೇಳು." ಎಂದನು.

ಶಂಕರನು ನಿಟ್ಟುಸಿರುಬಿಡುತ್ತ "ಅಪ್ಪಾ! ನನ್ನ ಅದೃಷ್ಟವೇ ಅಂತ ಹುದು? ಬುದ್ಧಿಯಿಲ್ಲದೆ ಕೆಲಸಮಾಡಿದುದಕ್ಕೆ ಅನುಭವಿಸುವೆನು. ನಭೆಯು ಹಿತ್ತಲಕೋಣೆಯಲ್ಲಿ ಮಲಗಿರುವಳು." ಎಂದನು.

ಇಲ್ಲಿ ನಾವು ಶಂಕರನಾಥನ ಗೃಹದ ಪರಿಚಯವನ್ನು ಪಾಠಕರಿಗೆ ಉಂಟುಮಾಡಿಕೊಡದಿದ್ದರೆ ದ್ರೋಹಿಗಳಾಗಬಹುದು. ವಿಶಾಲವಾದಮನೆ; ಆದರೂ, ಮಹಡಿಯದಲ್ಲ. ಮಧ್ಯದಲ್ಲಿ ಅಂಗಳ. ಅಂಗಳಕ್ಕೆ ಪೂರ್ವಪಶ್ಚಿಮಗಳಲ್ಲಿ ಪಡಸಾಲೆ. ಪಶ್ಚಿಮಕ್ಕೆ, ಪಡಸಾಲೆಯ ಹಿಂದೆಯೇ ಅಡುಗೆಯ ಮನೆ. ಅದರ ಮಗ್ಗುಲಿನಲ್ಲಿಯೇ ಬಚ್ಚಲಮನೆ. ಮುಂಭಾಗದ ಪೂರ್ವ ಪಡಸಾಲೆಯ ಮುಂದೆ ನಡುವೆ. ನಡುವೆಗೆ ಸೇರಿದಂತೆಯೇ ಬೀದಿಯ ಬಾಗಿಲು. ಅಂಗಳದ ಉತ್ತರ ದಕ್ಷಿಣಗಳಿಗೂ ಒಂದೊಂದು ಕಿರುಮನೆಯಿದ್ದುವು. ಹಿಂದೆ ವಿಶಾಲವಾದ ಹಿತ್ತಿಲು. ಹಿತ್ತಲಲ್ಲಿ ಬಲಭಾಗದ ಅಂತ್ಯದಲ್ಲಿ ಮಲಮೂತ್ರವಿಸರ್ಜನಾದಿಗಳಿಗೆ ಸ್ಥಳ. ಅದರ ಮಗ್ಗುಲಿನಲ್ಲೊಂದು ಚಿಕ್ಕಮನೆ. ಅದು ಸೌದೆ ಬೆರಣಿಗಳನ್ನಿಡಲು ಏರ್ಪಡಿಸಿದಸ್ಥಳ.

ಇದುವರೆಗೆ ಪೂರ್ವದಿಕ್ಕಿನ ಪಡಸಾಲೆಯಲ್ಲಿಯೇ ಚಿದಾನಂದನು ಕುಳಿತು ಮಾತನಾಡುತ್ತಿದ್ದನು; ಈಗ ಎದ್ದನು. ಶಂಕರನಾಥನು ಮನಂದೆಹೊರಟನು. ಚಿದಾನಂದನಿಗೆ ಆಶ್ಚರ್ಯ ವ್ಯಸನಗಳು ಒಮ್ಮೆಯೇ ಉತ್ಪನ್ನವಾದುವು. ಅವನು ಹಾಸಿಗೆಯ ಬಳಿಗೆ ಹೋಗಿ "ನಭಾ! ನಭಾ!! ಮಗು!!" ಎಂದು ಮೆಲ್ಲನೆ ಕೂಗಿದನು.

ನಭೆಯು, ಅರ್ಧೋನ್ಮೀಲಿತನಯನೆಯಾಗಿ ಮೆಲ್ಲನೆ ಅಸ್ಫುಟಸ್ವರದಿಂದ ತಡೆವರಿಸುತ್ತೆ "ಏ–ನು? ಯಾ ರು-" ಎಂದಳು.

ಶಂಕರ:— ತಾಯಿ! ನಿನ್ನ ಚಿಕ್ಕಪ್ಪ, ಚಿದಾನಂದನು ಬಂದಿರುವ ನಮ್ಮಾ! ಚಿದಾನಂದ.

ನಭೆ ಅದೇಸ್ವರದಿಂದ, "ಎ-ಲ್ಲಿ?" ಎಂದಳು.

ಚಿದಾನಂದನಿಗೆ ತಲೆತಿರುಗಿತು. ಕಣ್ಣುಗಳನ್ನು ಬಿಟ್ಟುಕೊಂಡಿದ್ದರೂ ಕಾಣಲಿಲ್ಲ. ಅವನಾ ಕಪೋಲಪ್ರಾಂತವು ಅಶ್ರುಧಾರೆಯಿಂದ ತೊಯ್ದು ದೇಹವಾದ್ಯಂತವೂ ನಡುಗಲಾರಂಭವಾಯಿತು. ತಲೆಯನ್ನು ಬಲಗೈಯಿಂದ ಬಲವಾಗಿ ಹಿಡಿದು ಕೆಳಗೆ ಕುಳಿತನು.

ಶಂಕರನಾಥನು "ಚಿದಾನಂದ! ಮಾತನಾಡಿಸು, ಜ್ಞಾನವಿದೆ." ಎಂದು ಹೇಳಿ ಮರೆಯಲ್ಲಿ ನಿಂತಿದ್ದ ಹೆಂಡತಿಯ ಸಂಜ್ಞೆಯಂತೆ ಹೊರ ಹೊರಟನು.

ಇದನ್ನು ತಿಳಿದ ಚಿದಾನಂದನಿಗೆ ದಿಗ್ಭ್ರಮೆಯಾಯಿತು. ಅವನು ನಿಷ್ಟುರ ಸ್ತ್ರೀಯರ ಸಾಮರ್ಥ್ಯವನ್ನು ಚೆನ್ನಾಗಿ ತಿಳಿದನು.

ಚಿದಾನಂದನು ನಭೆಯ ತಲೆಯಬಳಿ ಕುಳಿತು "ನಭಾ! ತಾಯಿ, ನಭಾ! ನಾನು, ಚಿದಾನಂದ; ನನ್ನೊಡನೆ ಮಾತನಾಡು." ಎಂದು ಕಣ್ಣೀರಿನಿಂದ ಹಾಸಿಗೆಯನ್ನು ನೆನೆಯಿಸುತ್ತ, ಎಡಗೈಯಿಂದ ತಲೆಯನ್ನು ಸವರುತ್ತ, ಬಲಗೈಯಿಂದ ಕಣ್ಣುಬಿಡಿಸಿದನು.

ನಭೆಯು ನಿಜವಾಗಿಯೂ ಮಾತನಾಡಲು ಶಕ್ತಳಾಗಿರಲಿಲ್ಲ. ಹಾಸಿಗೆಹಿಡಿದ ದಿನದಿಂದಲೂ ಔಷಧವಿಲ್ಲ; ಅನ್ನವಿಲ್ಲ; ನೀರಿಲ್ಲ; ಆಹಾರವಿಲ್ಲ. ಆದುದರಿಂದ ದ್ರವಹೀನವಾದ ನಾಲಗೆಯನ್ನು ಮುಂದಕ್ಕೆ ಚಾಚಿದಳು. ಚಿದಾನಂದನು ರೋಗದ ಕಾಟಕ್ಕಿಂತ ಉದರದ ಕಾಟವೇ ಬಹಳವೆಂದು

ತಿಳಿದುಕೊಂಡನು. ಕೂಡಲೇ ಬುಟ್ಟಿಯಲ್ಲಿದ್ದ ಒಂದು ಗೊಂಚಲು ಚಪ್ಪರ ದ್ರಾಕ್ಷಿಯ ಹಣ್ಣಿನ ರಸವನ್ನು ತೆಗೆದು ನಾಲಗೆಯ ಮೇಲೆ ಹಿಂಡಿದನು. ದ್ರವಹೀನವಾಗಿ ದ್ದನಾಲಗೆಯೂ ಅನ್ನನಾಳವೂ ರಸಾಸ್ವಾದನದಿಂದ ಶಕ್ತಿಯುತವಾದುವು. ಅವಳು ಸ್ವಲ್ಪ ಚೇತರಿಸಿಕೊಂಡು ಮುಖದಲ್ಲಿ ಆನಂದವನ್ನು ಪ್ರಕಾಶಪಡಿಸಿದಳು. ಈ ಭಾವವನ್ನು ಚಿದಾನಂದನು ತಿಳಿದು ಮತ್ತೆ ಸ್ವಲ್ಪ ರಸವನ್ನು ಹಾಕಿ ಕೆಲವು ಹಣ್ಣುಗಳನ್ನು ತಿನ್ನಿಸಿದನು.

ನಭೆ ಹರ್ಷದಿಂದ "ಕಕ್ಕ, ಆವಾಗ ಬಂದೆ?" ಎಂದಳು.

ಚಿದಾನಂದ:—ಅಮ್ಮಾ! ಈಗತಾನೆ ಬಂದೆನು.

ನಭಾ:—ನನ್ನ ಪತ್ರವು ಮುಟ್ಟಿದ ಕೂಡಲೆ, ಅಣ್ಣನು ಪರ್ಣವಾಸ ವನ್ನು ಕೊಟ್ಟಿರಬಹುದು.

ಚಿದಾನಂದ:—ಅಹುದಮ್ಮ! ಅವನ ಕಾಗದವು ಬಂದೊಡನೆಯೇ ಒಂದುದಿನ ರಜಾಬೇಕೆಂದು ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದು ಹೊರಟು ಬಂದೆ. ಕಛೇರಿಯಿಂದ ಮನೆಗೆ ಕೂಡ ಹೋಗಲಿಲ್ಲ.

ನಭಾ:—ನೀನು ಇಂದು ಬಾರದಿದ್ದರೆ, ಈ ಜೀವವಾಸದಲ್ಲಿಯೇ ನಿನ್ನನ್ನು..................

ಚಿದಾನಂದ:—ನಿಮ್ಮಣ್ಣನ ಪತ್ರವು ಬಾರದಿದ್ದರೆ, ನಿನ್ನಂತಹ ಪುತ್ರೀರತ್ನವನ್ನು ಕಳೆದುಕೊಳ್ಳುತ್ತಿದ್ದೆನು. ದೇವರು ದೊಡ್ಡವನು. ಈ ಔಷಧನ್ನು ಕುಡಿ.

ನಭಾ:—ಔಷಧವನ್ನೇಕೆ ಕುಡಿಯಲಿ?

ಚಿದಾನಂದ:—ದೇಹಧಾರಣೆಗಾಗಿ.

ನಭಾ:—ಈ ದೇಹದಿಂದ ಸಾಧಿಸಬಹುದಾದ ಪುರುಷಾರ್ಥವೇನು?

ಚಿದಾನಂದ:—ಹಾಗಲ್ಲ, ಕೇಳು; ಪ್ರಪಂಚದಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟಿರುವ ಅಣುರೇಣುತೃಣಕಾಷ್ಠವೂ ಉಪಯುಕ್ತವಾದುದೇ ಅದರಲ್ಲಿ ಪ್ರತಿಪ್ರಾಣಿಯನ್ನೂ ಆವುದೋ ಒಂದು ಉದ್ದೇಶದಿಂದಲೇ ಸೃಷ್ಟಿಸಿರುವನೆಂದು ನಂಬು. ಆದುದರಿಂದಲೇ ಹಟಮಾಡಬೇಡ, ಕುಡಿ.

ನಭಾ:—ಅಪ್ಪ, ನಿನ್ನ ಮಾತನ್ನು ಮೀರಲಾರೆನು; ಆಗಲಿ,

ನಭೆ ಔಷಧವನ್ನು ಕುಡಿದಳು. “ಇಂಗ್ಲಿಷ್ ಔಷಧ. ಅದರಲ್ಲಿಯೂ ಬೂಟನ್ನು ಹಾಕಿಕೊಂಡು ಚಿದಾನಂದನು ಗಾಜಿನಬುಡ್ಡಿಯಲಿ ಹಾಕಿಕೊಂಡುಬಂದು ಕೊಟ್ಟ. ಶೂದ್ರನೋ ಹೊಲೆಯನೋ ಮುಟ್ಟಿದ ನೀರು. ಥೂ! ಹುಟ್ಟಿದವರು ಸಾಯಲೇಬೇಕು. ಗಂಡಸತ್ತ ರಂಡೆಯರಿಗೆ ಔಷಧವೇಕೆ ? ಅದರಲ್ಲಿಯೂ ಜಾತಿಯಾದರೂ ಕೆಟ್ಟ, ಇಂಗ್ಲೀಷ್ ಔಷಧವೇ ? ಹಾಳು. ಇವನೊಬ್ಬ ಮೃತ್ಯುಬಂದಂತೆ ಬಂದ!” ಎಂಬಿವೇ ಮೊದಲಾದ ಆಲೋಚನಾತರಂಗಗಳು ಶರಾವತಿಯ ಹೃದಯದಲ್ಲಿ ಚಲಿಸಲಾರಂಭವಾದುವು. ಔಷಧವನ್ನು ತೆಗೆದುಕೊಂಡ ಅರ್ಧಘಂಟೆಯಾಗುವುದರೊಳಗಾಗಿಯೇ, ಚಿದಾನಂದನು ನಭೆಗೆ ಸ್ವಲ್ಪ ಹಣ್ಣುಗಳನ್ನು ತಿನ್ನಲು ಕೊಟ್ಟನು. ಅವನ್ನು ತಿಂದು ಚೇತರಿಸಿಕೊಂಡು ಮೆಲ್ಲನೆ ಎದ್ದು ಕುಳಿತಳು. ಶರಾವತಿಯು ಕಿರುಮನೆಯ ಹೊರಗೆ ನಿಂತಿದ್ದುದನ್ನು ನೋಡಿ. “ಅಮ್ಮಾ! ಅಲ್ಲೇಕೆ ನಿಂತಿರುವೆ ? ಒಳಗೆ ಬಾರಮ್ಮಾ ! ಎಂದಳು.

ಶರಾವತಿ:—ಥೂ ! ಆ ಎಂಜಲು—ಮೈಲಿಗೆ! ಒಳಗೆ ತಲೆ ಹಾಕಿದರೆ, ಪ್ರಾಯಶ್ಚಿತ್ತವಾಗಬೇಕು. ಅದಾರ ಕೈಯಲ್ಲಾಗುವುದಮ್ಮ ?

ಶಂಕರನಾಥನಿಗೂ ಈಗ ಪ್ರಜ್ಞೆಯಿರಲಿಲ್ಲ. ಏನುಮಾಡಬಲ್ಲನು ? ಚಿದಾನಂದನ ಸ್ಥಿತಿಯನ್ನು ವರ್ಣಿಸಲು ಖಂಡಿತವಾಗಿಯೂ ನಮ್ಮ ಲೇಖನಿಗೆ ಶಕ್ತಿಸಾಲದು.

ಚಿದಾನಂದನು ಕರುಣಾಸ್ವರದಿಂದ “ ಅಮ್ಮಾ ! ನಭಾ !! ನಮ್ಮೂರಿಗೆ ಬರುವೆಯಾ ? ” ಎಂದನು.

ನಭಾ:—ಕರೆದುಕೊಂಡುಹೋದರೆ......

ಚಿದಾನಂದ:—ಅಮ್ಮ ! ಅದಕ್ಕಾಗಿಯೇ ಬಂದಿರುವೆನು.

ನಭಾ:—ಅಮ್ಮ, ಅಪ್ಪನೊ ?

ಚಿದಾನಂದ:—ನಾನವರನ್ನು ಬಲಾತ್ಕರಿಸುವುದೂ ಇಲ್ಲ ನಿನ್ನನ್ನು ಬಿಟ್ಟುಹೋಗುವುದೂ ಇಲ್ಲ;

ನಭಾ:—ನಿನ್ನ ಇಷ್ಟ ಬಂದಂತೆ ಮಾಡು.

“ ಹಾಗಾದರೆ, ಇವನ್ನು ತಿನ್ನು. ” ಎಂದು ಕೆಲವು ಕೇಬಿನಹಣ್ಣು

ಗಳನ್ನೂ ತೆಗೆದುಕೊಟ್ಟನು. ಅವನ್ನು ತಿಂದಬಳಿಕ ಸಭೆಯು ಚೇತರಿಸಿಕೊಂಡು ಹಾಸುಗೆಯನ್ನು ಬಿಟ್ಟು ಸ್ವಲ್ಪ ದೂರದಲ್ಲಿ ಕುಳಿತಳು.

ಚಿದಾನಂದನು ಸಂತೋಷಪಟ್ಟು ರೋಗದ ಕಾರಣವನ್ನು ಆಮೂಲಾಗ್ರವಾಗಿ ತಿಳಿಯಲು ತನ್ನಲ್ಲಿಯೇ ವಿಮರ್ಶೆಮಾಡುತ್ತ ಕ್ಷಣಹೊತ್ತು ಸುಮ್ಮನೆ ಕುಳಿತನು.

ಸಭೆ ನಿಂತಿದ್ದ ಶರಾವತಿಯನ್ನು ನೋಡಿ “ ಅಮ್ಮಾ ! ಇನ್ನೂ ನಿಂತೇ ಇರುವೆಯಲ್ಲ, ಕುಳಿತುಕೊಳ್ಳಬಾರದೆ? ” ಎಂದಳು.

ಶರಾವತಿ:—ಸಾಕಮ್ಮಾ ಸಾಕು; ನಿಮ್ಮ ಮರುಕವು ಎಲ್ಲರಿಗೂ ತಿಳಿದೇ ಇದೆ. ನಾನು ಕೊಡಲುಬಂದ ಹಾಲು, ಗಂಜಿ, ಔಷಧಿಗಳೆಲ್ಲ ವಿಷ. ನಿಮ್ಮ ಚಿಕ್ಕಪ್ಪನು ಕೊಟ್ಟುದು ಮಾತ್ರ ಅಮೃತ. ಅಲ್ಲವೆ ?

ಸಭಾ:—ಅಮ್ಮಾ ! ಅನ್ಯಾಯವನ್ನಾಡಬೇಡ, ನಾನು ಮಲಗಿದಂದಿನಿಂದ ಒಮ್ಮೆಯಾದರೂ ಈ ಕಿರುಮನೆಯೊಳಕ್ಕಾದರೂ ಪ್ರವೇಶಿಸಿರುವೆಯಾ ? ಈವರೆಗೆ, ನಿನ್ನ ಮಾತನ್ನು ನಾನೆಂದು ಮೀರಿರುವೆನು?

ಶರಾವತಿ:—ಹೇಗಾದರೂ ಆಗಲಿ, ಈಗ ಬದುಕಿಕೊಂಡೆಯಲ್ಲ! ಇನ್ನು ಪ್ರಪಂಚವನ್ನು ಉದ್ಧಾರಮಾಡು.

ಶಂಕರನಾಥನ ಈಗಿನ ಸ್ಥಿತಿಯನ್ನು ಹೇಳಲಳವಲ್ಲ ಅವನು ಶರಾವತಿಯ ಮುಖವನ್ನು ಒಮ್ಮೆ ದುರುದುರನೆ ನೋಡಿದನು.

ಚಿದಾನಂದನು “ ಅಣ್ಣಾ ! ಈಗ ನೋಡಿ ಫಲವೇನು ? ಸಸಿಯಲ್ಲಿ ಬಗ್ಗದುದು ಮರದಲ್ಲಿ ಬಗ್ಗೀತೇ? ಎಂಬಂತೆ ಆಗಿದೆ. ಕಾಲವು ಮೀರಿದೆ.” ಎಂದು ಅಲ್ಲಿಂದೆದ್ದು ಹೊರಗೆ ಹೋಗಿ. ಗಾಡಿಯವನನ್ನು ಒಳಗೆ ಕರೆದು, ಅವನ ಕೈಗೆ ಬುಟ್ಟಿ ಹಾಸುಗೆಗಳನ್ನು ಕೊಟ್ಟನು.

ಶಂಕರನಾಥನು ಕುತೂಹಲದಿಂದ “ ಏನು, ಇದೇನು ಪ್ರಯತ್ನ?” ಎಂದನು.

ಚಿದಾನಂದ:—ಮತ್ತೇನು, ಹೊರಡುವೆನು. ಕತ್ತಲೆಯಾಗುವುದು.

ಶಂಕರ:—ನಾಳೆಯದಿನ ಹೊರಟರಾಗದೆ ?

ಚಿದಾನಂದ:—ಇಲ್ಲಿ, ಏನು ಕೆಲಸ ?

ಶಂಕರ:—ಹುಡುಗಿಯು ಸ್ವಲ್ಪ ಚೇತರಿಸಿಕೊಳ್ಳಲಿ.

ಚಿದಾನಂದ:—ನನಗೆ ರಜಾ ಇಲ್ಲ. ನಭೆಯನ್ನು ಕರೆದುಕೊಂಡು ಈಗಲೇ ಹೊರಡಬೇಕು.

ಶಂಕರ:— ಅವಳನ್ನೂ ಕರೆದುಕೊಂಡು ಹೋಗುವೆಯಾ?

ಚಿದಾನಂದ:— ಸಂತೋಷದಿಂದ ಕರೆದೊಯ್ಯುವೆನು.

ಶಂಕರ:— ಏಕೆ?

ಚಿದಾನಂದ:— ಅಲ್ಲಿಯೂ ಸ್ವಲ್ಪ ದಿನಗಳಿರಲಿ!

ಶರಾವತಿ:—ಮಧ್ಯದಲ್ಲಿ ಪ್ರವೇಶಿಸಿ "ಈಗ ನೀವು ಕರೆದೊಯ್ಯಲು ಬಾಧ್ಯರಾಗಲಾರಿರಿ." ಎಂದಳು.

ಚಿದಾನಂದನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು "ಅಹುದು! ಬಾಯಿಯವರೆ! ತಾವು ನ್ಯಾಯಾನ್ಯಾಯವನ್ನು ಬಲ್ಲವರು. ತಾವೇ ಬಾಧ್ಯರು. ನಾನೇನೋ ಈಗ ಕರೆದುಕೊಂಡು ಹೋಗುವೆನು. ಆಬಳಿಕ ಬೇಕಾದುದನ್ನು ಮಾಡಬಹುದು." ಎಂದನು.

ಶರಾವತಿ:— ಅಹುದು, ನಿಜ. ಆಪತ್ಕಾಲದಲ್ಲಿ ಬೆನ್ನುಕೊಟ್ಟು, ಈವರೆಗೂ ಸಂರಕ್ಷಿಸಿದುದಕ್ಕೆ ಸರಿಯಾದ ಉಡುಗೊರೆ. ಆಗ ಈ ದಯೆ ಎಲ್ಲಿಯೋ?

ಚಿದಾನಂದ:— ಅಮ್ಮನವರೆ! ನಿರಂಜನನನ್ನು ಮನೆಯಿಂದ ಹೊರಡಿಸಿದಾಗಲೇ ತಮ್ಮ ಧರ್ಮ, ದಯಾ, ದಾಕ್ಷಿಣ್ಯಗಳು ಪ್ರಕಾಶವಾಗಿವೆ. ಹೆಂಗಸರೊಡನೆ ನನಗೇಕೆ ಮಾತು?

ಈವೇಳೆಗೆ ಆಳು ಎಲ್ಲ ಸಾಮಗ್ರಿಗಳನ್ನೂ ಗಾಡಿಯೊಳಗೆ ಇಟ್ಟಿದ್ದನು. ಚಿದಾನಂದನು, ಶಂಕರ-ಶರಾವತಿಯರನ್ನು ಕುರಿತು, "ಅಣ್ಣಾ! ಹೊರಡುವೆನು. ಅತ್ತಿಗೆ! ಹೊರಡುವೆನು." ಎಂದು, ನಭೆಯೊಡನೆ ಹೊರಟನು. ನಭೆ, ಚಿಕ್ಕಪ್ಪ-ಚಿಕ್ಕಮ್ಮನವರಿಗೆ ನಮಸ್ಕರಿಸಿ ಅಲ್ಲಿಂದ ಹೊರಟಳು.

ಶಂಕರನು "ಅಮ್ಮಾ! ಎಲ್ಲಿಯಾದರೂ ಬದುಕಿದ್ದು, ಕುಲಕ್ಕೆ ಕೀರ್ತಿಯನ್ನು ತರಲು ಪ್ರಯತ್ನಪಡು. ನಿನ್ನಿಂದ ಅಪವಾದವು ಬರಲಾರದೆಂಬ ನಂಬುಗೆ ನನಗಿದೆ." ಎಂದನು. ಚಿದಾನಂದನು ನಭೆಯೊಡನೆ ಹೊರಟುಹೋದನು.

ಶರಾವತಿ "ಹೊರಡಮ್ಮ, ಹೊರಡು; ಮನಸ್ಸುಬಂದಂತೆ ಸುಖವಾಗಿರಮ್ಮ!" ಎಂದು ಪಡಸಾಲೆಗೆ ಬಂದು "ಮನೆಗೆ ಹಿಡಿದಿದ್ದ ಶನಿ ತೊಲಗಿತು. ಗೃಹವು ಪವಿತ್ರವಾಯಿತು. ಹಾಳುರಂಡೆ ಸಾಯಲಿ." ಎಂದು ನೆಟ್ಟಿಗೆಮುರಿದಳು. ಭಳಿರೇ! ಮಾತ್ಸರ್ಯಮಹಾಪುರುಷ! ನೀನೇನು, "ನಾನೇಧನ್ಯ! ಧನ್ಯ!!" ಎಂದು ಧನ್ಯವಾದಗಳನ್ನು ಹೇಳಿಕೊಳ್ಳುತ್ತಿರುವೆಯೋ? ನಿಜ! ನಿಜ! ಸದ್ಯಕ್ಕೆ ನೀನೇ ಧನ್ಯ! ಭಾರತವರ್ಷದ ಇಂತಹ ಸ್ತ್ರೀಯರ ಹೃದಯದಲ್ಲಿ ವಾಸಸ್ಥಳವು ಇರುವವರೆಗೂ ನೀನೇ ಧನ್ಯ! ಧನ್ಯ!! ಅನಂತರ ?

---

## ಸಪ್ತಮ ಪರಿಚ್ಛೇದ.

### ( ಪಾತ್ರಾಪಾತ್ರ. )

**ನಭೆ** ಶಾಮನಗರದ ತಹಸೀಲ್‌ದಾರ್ ಶ್ರೀಯುತ ಚಿದಾನಂದ ಮಹಾಶಯನ ಗೃಹವನ್ನು ಸೇರಿ ಇಂದಿಗೆ ಎರಡುತಿಂಗಳಾಗಿರಬಹುದು. ಈಗ ಅವಳು ಮೊದಲಿನ ನಭೆಯಲ್ಲ; ಅವಳಾ ಕೃಶಾಂಗವು ಸುಸಂಸ್ಕೃತವಾದ ಮಣಿದರ್ಪಣದಂತೆ ಪ್ರಕಾಶವನ್ನು ಹೊಂದಿರುವುದು. ಶರಾವತಿಯ ಶರಘಾತವು ತಪ್ಪಿ ಸುಖವುಂಟಾಗುತಿರುವುದು. ಅವಳನ್ನು ಆವರಿಸಿದ್ದ ಚಿಂತಾಮೇಘವು ಗೃಹಿಣೀ ಕುಲಾದರ್ಶಳಾದ ಚಿದಾನಂದನ ಪ್ರಿಯಪತ್ನಿ ರಮಾಮಣಿಯ ಆದರೋಪಚಾರವೆಂಬ ಮಾರುತನ ಆಘಾತದಿಂದ ಚದರಿಸಲ್ಪಟ್ಟು ಅವಳ ಆ ಹೃದಯವು ಸುನೀತಿ-ಸುಭಾಷಣೆಗಳೆಂಬ ಮಳೆಯಿಂದ ಶುಭ್ರವಾಗಿ ಅಲ್ಲಿ ಜ್ಞಾನಸೂರ್ಯನು ಪ್ರಕಾಶಮಾನನಾಗಿರುವನು.

ವಿನೋದ ಪರಿಹಾಸಾದಿ ಪ್ರಾಪಂಚಿಕ ವಿಚಾರವನ್ನೆಲ್ಲ ತ್ಯಜಿಸಿದ್ದ ನಭೆ, ಈಗ ಚಿದಾನಂದ-ರಮಾಮಣಿಯರ ಸುಶಿಕ್ಷಣೆಯ ಪ್ರಭಾವದಿಂದ ದೃಢಮನಸ್ಥೈರ್ಯ, ಸಾಹಸ, ಸಂಕಲ್ಪಸಾಧನೆಗಳಲ್ಲಿ ಅದ್ವಿತೀಯಳೆನಿಸಿದ್ದಳು. ಈಗ ನಭೆಯ ಮುಖದಲ್ಲಿ ಚಿಂತೆ, ಶೋಕ, ಕಳವಳ, ಭಯಗಳ ಚಿಹ್ನೆಯಿಲ್ಲ; ಆಕಡೆ ಕ್ಷಮೆ, ಸತ್ಯ, ಸದಾಚಾರ, ಸಾಕ್ಷಾತ್ಕಾರಲಾಭಾಕಾಂಕ್ಷೆ, ಅಮೋಘತರಶಾಂತಿ–ಇತ್ಯಾದಿಗುಣಗಳ ಕುರುಹು ಇದ್ದುವು.

ಸಭೆ, ರಮಾಮಣಿಯನ್ನು ಮಾತೆಯಂತೆ ಪ್ರೀತಿಸುವಳು. ರಮೆಯು ಹತ್ತು ಹನ್ನೆರಡು ವರ್ಷ ವಯಸ್ಸಿನ ಇಬ್ಬರು ಗಂಡುಮಕ್ಕಳನ್ನು ತಮ್ಮಂದಿರಂತೆ ಆದರಿಸುವಳು. ಚಿದಾನಂದ ರಮಾಮಣಿಯರು ತಮ್ಮ ಗತಿಸಿದ ಅನೇಕ ಹೆಣ್ಣು ಮಕ್ಕಳಿಗಾಗಿ ಚಿಂತಿಸಿಚಿಂತಿಸಿ. ಸಭೆಯನ್ನೇ ಮಗಳೆಂದು ಭಾವಿಸಿ ಪೋಷಿಸುತ್ತ ಸುಖವನ್ನು ಪಡೆತಿದ್ದರು. ರಮಾಮಣಿಯ ತಮ್ಮನಾದ "ರಾಜಶೇಖರ" ನೆಂಬವನೊಬ್ಬನೂ ಇವರ ಗೃಹವನ್ನೇ ಸೇರಿದ್ದನು. ಇವರು ನಾಲ್ಕಾರು ಮಂದಿ ಆಳುಕಾಳುಗಳಲ್ಲದೆ ಮತ್ತಾರೂ ಆ ಮನೆಯಲ್ಲಿ ಇರಲಿಲ್ಲ.

ರಮಾಮಣಿ, ನೋಡುವದಕ್ಕೆ ನವನಾಗರಿಕರಂತಿದ್ದರೂ, ಗುಣದಲ್ಲಿ ಆರ್ಯೆ! ಶ್ರೀಮಂತಪುತ್ರಿಯೂ ನಾಗರಿಕ ಸಮಾಜಸುಧಾರಣೆಯಲ್ಲಿ ಸುಶಿಕ್ಷಿತೆಯೂ ಆರ್ಯಮಾರ್ಗದ ವಿದ್ಯಾಭ್ಯಾಸದಲ್ಲಿ ನಿರತೆಯೂ ಆಗಿದ್ದುದರಿಂದ ಗೃಹಕಾರ್ಯನಿರ್ವಾಹ, ಸ್ವಕರ್ತವ್ಯಪಾಲನಾಸಕ್ತಿ, ಸ್ತ್ರೀನಾಮಾನ್ಯಗುಣಾದರ್ಶವಾದ ಕೋಮಲತೆ, ಗಾಂಭೀರ್ಯಾದಿ ಸದ್ಗುಣಗಣವು ಇವಳಾದೇವದುರ್ಲಭವಾದ ಹೃದಯದಲ್ಲಿ ನೆಲೆಗೊಂಡು ಇವಳ ಸೌಂದರ್ಯವನ್ನು ಮತ್ತೂ ಹೆಚ್ಚಿಸುವಂತಿದ್ದುವು.

ಚಿದಾನಂದನು ಪತ್ನಿಗೆ ಅನುಗುಣನಾದ ಪತಿ. ರೂಪ, ಗುಣ, ವಿದ್ಯೆ, ಕೌಶಲ್ಯ, ಔದಾರ್ಯ, ಸಾಹಸಾದಿಗಳಲ್ಲಿ ಅದ್ವಿತೀಯನಾದ ಇವನೇ ಸಜ್ಜನಾದರ್ಶ! ಉನ್ನತ ಪದವೀಧಾರಣೆಗೆ ಅತ್ಯಾವಶ್ಯವಾದ ಕಾರ್ಯದಕ್ಷತೆ, ನ್ಯಾಯೈಕಪಕ್ಷಪಾತ ಬುದ್ಧಿ, ಸ್ವಾಮಿಕಾರ್ಯನಿರ್ವಾಹಶಕ್ತಿ, ದೇಶವಾತ್ಸಲ್ಯ, ಭೂತದಯೆಯೇ ಇವನಲ್ಲಿ ಮೊದಲಾದ ಸದ್ಗುಣಗಳು ಮೂರ್ತೀಭವಿಸಿದ್ದುವು. ದೇಶೋನ್ನತಿಗೆ, ಭಾಷೋನ್ನತಿಯೂ, ಭಾಷೋನ್ನತಿಗೆ ಮಹಿಳಾಸಮ್ಮೇಳನವೂ ಅದಕ್ಕಾಧಾರವಾದ ಸ್ತ್ರೀವಿದ್ಯಾಭ್ಯಾಸವೂ ಮುಖ್ಯವಾದುವೆಂಬ ದೃಢಾಭಿಪ್ರಾಯವು ಈತನ ಹೃತ್ಕೋಶದಲ್ಲಿ ಭದ್ರೀಕರಿಸಲ್ಪಟ್ಟಿದ್ದುದರಿಂದ ದೇಶೋದ್ಧಾರಕ್ಕೆ ಕಂಟಕಪ್ರಾಯವಾದ ಸ್ತ್ರೀಯರ ಮೌಢ್ಯಾದಿಗಳನ್ನು ತೊಲಗಿಸಿ, ಸ್ತ್ರೀಸದ್ವಿದ್ಯಾಭ್ಯಾಸವನ್ನು—ಅದರಲ್ಲಿಯೂ ವಿತಂತುಸೋದರಿಯರಿಗೆ ಬ್ರಹ್ಮಚರ್ಯಾದಿ ಸುಶಿಕ್ಷಣವನ್ನು ಕೊಡುವುದು ಪ್ರೋತ್ಸಾಹಿಸುವುದರಲ್ಲಿ ಈತನಿಗಿದ್ದ ಆಸಕ್ತಿ ಅನಿರ್ವಚನೀಯವೇಸರಿ.

ಈತನ ದಯೆ, ಔದಾರ್ಯ. ಸೌಜನ್ಯಗುಣಾಳಿಗಳು ಇತರರನ್ನು ಸನ್ಮಾನಿಸು ತ್ತಿದ್ದಂತೆ ಅಧಿಕಾರಿಗಳನ್ನು ಆದರಿಸಲು ಅವಕಾಶಕೊಡುತ್ತಿರಲಿಲ್ಲ. ವಿಶೇಷ ವಿವರಣೆಯಿಂದೇನು? ಒಂದೇಮಾತಿನಲ್ಲಿ ಹೇಳಬೇಕೆಂದರೆ, ಗೃಹಿಣಿಗಳಲ್ಲಿ ಆದರ್ಶಪುರುಷನೇ ಚಿದಾನಂದನೂ, ಗೃಹಿಣಿಯರಿಗೆ ಆದರ್ಶರಮಣಿಯೇ ರಮಾಮಣಿಯೂ ಆಗಿದ್ದರೆಂಬುವದರಲ್ಲಿ ತಿಲಾಂಶವೂ ಸಂಶಯವಿಲ್ಲ.

ರಮಾಮಣಿಯು ಗೃಹರಾಜ್ಯಶಾಸನಕ್ರಮವೂ, ಅವಳಾ ಅಮೋಘ ತರ ಬಾಲ್ಯಶಿಕ್ಷಣ ವಿಚಕ್ಷಣೆಯೂ. ಗೃಹದಲ್ಲಿದ್ದ ಸಮಸ್ತರೂ ಭಕ್ತಿ, ಪ್ರೀತಿ, ವಿನಯ, ಗೌರವಾದಿಗಳನ್ನು ಅಭ್ಯಾಸಿಸುವಂತೆ ಮಾಡಿದ್ದುವು. ಇಂತಹ ಪವಿತ್ರಚರಿತೆಯಾದ ರಮಾಮಣಿಯು ಸಹಚರ್ಯೆಯು ತನ್ನ ವಿಚಾರಕ್ಕೊಳಪಟ್ಟವರು ಅಭ್ಯುದಯವನ್ನು ಹೊಂದುವಂತೆ ಮಾಡುವದ ರಲ್ಲಿ ಸಂಶಯವೇನು? ಈಕೆ, ನಭೆಯನ್ನು ತನ್ನ ಕಣ್ಣುಗಳಿಗೂ ಹೆಚ್ಚಾಗಿ ಪ್ರೀತಿಸಿ ಕಾಪಾಡುತ್ತಿದ್ದಳು.

ನಭೆಯು ಪ್ರಾತಃಕಾಲ ಎದ್ದ ಕೂಡಲೆ, ಸ್ನಾನಾದಿ ನಿತ್ಯಕೃತ್ಯಗಳನ್ನು ತೀರಿಸಿ, ಗೊತ್ತಾದ ಗೃಹಕಾರ್ಯಗಳನ್ನು ಮಾಡಿ, ವಿದ್ಯಾಭ್ಯಾಸದಲ್ಲಿ ನಿರತ ಳಾಗುತ್ತಿದ್ದಳು. ಸಹೋದರರೊಡನೆ ಅವರವರಿಗೆ ನಿಯಮಿತವಾದ ಆಂಗ್ಲಭಾಷಾಭ್ಯಾಸದ ವಿದ್ಯೆಯನ್ನೂ ಅನಂತರ ಸಂಸ್ಕೃತ, ಕರ್ಣಾಟಕಾ ದಿ ಗ್ರಂಥಪಠನವನ್ನೂ ಮುಗಿಸುತ್ತಿದ್ದಳು. ಆ ಬಳಿಕ ಗುರುಸನ್ನಿಧಿಯಲ್ಲಿ ತತ್ವಬೋಧಾಮೃತ, ಸೀತಾಮಾಹಾತ್ಮ್ಯ, ಸಂತಚರಿತ್ರೆ, ವಿಷ್ಣುಪುರಾಣಾದಿ ಗ್ರಂಥಶ್ರವಣಪಠನಾದಿಗಳು ನಡೆಯುತ್ತಿದ್ದುವು. ಅಲ್ಲದೆ, ರಮಾಮಣಿಯು ಬಲವದ್ಬಂಧನದಿಂದ ಅಲ್ಪಸ್ವಲ್ಪವಾಗಿ ಕಸೂತಿಯೇ ಮೊದಲಾದ ಕುಶಲ ಕಲೆಯನ್ನೂ ಕಲಿತಿದ್ದಳು.

ಸಹೃದಯಪಾಠಕ ಮಹಾಶಯರೆ ! ಪ್ರಿಯಭಗಿನಿಯರೆ !! ಆವ ಅಭಾಗಿನಿಯು ಶಂಕರಪೇಟೆಯಲ್ಲಿ ಏಕಾಶನ, ಗುಪ್ತಗೃಹನಿವಸನ ಮಲಿನವಸ್ತ್ರಧಾರಣಾದಿಗಳಿಂದ ಮಾಲಿನ್ಯವನ್ನಾಂತಿದ್ದಳೊ—ಅವಳೇ ಈಗ ಶ್ಯಾಮನಗರದಲ್ಲಿ ಸೌಖ್ಯವಾಗಿರುವಳು. ಅವಳು, ಈಗ ಉಪವಾಸ, ಜಾಗರ, ಕ್ಲೇಶಾದಿಗಳೆಲ್ಲಕ್ಕೂ ಶಂಕರಪೇಟೆಯಲ್ಲಿಯೇ ಜಲಾಂಜಲಿಯನ್ನ ರ್ಪಸಿ, ಹೃದಯದಲ್ಲಿ ಸುಖಭೋಜನ, ನಿದ್ರೆ, ಸಂತೋಷಾದಿಗಳಿಗೆ ಎಡೆ

ಕೊಟ್ಟಳು. ಪವಿತ್ರಹೃದಯ, ಪವಿತ್ರಆಶಯ. ಪವಿತ್ರಕೃತ್ಯ, ಪವಿತ್ರ ವಾಕ್ಯಗಳಿಗೆ ನಭೆಯು ತವರ್ಮನೆಯಾಗಿದ್ದಳು. ನಭೆಯ ಮನೋಧರ್ಮಕ್ಕೂ-ರಮಾಮಣಿಯ ಮನೋಭಾವಕ್ಕೂ ಎಲ್ಲಾ ಭಾಗದಲ್ಲಿಯೂ ಸಾಮರಸ್ಯವಿದ್ದಿತು. ಆದರೆ, ಒಂದು ವಿಚಾರದಲ್ಲಿ ಮಾತ್ರ ರಮೆಯ ಮನೋಗತವು ಭಿನ್ನವಾಗಿದ್ದಿತು ! ಅದೇನು ? ಹೇಗಾದರೂಮಾಡಿ ನಭೆಯನ್ನು ಪುನಃ ಸಂಸಾರಚಕ್ರದಲ್ಲಿ ಸಿಕ್ಕಿಸಬೇಕೆಂಬುದೊಂದು ರಮೆಯ ಆಶಯವು ! ಆ ಆಶೆಯನ್ನು ಪೂರ್ತಿಗೊಳಿಸಲು ಪುತ್ರಿಯನ್ನು ಅನೇಕವೇಳೆ ಪ್ರಶ್ನೆಮಾಡಿದ್ದಳು. ಅದು ನಿರರ್ಥಕವೆಂಬುದು ದೃಢವಾಗಿದ್ದರೂ ಪುನಃ ಪುನಃ ಪ್ರಕಾರಾಂತರದಿಂದ ಅವಳನ್ನು ಪ್ರಶ್ನೆಮಾಡದೆ ಬಿಡುತಿರಲಿಲ್ಲ. ಈ ವಿಚಾರದಲ್ಲಿ ಚಿದಾನಂದನ ಮನೋಭಾವವೇ ಬೇರೆ ಅವನು ವಿಷಯೋಪಭೋಗವೇ ಚಿರಸುಖಪ್ರದವಾದುದೆಂದು ನಂಬದಿದ್ದ ಕಾರಣದಿಂದಲೂ ಮಗಳು ಪುನರ್ವಿವಾಹಕ್ಕೆ ಅವಕಾಶಕೊಡುವದಿಲ್ಲವೆಂಬ ಅಂಶವನ್ನು ಚೆನ್ನಾಗಿ ತಿಳಿದಿದ್ದುದರಿಂದಲೂ ಅವಳ ಚಿರಸುಖದಾಯಕ ಮಾರ್ಗವನ್ನು ಹುಡುಕುತ್ತಿದ್ದನು.

ವಾಚಕ ವಾಚಕಿಯರೆ ! ಪ್ರಾಯಃ ಈ ನಮ್ಮ ನಾಡಿನಲ್ಲಿ ಶರಾವತಿ, ಶಂಕರನಾಥರಂತಹರೇ ಹೆಚ್ಚು ! ಪತಿಪತ್ನೀಪ್ರೇಮವು ಚೆನ್ನಾಗಿ ನೆಲಸಿ ಗೃಹ ಕಾರ್ಯವನ್ನು ನೆರವೇರಿಸುವಂತಹ ರಾಮಾಮಂದಿರಗಳು ಕೇವಲ ವಿರಳ ! ಹೀಗೆ ಕೆಲವು ಗೃಹಗಳಾದರೂ ಚಿದಾನಂದನಂತಹ ಗೃಹಿಗಳನ್ನೂ ರಮಾಮಣಿಯಂತಹ ಗೃಹಿಣಿಯರನ್ನೂ ಹೊಂದಿದ್ದ ಪಕ್ಷದಲ್ಲಿ ನಮ್ಮ ಧರ್ಮಭಗಿನಿಯರಾದ ವಿತಂತುಗಳು ಇಂತಹ ಕಠೋರಬಾಧೆಯನ್ನನುಭವಿಸಬೇಕಾಗಿರಲಿಲ್ಲ. ಹೀಗೆ ವೃಥಾಪವಾದ ನಿಷ್ಠುರಾದಿಗಳಿಗೆ ಗುರಿಯಾಗಿ ನಿರಂತರವೂ ದುಃಖಭಾಜನೆಯರೆನ್ನಿಸಿ ಹೇಳಲಳವಲ್ಲದ ಕಷ್ಟನಷ್ಟಗಳನ್ನನುಭವಿಸುವುದನ್ನು ನೋಡಿನೋಡಿ, ವಿಲಾಸಪ್ರಿಯರಾಗಿ ನಲಿಯುವಂತಹ ದುಸ್ಥಿತಿಗೆ ಬರುತ್ತಿರಲಿಲ್ಲ. ಮತ್ತೂ ನಮ್ಮ ದೇಶಮಾತೆಯ ಅಂತಸ್ತಾಪಕ್ಕೂ ಎಡೆಯಿರುತ್ತಿರಲಿಲ್ಲ. ಆಗಲಿ; ಪಾತ್ರಾಪಾತ್ರ ವಿಚಾರದಲ್ಲಿಯೇ ಈ ಪರಿಚ್ಛೇದವನ್ನು ಮುಗಿಸಿದುದಕ್ಕಾಗಿ ಕ್ಷಮೆಬೇಡುವೆವು. ಆದರೂ ಇದರಲ್ಲಿಯ ವಿಷಯಗಳು ಉಪಯೋಗಕ್ಕೆ ಬಾರದಿರವು.

# ಅಷ್ಟಮ ಪರಿಚ್ಛೇದ.

( ಆನಂದಲಹರಿ. )

ಮಧ್ಯಾಹ್ನ ನಾಲ್ಕುಘಂಟೆಯ ಸಮಯ; ಸೂರ್ಯನಾರಾಯಣನು ಪಶ್ಚಿಮಾದ್ರಿಯನ್ನು ಅಡರಲು ಉಪಕ್ರಮಿಸಿರುವನು. ಸಭೆ ವಿದ್ಯಾವ್ಯಾಸಂಗದಲ್ಲಿ ಅನನ್ಯಮನಸ್ಕಳಾಗಿ ತನ್ನ ಕಿರುಮನೆಯಲ್ಲಿ ಕುರ್ಚಿಯಮೇಲೆ ಕುಳಿತಿರುವಳು. ಮನೆಯಲ್ಲಿದ್ದ ಉಳಿದವರೆಲ್ಲರೂ ತಮ್ಮತಮ್ಮ ಕಾರ್ಯದಲ್ಲಿ ನಿರತರಾಗಿದ್ದುದರಿಂದ ಆ ಚಿದಾನಂದನ ಗೃಹವು ವಿಶ್ರಾಂತಿ ಸಮಯದಲ್ಲಿದ್ದಂತೆ ಭಾಸವಾಗುತ್ತಿದ್ದಿತು.

ಸಭೆಯ ಪರವಶತೆಯು ಹಠಾತ್ ಲೋಪವಾಯಿತು. ಚಕಿತೆಯಾಗಿ ಏಳಲು ಪ್ರಯತ್ನಿಸಿದಳು; ಆದರೆ, ಆಗಲಿಲ್ಲ. ಏಕೆ? ಅಣ್ಣನಾದ ನಿರಂಜನನು ಹಿಂದುಗಡೆಯಿಂದ ಬಂದು ತಂಗಿಯ ಕಣ್ಣುಗಳನ್ನು ತನ್ನೆರಡು ಕೈಗಳಿಂದಲೂ ಹಿಡಿದಿರುವನು. ಅವನ ಆನಂದಕ್ಕೆ ಪಾರವಿಲ್ಲ; ಅವನು "ಸಭೆಯೇನು, ಹೇಳುವಳೋ ಕೇಳಬೇಕೆಂದು" ಪರಿಚಯವನ್ನು ಕೊಡದೆಯೇ ನಿಂತಿದ್ದನು. ಸಭೆ, ಕಣ್ಣುಗಳನ್ನು ಬಿಡಿಸಿಕೊಳ್ಳಲು ಬಹು ಪ್ರಯತ್ನಪಟ್ಟಳು; ಸಾಧ್ಯವಾಗಲಿಲ್ಲ. ಅವಳಿಗೆ ಮುಂದೆ ಸುಮ್ಮನಿರಲಾಗಲಿಲ್ಲ. ಕ್ರೋಧಾವೇಶದಿಂದ ಕೂಗಿದಳು:— ಛಿಃ! ಛಿಃ!! ರಾಜಶೇಖರ! ಇದೇನಿದು? ಬಿಡು! ಬಿಡು!! ಇದೆಂತಹ ಹುಡುಗಾಟ!! ನೀನು ನನ್ನನ್ನು ಮುಟ್ಟಕೂಡದು! ಬಿಡು! ಬಿಡು!! "

ನಿರಂಜನನು ಮತ್ತೂ ವಿನೋದದಿಂದ ಪ್ರತ್ಯುತ್ತರವನ್ನು ಕೊಡದೆ ಸುಮ್ಮನೆ ನಿಂತಿದ್ದನು.

ಸಭೆಗೆ ಕ್ರೋಧವು ಅತಿಯಾಯ್ತು; ಕಂಪಿತಸ್ವರದಿಂದ ಕೂಗಿದಳು:- " ಬಿಡುವುದಿಲ್ಲವೆ? ಇರಲಿ! ಅಮ್ಮಾ! ಅಮ್ಮಾ!! ರಾಜಶೇಖರನು ನನ್ನ ಕಣ್ಣನ್ನು ಮುಚ್ಚಿರುವನು; ನೋಡೆ! ಅಮ್ಮಾ!! "

ನಿರಂಜನನೂ ತಲೆತೂಗುತ್ತ, ವ್ಯಂಗ್ಯಸ್ವರದಿಂದ "ನಭಾ! ಕೂಗು. ಕೂಗು!! ನಾನೂ ಕೂಗುವೆನು." ಎಂದು ಹೇಳಿ 'ಅಮ್ಮಾ! ರಾಜಶೇಖರ, ನಾನು ಹುಡುಗಾಟ!" ಎಂದು ಕೂಗಿದನು.

ನಿರಂಜನನ ಸ್ವರವು ಕಿವಿಗೆ ಬಿದ್ದೊಡನೆಯೇ ಕಾರ್ಯತತ್ಪರಳಾಗಿದ್ದ ರಮಾಮಣಿ ಓಡಿಬಂದಳು; ಏನೇನೋ ಆಲೋಚನೆಗಳನ್ನು ಮಾಡುತ್ತಿದ್ದ ನಭೆಯ ಮನಸ್ಸು ಏನೋ ಒಂದು ವಿಧವಾಗಿ ಪರಿವರ್ತಿತವಾಯಿತು. ರಮಾಮಣಿಯು ವಿದ್ಯಮಾನವನ್ನವಲೋಕಿಸಿ ಕಿರುನಗೆಯಿಂದ "ರಾಜಶೇಖರ! ಬಿಟ್ಟುಬಿಡಪ್ಪ!" ಎಂದಳು.

ನಿರಂಜನನು ನಗುತ್ತ ಕೈಯನ್ನು ತೆಗೆದು "ಇಗೋ! ರಾಜಶೇಖರ!" ಎಂದು ಹಾಸ್ಯಮಾಡಿದನು.

ನಭೆ, ಕಣ್ತೆರದು ನೋಡಿದಳು. ಪ್ರಿಯಭ್ರಾತೃವಿನ ದರ್ಶನ! ಬಹುದಿನಗಳ ಅನಂತರ ಆದ ಅಣ್ಣನ ದರ್ಶನದಿಂದ ಹರ್ಷಿತಳಾದರೂ ಅವ್ಯಕ್ತ ಮನೋವ್ಯಾಕುಲದಿಂದ ಕಣ್ಣಿನಲ್ಲಿ ನೀರುಸುರಿಸುತ್ತ ಕ್ಷಣಕಾಲ ನಿಂತುಬಿಟ್ಟಳು. ಆಬಳಿಕ ಮನಸ್ಸನ್ನು ಸಮಾಧಾನಸ್ಥಿತಿಗೆ ತಂದುಕೊಂಡು "ಅಣ್ಣ! ಇದೇನು, ವರ್ತಮಾನವನ್ನು ಕೊಡದೆಯೇ ಬಂದುಬಿಟ್ಟೆ? ಆವಾಗ ಹೊರಟೆ?" ಎಂದು ಪ್ರಶ್ನೆ ಮಾಡಿದಳು.

ನಿರಂಜನ:—ನನ್ನ ಆಗಮನಕ್ಕೆ ಸೂಚನೆಯೂ ಬೇಕೋ? ಬಿಟ್ಟೆ!

ನಭಾ:— ಏಕೆ ನಿಂತಿರುವೆ? ಕುಳಿತುಕೊಳ್ಳಬಾರದೆ? ಮನೆಯಲ್ಲಿ ಎಲ್ಲರೂ ಕ್ಷೇಮವೇ?

ನಿರಂಜನ:— ಎಲ್ಲರೂ ಕ್ಷೇಮ.

ರಮಾ:— "ನಿರಂಜನ! ನಿನ್ನ ಧ್ವನಿಯನ್ನು ಕೇಳಿ ಆಶ್ಚರ್ಯಪಟ್ಟು ಓಡಿಬಂದುಬಿಟ್ಟೆ! ನೀರಿಗೆ ಹಾಕಿದ ಚಹವನ್ನು ಶೋಧಿಸದೆಯೇ ಓಡಿಬಂದೆ. ಇಲ್ಲಿಯೇ ಇವಳೊಡನೆ ಮಾತನಾಡುತ್ತ ಕುಳಿತಿರು. ನಾನೂ ಬರುವೆನು." ಎಂದು ಹೇಳಿ ಒಳಗೆ ಹೊರಟುಹೋದಳು.

ನಿರಂಜನನು "ಆಗಬಹುದು. ನಾಳೆಯದಿನ ಸಾಯಂಕಾಲದವರೆಗೂ ಇಲ್ಲಿಯೇ ಇರುವೆನು. ಅಷ್ಟರೊಳಗಾಗಿ ಬಾ!" ಎಂದು ಹೇಳಿ ನಭೆಯ ಇದಿರಿಗಿದ್ದ ಒಂದು ವೇತ್ರಾಸನವನ್ನು ಅಲಂಕರಿಸಿದನು.

ನಭಾ:— ಕ್ಷಮಿಸು, ಅಣ್ಣಾ! ತಿಳಿಯಲಿಲ್ಲ.

ನಿರಂಜನ:— ಏನನ್ನು ಕ್ಷಮಿಸುವುದು? ತಪ್ಪುಮಾಡಿ ಕ್ಷಮಾಪಣೆ ಕೇಳುವುದೋ? ಅದೇ ಮರ್ಯಾದೆಯೋ!

ನಭಾ:— ನೀನೇಕೆ ಹಾಗೆಮಾಡಿದೆ?

ನಿರಂಜನ:— ನೀನೇಕೆ, ಹಾಗೆ ಅರಚಿಕೊಂಡೆ ?

ನಭಾ:— ರಾಜಶೇಖರನು ಹಿಡಿದುಕೊಂಡನೆಂದು ಅರಚಿಕೊಂಡೆ!

ನಿರಂಜನ:— ನನ್ನ ಹಾಗೆ ಅವನು ಮಾಡಿದ್ದರೆ, ಆಗುತ್ತಿದ್ದ ಕುಂದೇನು?

ನಭಾ:— ಕುಂದಲ್ಲವೆ? ನೀನು ನನಗಾರು? ಅಣ್ಣ. ಮತ್ತು ನನ್ನ ವಿಷಯದಲ್ಲಿ ನೀನು ನಿಷ್ಕಲ್ಮಷವಾದ ಶುದ್ಧಪ್ರೇಮದಿಂದ ನನ್ನ ಆತ್ಮೋನ್ನತಿಯಾಗುವಂತೆ ಮಾಡಲುಳ್ಳವನಾಗಿದ್ದೀಯೆ. ಅವನು ಆ ಭಾವವನ್ನು ತ್ಯಜಿಸಿರುವುದರಿಂದ ಅವನನ್ನು ಕಂಡರೆ ನನಗೆ ಹೆದರಿಕೆಯಾಗುತಿರುವುದು.

ನಿರಂಜನ:— ಅವನ ಭಾವವೆಂತಹುದು ? ಉದ್ದೇಶವಾದರೂ ಏನೆಂಬುದನ್ನು ಬಲ್ಲೆಯೊ ?

ನಭಾ:— ಪುನರ್ವಿವಾಹವಿಧಿಯಿಂದ ನಾನು ಆತನನ್ನು ವರಿಸಬೇಕಂತೆ !

ನಿರಂಜನ:— ಅದಕ್ಕೆ ನೀನೇನು ಹೇಳುವೆ ?

ಈ ವೇಳೆಗೆ ಸರಿಯಾಗಿ ರಮಾಮಣಿಯು ಚಹದ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಕಿರುಮನೆಯನ್ನು ಹೊಕ್ಕಳು. ಹಿಂದೆ ಉಪಾಹಾರ ಪದಾರ್ಥವನ್ನು ತಂದ ಪರಿಚಾರಕನು ನಿರಂಜನ, ರಮಾಮಣಿ, ನಭೆಯರಿಗೆ ಮುಂದಿಟ್ಟು ಹೊರಟುಹೋದನು. ರಮಾಮಣಿಯೂ ಒಂದು ಆಸನವನ್ನು ಸ್ವೀಕರಿಸಿದಳು.

ನಿರಂಜನನು ರಮಾಮಣಿಯ ಆಜ್ಞಾನುಸಾರವಾಗಿ ಟೀಕಪಾಯವನ್ನು ಕುಡಿಯುತ್ತ "ಅಮ್ಮ ! ನೀನೇನು ಹೇಳುವೆ ?" ಎಂದನು.

ರಮಾ:— ಆವ ವಿಷಯದಲ್ಲಿ ?

ನಿರಂಜನ:— ನಭೆಯ ಪುನರ್ವಿವಾಹ ವಿಷಯದಲ್ಲಿ !

ರಮಾ:— ನನಗೇನೋ ಪೂರ್ಣಾಭಿಲಾಷೆಯಿರುವುದು. ಆದರೆ, ಅವಳಿಗೆ ಇನ್ನು ಹೇಳಲಾರೆನು. ಹೇಳುವಷ್ಟನ್ನೆಲ್ಲ ಹೇಳಿ, ಅಂದೇ ಮುಗಿಸಿ ಬಿಟ್ಟಿರುವೆನು.

ನಿರಂಜನ:— ನಭಾ! ಏನುಹೇಳುವೆ ?

ನಭಾ:— ಏನುಹೇಳಲಿ? ಅಮ್ಮನು ಹೇಳಿದುದೂ ಉಂಟು; ಅಮ್ಮನಿಗೆ ಸಮಂಜಸವಾದ ಉತ್ತರವನ್ನು ಕೊಟ್ಟುದೂ ಉಂಟು. ನಾನೊಲ್ಲೆನು.

ನಿರಂಜನ:— ಏಕೆ ?

ನಭಾ:— ಏಕೆಂದರೆ, ಏನುಹೇಳಲಿ? ಇಷ್ಟವಿಲ್ಲ.

ನಿರಂಜನ:— ಇಷ್ಟವಿಲ್ಲವೊ? ಸುಖವಾಗಿ ಬಾಳುವ ಮಾರ್ಗದಲ್ಲಿ ಹೋಗಲು ಇಷ್ಟವಿಲ್ಲವೊ ?

ನಭಾ:—ಇವೆಲ್ಲಾ ಸುಖಗಳೊ? ನೈಜವಾದ ಸುಖವಾವುದು ? ಅದೆಲ್ಲಿದೆ? ವಿಚಾರಮಾಡಿ ಹೇಳಿರಿ !

ನಿರಂಜನ:—ಹಾಗಾದರೆ, ಮತ್ತಾವುದು ನೈಜವಾದ ಸುಖ ?

ನಭಾ:— ಇದೇ ಈಗಿನ ಈ ಸುಬ್ರಹ್ಮಚರ್ಯೆಯೇ ಉತ್ತಮವಾದ ಮಾರ್ಗವೆಂದು ಧೈರ್ಯವಾಗಿ ಹೇಳಬಲ್ಲೆನು.

ನಿರಂಜನ:—ಒಂದುವೇಳೆ, ಇದು ಅಸಾಧ್ಯವಾಗಿ ತೋರಿದರೋ?

ನಭಾ:— ಅಸಾಧ್ಯವಾವುದು? ನಮ್ಮ ಸ್ವಾಧೀನದಲ್ಲಿರುವ ಆವುದಾದರೂ ನಮ್ಮ ಪ್ರಯತ್ನದಿಂದ ಅಸಾಧ್ಯವಾಗುವುದುಂಟೊ ? ತಕ್ಕಷ್ಟು ಶ್ರಮಪಟ್ಟರೆ, ಎಲ್ಲವೂ ಸಾಧ್ಯವೇ ಆಗುವುದು.

ನಿರಂಜನ:— ಅಷ್ಟು ಕಷ್ಟಪಡಲೇಕೆ ? ಸುಲಭವಾದುದಕ್ಕಲ್ಲದೆ, ಕಷ್ಟವಾದುದಕ್ಕೆ ಯತ್ನಿಸುವುದರಿಂದೇನು ?

ನಭಾ:—ಕಷ್ಟವಿಲ್ಲದೆ ಸುಖವು ದೊರೆಯದು. ಕಷ್ಟವಿಲ್ಲದೆ ದೊರೆವ ಸುಖವು ನೈಜವಾದ ಸುಖವಲ್ಲವು. ಸುಖದಂತೆ ಕಾಣುವ ಕಷ್ಟವೇ ಅದೆನ್ನಬಹುದು.

ನಿರಂಜನ:— ಹಾಗಾದರೆ, ನೈಜವಾದ ಸುಖವಾವುದು ?

ನಭಾ:— ಇಹವ್ಯಾಪಾರವನ್ನು ಸಾಧ್ಯವಾದಮಟ್ಟಿಗೆ ತ್ಯಜಿಸಿ ಪರದ ಸರ್ವಸ್ವಕ್ಕೆ ಪ್ರಯತ್ನಿಸುವುದು.

ರಮಾ:— ಕರ್ಮಭೂಮಿಯಲ್ಲಿ ಹುಟ್ಟಿದವರೆಲ್ಲರೂ ಇಹವ್ಯಾಪಾರದಲ್ಲಿ ಬದ್ಧರಾಗಿರಲೇಬೇಕು. ಅದನ್ನು ಬಿಟ್ಟಿರುವರಾರಿರುವರು ?

ನಭಾ:—ಹಾಗೆ ಬದ್ಧರಾಗಿದ್ದರೂ ಕೀವು ರಕ್ತಮಯವಾದ ಕೂಪದಲ್ಲಿ ಬಿದ್ದು ಕಷ್ಟಪಡುವುದಕ್ಕಿಂತ ತಾವರೆಯೆಲೆಯ ಮೇಲಿನನೀರಿನಂತೆ ನಿರ್ಲಿಪ್ತರಾಗಿದ್ದು, ವಿಶಾಲವಾದ ಮೈದಾನದಲ್ಲಿ ವಿರಮಿಸುವವರೇ ಧನ್ಯರು.

ನಿರಂಜನ:— ನಿನ್ನ ಅಭಿಪ್ರಾಯದಲ್ಲಿ ಕೀವು—ರಕ್ತಮಯವಾದ ಕೂಪವಾವುದು ?

ನಭಾ:— ಕ್ಷಣಭಂಗುರವಾದ ಕಾಮಕ್ರೋಧಾದಿಗಳಿಗೊಳಪಟ್ಟ ದುರ್ವಿಷಯಗಳೇ ಕೀವುರಕ್ತಗಳು; ಇವುಗಳಿಗೆ ಆಧಾರಭೂತವಾದ ದುರಭಿಮಾನವೇ ಕೂಪವು. ಇಂತಹ ಕೂಪದಲ್ಲಿ ಬಿದ್ದಿರುವರೇ ಹುಚ್ಚರು.

ರಮಾ:— ಹಾಗಾದರೆ, ನಾವೆಲ್ಲಾ ಹುಚ್ಚರೇನು ?

ನಭಾ:— ಅಮ್ಮ! ಗೃಹಸ್ಥಾಶ್ರಮಧರ್ಮದಲ್ಲಿರುವ ನೀವು ಹಾಗೆಂದಿಗೂ ತಿಳಿಯಬಾರದು.

ರಮಾ:—ಹಾಗಾದರೆ, ನಮ್ಮ ಕರ್ಮಗಳು ಮಾತ್ರವುವು? ಹೇಗಿರಬೇಕು? ಹೇಳಬಲ್ಲೆಯಾ?

ನಭಾ:— ಅಣ್ಣ! ಅಮ್ಮ! ಹಾಸ್ಯಮಾಡಬೇಡಿರಿ. ನನಗೆ ವೇದಾಂತವು ತಿಳಿಯದು. ಆದರೂ ಇಷ್ಟು ಮಾತ್ರ ತಿಳಿದಿರುವೆನು. ಪ್ರಾಪಂಚಿಕ ತತ್ವವನ್ನು ವಿಚಾರಮಾಡಿದರೆ, ಪತಿಗೆ ಸತಿಯೂ, ಸತಿಗೆ ಪತಿಯೂ ಪರಸ್ಪರ ಸಹಾಯಕರಾಗಿರಬೇಕು. ಅವರು ದೇಹ, ವಾಕ್, ಮನಸ್ಸುಗಳಲ್ಲಿಯೂ ಒಬ್ಬರಂತೆಯೇ ಅಭೇದಭಾವದಿಂದಿರಬೇಕು. ಇಂತಹ ಅಭಿನ್ನಭಾವನೆಯ ಕ್ಷಮದಮಾದಿಯೋಗದಿಂದ ಚತುರ್ವಿಧಪುರುಷಾರ್ಥಗಳನ್ನು ಸಂಪಾದಿಸುವುದೇ ಗೃಹಸ್ಥಾಶ್ರಮದ ಅಧಿಕಾರವು. ಗೃಹಿಗಳು. ಪುತ್ರಮಿತ್ರಕಳತ್ರಾದಿ ಬಂಧುವರ್ಗವನ್ನೂ ಬ್ರಹ್ಮಚಾರಿ ಸನ್ಯಾಸಿಗಳೇ ಮೊದಲಾದ ಅನಾಥವರ್ಗವನ್ನೂ ಕಾಪಾಡಬೇಕಾದುದು ಕರ್ತವ್ಯವಾಗಿದೆ. ಇಂತಹ ಕರ್ತವ್ಯಸಾಧನೆಗೆ ನಿರ್ದುಷ್ಟವಾದ ಶ್ರದ್ಧೆ, ಸಮಾದರ, ಅಭಿಮಾನಗಳು ಚಿರಸ್ಥಾಯಿಗಳಾದ ಉಪಕರಣಗಳಾಗಿರಬೇಕು. ಹಾಗಲ್ಲದಿದ್ದರೆ ಅವರು ನಿಜಕರ್ತವ್ಯಕರ್ಮವನ್ನು ಹೋಗಲಾಡಿಸಿಕೊಳ್ಳುವರು.

ನಿರಂಜನ:-ಇಂತಹ ಸರ್ವೋತ್ತಮಧರ್ಮವೇ ನಿನಗೂ ಕೂಡದೊ?

ಸಭಾ:— ಅಣ್ಣ! ನಾನೂ ಗೃಹಸ್ಥಾಶ್ರಮ ಧರ್ಮದಲ್ಲಿಯೇ ಇರಲುಳ್ಳವಳಾದರೂ ಇಂದ್ರಿಯನಿಗ್ರಹದಲ್ಲಿ ಮಾತ್ರ ಬ್ರಹ್ಮಚರ್ಯಾಶ್ರಮಧರ್ಮವನ್ನೇ ಅವಲಂಬಿಸಬೇಕೆಂದು ಹೇಳಬಲ್ಲೆನು.

ನಿರಂಜನ:—ಅದು ಹೇಗಾದರೂ ಆಗಲಿ; ನೀನು ನಿನ್ನ ತಾಯಿತಂದೆಗಳ ಮಾತನ್ನು ಮೀರಬಾರದಷ್ಟೆ! ಅದನ್ನಾದರೂ ಒಪ್ಪುವಿಯೋ ಇಲ್ಲವೊ? ಮಾತಾಪಿತೃಗಳಿಗೆ ಕೃತಘ್ನರಾಗಬಾರದಷ್ಟೆ?

ಸಭಾ:— ನಿಜ.

ರಮಾಮಣಿ:— ಕಿರುನಗೆಯಿಂದ "ಹಾಗಾದರೆ, ನಮ್ಮ ಮಾತನ್ನು ಮೀರುವುದಿಲ್ಲವಷ್ಟೆ?"

ಸಭಾ:— ಹಾಗೆಂದರೆ, ಕೆಲವು ವಿಷಯಗಳಲ್ಲಿ ಮೀರಲೂ ಬೇಕಾಗುವುದು.

ರಮಾ:— ಮೀರಿದರೆ ಅವರು ಕೃತಘ್ನರಲ್ಲವೊ ?

ಸಭಾ:-ಎಂದಿಗೂ ಹಾಗಾಗಲಾರದು. ಸ್ವಯಂಜ್ಞಾನದಿಂದ ನ್ಯಾಯಾನ್ಯಾಯವನ್ನು ವಿಚಾರಮಾಡಿ ತಿಳಿಯುವ ಪರ್ಯಂತವೇ ಪುತ್ರ-ಪುತ್ರಿಯರ ಬುದ್ಧಿಯ ಮೇಲಿನ ಅಧಿಕಾರವು ಮಾತಾಪಿತೃಗಳಿಗೆ ಸೇರಿದುದು. ಆಬಳಿಕ ಅದಕ್ಕೆ ಅವರು ಅಧಿಕಾರಿಗಳಾಗಲಾರರು. ಹೇಗೆಂದರೆ:—ವಯಸ್ಕನೂ ವಿವೇಕಿಯೂ ಆದ ಮಗನೊಬ್ಬನಿಗೆ ಅವಿವೇಕಿಯೂ ನೀಚನೂ ಆದ ತಂದೆಯು ಬ್ರಹ್ಮಹತ್ಯವನ್ನು ಮಾಡಿ ಲಕ್ಷಾಂತರ ರೂಪಾಯಿಗಳನ್ನು ಗಳಿಸಲು ಪ್ರೇರಿಸಬಹುದು.—ಏಕೆ ? ಆಜ್ಞೆಕೊಡಬಹುದು. ಅಂತಹ ಸಂದರ್ಭದಲ್ಲಿ ಆಜ್ಞಾಭಂಗಮಾತ್ರದಿಂದಲೇ ಆ ಪುತ್ರನು ಕೃತಘ್ನನಾಗಲಾರನು. ಹೀಗೆಯೇ ಎಷ್ಟೋವಿಷಯಗಳಿವೆ. ಪಾಪಗಳನ್ನಾಚರಿಸುವಾಗಲೂ ಅವನ್ನು ತಕ್ಕಡಿಯಲ್ಲಿ ತೂಗಿ ಲಘುವಾದುದನ್ನು ಸ್ವೀಕರಿಸಬೇಕಲ್ಲವೆ ?

ನಿರಂಜನ:-ಹಾಗಾದರೇನು? ನಾವು ಹೇಳುವ ಕಾರ್ಯವು ಪಾಪಕಾರಿಯೊ?

ಸಭಾ:—ನಿಸ್ಸಂಶಯವಾಗಿಯೂ ಅಹುದು.

ನಿರಂಜನ:—ಅದು ಹೇಗೆ ?

ನಭಾ:—ಈಗ ನಾನಾರಸ್ವತ್ತು ?

ನಿರಂಜನನು ಮನಸ್ಸಿನಲ್ಲಿಯೇ "ನಮ್ಮ ಸ್ವತ್ತು; ಹೇಗೆ? ಆಗಲೇ ದಾನಮಾಡಿದ್ದೇವೆ. ಅಧಿಕಾರಿಯೇ ಇಲ್ಲ, ಏನುಹೇಳಲಿ ?ಶಾಸ್ತ್ರಾನುಸಾರವಾಗಿ ಮಾತನಾಡದಿದ್ದರೆಯೇ ಅನುಕೂಲ. ಬೇಗ ಸಿಕ್ಕಿಸಿಕೊಳ್ಳಬಹುದು. ಆದುದರಿಂದ ಹೀಗೆ ಹೇಳುವೆನು." ಎಂದುಕೊಂಡು "ನಿನಗೆ ನಾವೇ ಅಧಿಕಾರಿಗಳು."

ನಭಾ:— ದರ್ಪದಿಂದ ಹೇಗೆ? ಅದೆಂದಿಗೂ ಆಗಲಾರದು. ಆ ವಿಚಾರವಿರಲಿ, ನಿಮ್ಮ ಮನೋಗತದಂತೆಯೇ ಬರುತ್ತೇನೆ. ಒಬ್ಬ ವಿಧವೆಗೆ ದ್ವಿತೀಯಸಂಬಂಧದಲ್ಲಿ ಸಂತಾನವಾಗುವುದೆಂದು ಭಾವಿಸುವ! ಆ ಸಂತಾನಕ್ಕೆ ಅಧಿಕಾರಿಯು ಯಾರಾಗಬೇಕು? ಮೊದಲಗಂಡನೊ? ಎರಡನೆಯಗಂಡನೊ? ಅವನ ತಾಯ್ತಂದೆಗಳೊ? ಅಥವಾ ಆ ವಿಧವೆಯೋ? ಯಾರು ?

ನಿರಂಜನ-ರಮಾಮಣಿಯರು ಫಕ್ಕನೆ ನಕ್ಕು "ಏನು? ನಿನ್ನ ಪ್ರಶ್ನೆಯೇ ವಿಜಾತೀಯವಾಗಿದೆ." ಎಂದರು.

ನಭೆಯು ಹೇಳಿದಳು:— "ಪ್ರಶ್ನೆಮಾಡುವಾಗಲೇ ಇಷ್ಟು ನಗುವ ನೀವು, ಆ ವಿಧವೆಗೆ ಸಂತಾನವಾದಾಗ ಮತ್ತೇನುಮಾಡಬಹುದೋ? ವೃಥಾವಿವಾದದಿಂದ ನನಗೇಕೆ ಕಷ್ಟವನ್ನು ಕೊಡುವಿರಿ?

ರಮಾ:— ಚರ್ಚಿಸಲೂ ಬಾರದೇನು ?

ನಿರಂಜನ:— ಚರ್ಚೆಮಾಡಬಾರದೆಂದು ಹೇಳುವರಾರು? ನಭಾ!

ನಭಾ:—ಅದು ತಪ್ಪಲ್ಲ. ಪ್ರತಿಯೊಂದು ಕಾರ್ಯದಲ್ಲಿಯೂ ವಿಚಾರವಿಮರ್ಶೆಯು ಅತ್ಯಾವಶ್ಯಕವೇ ಸರಿ. ವಿಚಾರವಿಲ್ಲದೆ ಆವುದನ್ನೂ ಮಾಡಬಾರದು.

ನಿರಂಜನ:— ಸರಿಯೆ, ಅದಕ್ಕೆಂದೇ ವಿಚಾರಕ್ಕೆ ಬಂದಿದ್ದೇವೆ.

ನಭಾ:—ಹಾಗಾದರೆ, ಸುಮ್ಮನೆ ನಗುವುದೇಕೆ? ಹೇಳಿರಿ, ಆಸಂತಾನದ ಅಧಿಕಾರವಾರದು ?

ನಿರಂಜನ:— ಎರಡನೆಯ ಗಂಡನಿಗೆ ಸೇರತಕ್ಕುದು.

ನಭಾ:— ಹೇಗೆ ?

ನಿರಂಜನ:— ಹೇಗೆಂದರೆ, ನೋಡು, ಅವಳಿಗೆ ಮತ್ತೆ ವಿವಾಹವಾದರೆ ಆಗ ಅವಳು ವಿವಾಹವಾದವನ ಸ್ವತ್ತಾಗುವಳಷ್ಟೆ! ಅವಳಲ್ಲಿ ಹುಟ್ಟಿದ ಸಂತಾನವೂ ಅವಳ ಕೈಹಿಡಿದವನದೇ ಆಗುವುದು.

ಸಭಾ:— ಹೇಗೆ ?

ನಿರಂಜನ:— ಮತ್ತೇನು?

ಸಭಾ:— ಅವಳ ಮೇಲಿನ ಅಧಿಕಾರವು ಆ ಉಪಪತಿಗೆಂದಿಗೂ ದೊರೆಯದು. ಹೇಗೆಂಬುದನ್ನು ನನ್ನ ಅಲ್ಪಮತಿಗೆ ತೋರಿದಂತೆ ಹೇಳುವೆನು ಕೇಳಿರಿ. ಒಬ್ಬ ಉದಾರಿಯಾದ ಜಮೀನುದಾರನು ಒಂದು ಕ್ಷೇತ್ರವನ್ನು ಒಬ್ಬ ಬ್ರಾಹ್ಮಣನಿಗೆ ದಾನಮಾಡುವನೆಂದು ಭಾವಿಸಿರಿ. ಹಾಗೆ ದಾನವಾದ ಸ್ವತ್ತಿನಮೇಲೆ ದಾನಕೊಟ್ಟವನ ಅಧಿಕಾರವೇನೂ ಇರದು. ಅದರ ಫಲವನ್ನು ದಾನ ತೆಗೆದುಕೊಂಡವನೇ ಅನುಭವಿಸಬೇಕು. ದಾನವನ್ನು ಅಂಗೀಕರಿಸಿದವನು ಮತ್ತೊಬ್ಬರಿಗೆ ದಾನಮಾಡದೆ ಮೃತನಾದರೆ, ಆ ಸ್ವತ್ತಿಗೂ ಆ ಸ್ವತ್ತಿನಲ್ಲಾಗುವಫಲಕ್ಕೂ ಅಧಿಕಾರಿಯಾರು? ಹಾಗೆಯೇ, ವಿಧಿವತ್ತಾಗಿ ತಾಯಿ ತಂದೆಗಳು ಆವಾತನ ಹಸ್ತದಲ್ಲಿ ತಮ್ಮ ತಮ್ಮ ಮಕ್ಕಳನ್ನು ಎಂದು ಒಪ್ಪಿಸುವರೊ-ಅಂದೇ, ಅವರ ಮೇಲಿನ ಅಧಿಕಾರವು ಕಳೆದುಹೋಗುವುದು. ದಾನಪರಿಗ್ರಾಹಿಯಿಂದ ಅದನ್ನು ಮತ್ತಾರಾದರೂ ಪಡೆಯದೆ ತಾಯಿತಂದೆಗಳಿಂದ ಪಡೆಯಲಾಗದು. ದಾನವನ್ನು ಸ್ವೀಕರಿಸಿದವನು ಮೃತನಾದರೆ, ದಾನವಾದ ವಸ್ತುವು ಇಚ್ಛಿತವಸ್ತುವಿನೊಡನೆ ಸೇರಲರ್ಹವಾಗಲಾರದು. ದಾನವಾಗಿ ಹೋಗುವ ವಸ್ತುವಿಗೆ ದಾನಕ್ಕೆ ಹೋಗುವ ಅಧಿಕಾರವೆಷ್ಟೋ ಅಷ್ಟೇವಿನಾ, ಅರಿಗೆ, ಆವಾಗ, ಹೇಗೆ ದಾನವಾಗಬೇಕೆಂಬ ಅಧಿಕಾರವಾಗಲೀ, ಇಷ್ಟವಿಲ್ಲದವನಲ್ಲಿ ನಿಲ್ಲದೆ, ಇಷ್ಟವಿದ್ದೆಡೆಗೆ ಹೋಗುವ ಅಧಿಕಾರವಾಗಲೀ ಇಲ್ಲ.

ನಿರಂಜನ:— ಸರಿ, ಸರಿ; ಹಾಗಾದರೆ, ವಿತಂತು ವಿವಾಹವಾಗಬಹುದೆಂಬುವ ಶಾಸ್ತ್ರಾಧಾರವೆಲ್ಲ ಸುಳ್ಳೋ?

ಸಭಾ:— ಸುಳ್ಳು-ನಿಜವೆಂಬುದನ್ನು ನಾನು ಹೇಳುವವಳಲ್ಲ. ಆದರೆ, ಎಂತಹ ವಿತಂತುಗಳಿಗೆ ವಿವಾಹವಾಗಬಹುದೆಂಬುದನ್ನು ವಿಚಾರದಿಂದಲೇ ತಿಳಿಯಬೇಕಾಗಿದೆ. ಆವ ಕನ್ಯೆಯು ದಾನವಾಗದೆ ಸ್ವೇಚ್ಛೆಯಿಂದ ವರನ

ನ್ನು ವರಿಸಿರುವಳೋ ಅಂಥವಳು ಅವನನ್ನು ಬಿಟ್ಟು, ಅಥವಾ ಅವರನು ಮೃತನಾದ ಅನಂತರ ಮತ್ತೊಬ್ಬನನ್ನು ವರಿಸಬಹುದು. ಶೂದ್ರಾಚಾರದಲ್ಲಿ ಇದನ್ನು ಚೆನ್ನಾಗಿ ತಿಳಿಯಬಹುದು. ಶೂದ್ರಾದಿಗಳಲ್ಲಿ "ಕೂಡುವಳಿ" ಎಂಬ ಪದ್ಧತಿಯುಂಟಷ್ಟೆ! ಆ ರೀತಿಯಾಗಿಯೇ ಇದಾಗುವುದು. ಅದು ಇಹಪರ ತತ್ವಜ್ಞರಾಗಿ ಆಸ್ತಿಕರೆನ್ನಿಸಿರುವ ನಮ್ಮ ಭಾರತೀಯರಿಗೆ ಆಸ್ಪಾಗಿ ಸುಖಕರವಾಗಲಾರದು. ಹಾಗೆ ಮಾಡುವುದರಿಂದ ನಮ್ಮ ದೇಶದ ಧರ್ಮಜಾಗ್ರತೆಯೇ ನಷ್ಟವಾಗಿ, ಹಲವುವಿಧ ಕಷ್ಟಕ್ಲೇಶಗಳುಂಟಾಗುವುವರಲ್ಲಿ ಅಡ್ಡಿಯಿಲ್ಲ.

ನಿರಂಜನ:— ಕಷ್ಟಕ್ಲೇಶಗಳೇಕೆ? ಅದರಿಂದ ದೇಶದ ಭದ್ರತೆ ಕೆಡುವುದು ಹೇಗೆ? ಆ ಪದ್ಧತಿಯನ್ನೇ ಇಟ್ಟುಕೊಂಡಿರುವ ದೇಶಗಳು ಅಭಿವೃದ್ಧಿಸ್ಥಿತಿಯಲ್ಲಿಲ್ಲವೋ?

ನಭಾ:— ಜನಸಮೃದ್ಧಿ ವಿಚಾರದಲ್ಲಿ ಇರಬಹುದು. ಆದರೆ, ಅದರಿಂದ ಐಹಿಕಾಪೇಕ್ಷೆಯು ದೊರೆತು, ಐಹಿಕ ಸುಖಸೌಖ್ಯಗಳು ಸೂರೆಯಾಗುವದೇ ಹೊರತು, ಪಾರಲೌಕಿಕವು ಕೈಗೂಡದು. ಹೇಗೆಂದರೆ, ಒಬ್ಬ ಸ್ತ್ರೀಯು ಒಬ್ಬ ಮನುಷ್ಯನನ್ನು ಮದುವೆಯಾಗಿರುವಳು; ಅವನು ಆ ಸ್ತ್ರೀಯ ದುರದೃಷ್ಟವಶಾತ್ ಮೃತನಾದರೆ, ಅವಳು ಮತ್ತೊಬ್ಬನನ್ನೂ, ಅವನೂ ಮೃತನಾದರೆ, ಇನ್ನೊಬ್ಬನನ್ನೂ ಅವನೂ ಸತ್ತರೆ, ಅಥವಾ ಬೇಡವಾದರೆ, ಬೇರೊಬ್ಬನನ್ನೂ ಹೀಗೆಯೇ ಹತ್ತಾರುಮಂದಿಗಳನ್ನು ವಿವಾಹವಾಗುವಳೆಂದು ನಂಬಿರಿ. ಹಾಗೆ ಹತ್ತಾರುಮಂದಿಯಲ್ಲಿಯೂ ಅವಳಿಗಿರುವುದು ಕ್ಷಣಿಕಪ್ರೇಮವಲ್ಲದೆ, ಸ್ಥಿರಪ್ರೇಮವಲ್ಲ. ಸ್ಥಿರಪ್ರೇಮವು ಮೃತ್ಯುವಿನೊಡನೆ ನಾಶವಾಗಬೇಕಲ್ಲದೆ ಬೇರೆಯಿಲ್ಲವೆಂಬುದನ್ನು ನೀವು ನಂಬಿರುವಿರಷ್ಟೆ! ಕ್ಷಣಿಕಪ್ರೇಮವು ಪರಮೇಶ್ವರನ ಪ್ರೀತಿಗೆ ಪಾತ್ರವಾದುದಲ್ಲ. ಪರಮಾತ್ಮನ ಪ್ರೀತಿಗೆ ಅಪಾತ್ರವಾಗುವುದರಿಂದ ಪರದಲ್ಲಿ ಸದ್ಗತಿಯಿಲ್ಲವೆ? ಇನ್ನು ಇಹವಿಚಾರವನ್ನು ತೆಗೆದುಕೊಳ್ಳುವ. ಸ್ತ್ರೀಯು ಹಾಗೆ ಸೇರುವ ಹತ್ತಾರುಮಂದಿ ಗಂಡಸರೂ ಆ ಸ್ತ್ರೀಯ ಗುಣ, ಕೃತ್ಯ, ಸ್ವಭಾವಗಳಿಗೆ ಸರಿಯಾಗಿಯೇ ಇರುವರೆಂಬ ನಂಬುಗೆಯಿಲ್ಲವಷ್ಟೆ? ಒಬ್ಬ ಬಡಹೆಂಗಸು ಒಬ್ಬ ಗಂಡಸನ್ನು ವಿವಾಹವಾಗಿರುವಳೆಂದು ಭಾವಿಸಿರಿ. ಅವನು ಮೃತ

ನಾದರೆ, ಆ ಹೆಂಗಸು ತನ್ನ ದಾರಿದ್ರ್ಯಾದಿ ದೋಷಗಳಿಂದ ಪೀಡಿತಳಾಗಿ, ಅನೇಕಾನೇಕ ಅಂತರಂಗಿಕ ರೋಗಪೀಡಿತನಾದ ಪುರುಷನನ್ನೇ ಪುನಃ ವಿವಾಹಮಾಡಿಕೊಳ್ಳಬೇಕಾದರೆ, ಏನು ಮಾಡಬಲ್ಲಳು? ಅನ್ಯಮಾರ್ಗವಿಲ್ಲದೆ, ಅವನನ್ನೇ ವರಿಸಿ, ಅವನಿಂದಲೇ ಮಕ್ಕಳನ್ನು ಪಡೆದರೆ, ಆ ಮಕ್ಕಳಿಂದ ದೇಶಕ್ಕೆ ಹಾನಿಯುಲ್ಲವೊ? ಈ ವಿಧವಾದ ಐಹಿಕ ಕಷ್ಟ, ಆ ವಿಧವಾದ ಪಾರಲೌಕಿಕ ಹಾನಿಯಿಂದ ತೊಂದರೆಪಡುತಿರುವ ಅನ್ಯದೇಶೀಯರನ್ನು ನೋಡಿ, ನಾವು ಬುದ್ಧಿ ಕಲಿಯಲು ಯತ್ನಿಸದೆ, ಅವರು ಪೂರ್ವದಲ್ಲಿ ಹಳ್ಳಕ್ಕೆಬಿದ್ದು ಈಗ ಕಷ್ಟಪಡುವುದನ್ನು ತಿಳಿದುತಿಳಿದೂ, ಈಗ ನಾವೂ ಹಳ್ಳಕ್ಕೆ ಬೀಳಲು ಪ್ರಯತ್ನಿಸುವುದು ನಾಗರಿಕತೆಯು ಸುಳಿವೆ ? ಅಮ್ಮ! ಅಣ್ಣ! ನೋಡಿ ಹೇಳಿರಿ, ಐರೋಪ್ಯರಲ್ಲಿ ಅನುದಿನವೂ ಎಷ್ಟುಮಂದಿ, ಗಂಡಂದಿರನ್ನು ಬಿಟ್ಟೋಡುವರು? ಎಷ್ಟುಮಂದಿ ಹೆಂಡಿರನ್ನು ಬಿಟ್ಟುಬಿಡುವರು? ಎಷ್ಟುಮಂದಿ ಅಂತರಂಗಿಕ ರೋಗಗಳಿಂದ ಪೀಡಿತರಾಗಿರುವರು?

ನಿರಂಜನ:— ನಭಾ, ಹಾಗಾದರೆ ಈಗ ಈ ಭರತಖಂಡದಲ್ಲಿ ವಿಧವಾವಿವಾಹ ಪದ್ಧತಿಯನ್ನು ತರುತಿರುವವರು ಹುಚ್ಚರೊ?

ನಭಾ:— ನಾನು ಹಾಗೆ ಹೇಳಲಾರೆನು; ಅದು ಅವರ ಇಚ್ಛೆ. ಮಾಡಿಕೊಳ್ಳುವವರ ಅಪೇಕ್ಷೆ. ಈ ಪದ್ಧತಿಯು ಸದ್ಯಕ್ಕೆ ಹಿತಕರವಾದುದಲ್ಲವೆಂದು ನಾನು ನಂಬಿರುವೆನು. ದೇಶದ ಅಭ್ಯುದಯವನ್ನೇ ಬಯಸುತ್ತಿರುವ ನಾವು ಒಂದು ಧ್ಯೇಯವನ್ನು ಮುಂದಿಟ್ಟೇ ಜನರನ್ನು ಎಚ್ಚರಿಸಬೇಕು. ಆ ಧ್ಯೇಯವು ಉಚ್ಚತರದುದಾಗಿರಬೇಕೇ ಹೊರತು, ಹೀನತರದುದಾಗಿದ್ದರೆ ಜನರ ಮಾನಸಿಕ ಉನ್ನತಿಯಾಗಲೀ ಪ್ರಯತ್ನದ ಸಾರ್ಥಕತೆಯಾಗಲೀ ಆಗಲಾರದು. ಹಾಗಿಲ್ಲದೆ ಇಂದು ವಿಧವಾವಿವಾಹವನ್ನು ಅನುಮೋದಿಸುವವರು ಇನ್ನು ಹತ್ತಾರು ವರ್ಷಗಳಲ್ಲಿಯೇ ಸಧವಾ ವಿವಾಹವನ್ನು ಕೂಡ ಅನುಮೋದಿಸಬಹುದು. ಇದರಿಂದ ಇಹಸುಖ ಪ್ರಾಪ್ತಿಯಿಲ್ಲದ ಸಧವೆಗೂ ವಿಧವೆಗೂ ತಾರತಮ್ಯವಿಲ್ಲದಂತಾಗುವದರಲ್ಲಿ ಸಂಶಯವಿಲ್ಲ. ಹಾಗಾಗುವದರಿಂದ "ಸೋಡು ಚೀಟಿ" (Divorce) ಪದ್ಧತಿಯೂ ಬರಬೇಕಾಗುವುದು. ಆಗ ಭರತವರ್ಷದ ಭಾರತೀಯರ ಸ್ಥಿತಿಗತಿಗಳೇನಾಗುವುದೆಂಬುದನ್ನೂ ಈಗ ಹೇಗಿರುವುದೆಂಬುದನ್ನೂ ಸ್ವಲ್ಪ

ವಿಚಾರಮಾಡಿ ಈಗಲೇ ಎಚ್ಚರಗೊಳ್ಳುವದು ಅಗತ್ಯ.

"ನಿಜ, ನಿಜ! ಹಾಗಾಗುವುದರಿಂದ ಭಾರತಭೂಮಿಯು ಭದ್ರತೆಯೇ ಹೋಗಿ ಕಷ್ಟಕ್ಲೇಶಗಳಿಗೆಡೆಯಾಗುವುದು." ಎಂಬ ವಾಕ್ಯವು ಆಕಾಶವಾಣಿಯಂತೆ ಕೇಳಿಸಿತು. ಎಲ್ಲರೂ ಆಶ್ಚರ್ಯದಿಂದ ನೋಡಿದರು. ಚಿದಾನಂದನು ಬಂದು ಮುಂದೆನಿಂತು ಮತ್ತೆ ಮತ್ತೆ ಆ ವಾಕ್ಯಗಳನ್ನೇ ಹೇಳುತ್ತಾ, ನಭೆಯ ತಲೆಯಮೇಲೆ ಕಯ್ಯಿರಿಸಿ "ನಭಾ! ಭಲೆ! ಭಲೆ!! ತಹಸೀಲದಾರನ ಮಗಳಾದುದು ಸಾರ್ಥಕವಾಯ್ತು." ಎಂದು ಹೇಳಿದನು.

ರಮಾಮಣಿ ಪತಿಯ ಮುಖವನ್ನು ನೋಡಿ, ಯಾವದೋ ಕೆಲಸಕ್ಕಾಗಿ ಎದ್ದು ಹೋಗಲನುವಾದಳು. ಅವಳ ಕೈಯನ್ನು ಚಿದಾನಂದನೇ ಹಿಡಿದು ಕುಳ್ಳಿರಿಸಿ, "ಈಗ ಹೋಗಕೂಡದು. ನಾನು ಅದನ್ನು ತೆಗೆದುಕೊಂಡೇ ಬಂದೆನು. ಕುಳಿತುಕೊ" ಎಂದು ಆಜ್ಞೆಕೊಟ್ಟು, ನಿರಂಜನನ ಕಡೆಗೆ ತಿರುಗಿ "ನಿರಂಜನ! ನೀನು ಆವಾಗ ಬಂದೆ? " ಎಂದನು.

ನಿರಂಜನ:-ಇಂದು ನಾಳೆ ಮಾತ್ರ ವಿರಾಮವಿದ್ದಿತು. ಆದುದರಿಂದ ಬಂದೆನು. ಬರುವೆನೆಂದು ತಿಳಿಸಲೂ ಆಗಲಿಲ್ಲ.

ರಮಾ:— ತಾವು ಮನೆಗೆ ಬಂದುದಾವಾಗ?

ಚಿದಾನಂದ:— ಹೇಗೆತಾನೇ ತಿಳಿವುದು? ಪುತ್ರ ಪುತ್ರಿಯರ ಸುಖಗೋಷ್ಠಿಯಲ್ಲಿರುವ ತಮಗೆ ನನ್ನ ಆಗಮನವು ತಿಳಿವುದೆ? ಹೇಗಾದರೂ ಆಗಲಿ; ವಿಶ್ವವಿದ್ಯಾಲಯದ ಬಿ. ಏ. ಪಟ್ಟಾಂಕಿತ ಮಹಾಶಯನೊಬ್ಬನೂ, ತಹಸಿಲ್‌ದಾರನ ಗೃಹರಾಜ್ಯಕ್ಕೆ ರಾಣಿಯಾದ ಪ್ರೌಢಾಂಗನೆಯೊಬ್ಬಳೂ ಸಾಧಾರಣ ಬಾಲೆಯ ವಾಕ್ಶಕ್ತಿಗೆ ಸೋತಿರಿ! ಇನ್ನೇನು?

ರಮಾಮಣಿ ನಕ್ಕು ಹೇಳಿದಳು:— "ಎಷ್ಟೇ ಆದರೂ ತಹಸೀಲ್‌ದಾರರ ಮಗಳು. ಅದರಲ್ಲಿಯೂ ವಿದ್ಯಾವತಿ!"

ಚಿದಾನಂದ:— ಅಹುದು; ತಹಸೀಲ್‌ದಾರರ ಮಗನಿಗಿಲ್ಲದ ಯೋಗ್ಯತೆ ಮಗಳಿಗಲ್ಲವೆ? ಆ ನನ್ನ ಶಕ್ತಿಯೆಲ್ಲವೂ ಅವಳೊಬ್ಬಳನ್ನು ಮಾತ್ರ ಸೇರಿರುವುದೇನೊ ?

ನಭಾ:— ಗೆಲುವೇನು? ಸೋಲೇನು? ಅಪ್ಪಾ! ಇವರು ಏನೇನೋ ಪ್ರಶ್ನೆಗಳನ್ನು ಕೇಳಿದುದಕ್ಕೆ ನಾನು ನನಗೆ ತಿಳಿದ ಉತ್ತರವನ್ನು ಹೇಳಿ

ದೆನು; ಆಷ್ಟೆ! ಅದರ ನ್ಯಾಯಾನ್ಯಾಯ ವಿಮರ್ಶೆಯನ್ನು ನಿನಗೇ ವಹಿಸಿರುವೆನು.

ಚಿದಾನಂದ:— ನಿಜ! ನೀನು ಹೇಳಿದುದೇ ನ್ಯಾಯ.

ರಮಾ:— ನಿಜ; ಆದರೆ, ಕಾಲಸ್ಥಿತಿಯು ಒಂದೇಸಮನಾಗಿರದಷ್ಟೆ! ಈಗ ಇರುವುದು ಹೇಗೆ ತಿರುಗುವುದೊ?

ನಭಾ:— ಹೇಗಾದರೂ ತಿರುಗಲಿ! ನನ್ನ ಸ್ಥಿತಿ ಎಷ್ಟು ಕೆಟ್ಟರೂ ಶಂಕರಪೇಟೆಯಲ್ಲಿದ್ದಷ್ಟು ಕೆಡದು. ಆಸ್ಥಿತಿಯನ್ನು ಒಮ್ಮೆ ಸ್ಮರಿಸಿ ಕೊಂಡಮಾತ್ರದಿಂದಲೇ ಎಂತಹ ಕಷ್ಟವಾದರೂ ಸುಖವಾಗದಿರದು. ಇಂತಹ ಕಷ್ಟ ಸುಖಗಳಿಗೆ ಹೆದರಿ,ಅಥವಾ ಮೆಚ್ಚಿ ಧರ್ಮಕ್ಕೆ ಲೋಪಬರುವಂತೆ ಮಾಡಿಕೊಳ್ಳುವುದೇ ನೀತಿಯೊ?

ಚಿದಾ:— ಎಂದಿಗೂ ಕೂಡದು. ಸಾಧಿಸು; ಈ ಧರ್ಮಮಾರ್ಗವನ್ನೇ ಅನುಸರಿಸಿ ನಡೆ. ನಿನಗೆ ಸುಖವಾಗುವುದು. ನಿನ್ನಲ್ಲಿರುವ ವಿದ್ಯಾ, ಜ್ಞಾನ, ಬಲ, ಧೈರ್ಯ, ದೃಢಪ್ರಯತ್ನವೇ ಮೊದಲಾದ ಗುಣಗಳ ದಿವ್ಯ ಜ್ಯೋತಿಗಳು ನಿನ್ನ ಭವಿಷ್ಯಜ್ಜೀವನ ಮಾರ್ಗಕ್ಕೆ ಸಹಕಾರಿಗಳಾಗಿದ್ದು, ನಿರ್ಮಲ ಪ್ರಕಾಶವನ್ನು ಕೊಡುವಂತಿರಲಿ!

ನಭಾ:—ಆತುರದಿಂದ "ನಿನ್ನ ಆಶೀರ್ವಾದಬಲದಿಂದಲ್ಲದೆ ನನಗದು ಸಾಧ್ಯವೆ? ಅಪ್ಪಾ?—"

ಚಿದಾ:—ನಭಾ ! ಸಕಲವೂ ಸಾಧ್ಯವಾಗುವುದು. ನಿನ್ನಂತಹ ಸುಬ್ರಹ್ಮಚಾರಿಣಿಯರಾದ ಸ್ತ್ರೀಯರಿಂದಲೇ ಈ ಭಾರತವರ್ಷವು ಚಿರಕೀರ್ತಿಯನ್ನು ಪಡೆದು ಪ್ರಕಾಶಿಸಬೇಕಾಗಿದೆ. ಇಹ ಸೌಖ್ಯವನ್ನು ತೃಣವೆಂದು ನಂಬಿ ತಳ್ಳಿಬಿಡು; ಸ್ವಾಮಿಯಮೇಲಿನ ದೃಢ—ನಿರ್ಮಲಪ್ರೇಮದಿಂದ ಕಾರ್ಯವನ್ನು ನಡೆಯಿಸು. ನಿನ್ನ ಸಂಕಲ್ಪಕ್ಕೆಂದಿಗೂ ಹಾನಿಬಾರದಿರಲಿ ! ನಿನ್ನ ಮಾರ್ಗದಲ್ಲಿ ಸ್ವಪ್ರಯಾಸದಿಂದ ಬೆಳಗುವಜ್ಞಾನ, ವಿದ್ಯಾ, ಬಲ, ಧೈರ್ಯ, ಸ್ಥೈರ್ಯ, ಸಾಹಸಾದಿಗಳು ಸಾಕಾಗುವಷ್ಟು ಸಿದ್ಧವಾಗಿರಲಿ!

ನಭೆಯು ಆನಂದಪರವಶಳಾದಳು. ಅವಳ ಹೃದಯಾಕಾಶದಲ್ಲಿ ಒಮ್ಮಿಂದೊಮ್ಮೆಯೇ ಸಾವಿರಾರು ಚಂದ್ರರು ಉದಯಿಸಿದ್ದರೂ ಆಗದ ಒಂದುವಿಧವಾದ ಅದ್ಭುತ, ಅಪೂರ್ವಪ್ರಕಾಶವು ಆವಿರ್ಭೂತವಾದಂತಾ

ಯಿತು. ತನ್ಮೂಲಕ ವರ್ಷಿಸಲ್ಪಟ್ಟ ಸುಧಾರಸವು ನೇತ್ರದ್ವಾರಾ, ವಾಂ ಧಾರಾಕಾರವಾಗಿ ಹರಿಯಿತು. ಸಭೆಯು ಆ ಸ್ಥಿತಿಯಲ್ಲಿ ಮಾತನಾಡ ಲಾರದಿದ್ದಳು.

ರಮಾಮಣಿಯು ಆಶ್ಚರ್ಯದಿಂದ “ ಸಭಾ? ಹೀಗೇಕೆ, ಅಳುವೆ? ” ಎಂದಳು.

ನಿರಂಜನನು “ ಸಭಾ ! ಇದೇನು? ನಡುಗುತಿರುವೆ ? ” ಎಂದನು.

ಚಿದಾನಂದನು ಸಭೆಯ ಹಸ್ತವನ್ನು ಹಿಡಿದು “ ಸಭಾ ! ಇಷ್ಟಕ್ಕೇ ನಿನಗೆ ಪರಮಾನಂದವಾದರೆ, ಭಾರತೋದ್ಧಾರಕ್ಕೆ ಬೇಕಾಗುವ ನಿನ್ನಂತಹ ಸ್ತ್ರೀಯರನ್ನು ಹೊಂದಬಹುದಾದ ಅನಾಥಾಲಯಕ್ಕೆ ನೀನು ಅಧಿಕಾರಿಣಿ ಯಾದರೋ ? ” ಎಂದನು.

ಸಭೆ, ಕಂಪಿತಸ್ವರದಿಂದ ಹೇಳಿದಳು:—“ ಅಪ್ಪ ? ನಾನಂತಹ ಪುಣ್ಯ ವತಿಯೇ? ನನಗಷ್ಟರ ಪ್ರಭಾವ-(ಶಕ್ತಿ) ವಾದರೂ ಇದೆಯೇ?

ಚಿದಾನಂದ:—ನಿಸ್ಸಂಶಯವಾಗಿಯೂ ಅಹುದು. ಧರ್ಮಪ್ರತಿಪಾ ದನೆಗೆ ಆರೋಗದೃಢಕಾಯವು ಬೇಕಷ್ಟೆ ? ನಿನಗೆ ಅದಿರಲೆಂಬುದೇ ಭಗ ವಂತನಲ್ಲಿ ನನ್ನ ಮುಖ್ಯ ಪ್ರಾರ್ಥನೆ.

ಈವೇಳೆಗೆ ಸರಿಯಾಗಿ ರಮಾನಂದ, ಭಗವಾನಂದರು ಬಂದು ಸಭೆ ಯನ್ನು ಕುರಿತು “ ಸಭಾ ! ಉಪಾಧ್ಯಾಯರು ಬಂದಿರುವರು. ಪಾಠಕ್ಕೆ ಬರುವುದಿಲ್ಲವೆ ? ” ಎಂದರು.

ಸಭೆಯು ಅವರಿಬ್ಬರ ಕಯ್ಗಳನ್ನೂ ಹಿಡಿದು “ ಅಣ್ಣಾ ! ನಡೆಯಿರಿ’ ಎಂದು ಹೊರಟುಹೋದಳು.

ಚಿದಾನಂದನು ನಿರಂಜನನ ಕೈಹಿಡಿದು ವಾಯುಸೇವನೆಗೆ ಕರೆದೊ ಯ್ದನು. ರಮಾಮಣಿಯೂ “ ಇದೇ ಸದ್ವಿದ್ಯೆಯ ಮಹಾತ್ಮೆ ! ಹೊಟ್ಟೆ ಹೊರೆಯಲು ಹೇಳುವ ವಿದ್ಯೆಯಲ್ಲ ಇದನ್ನು ಹೇಳುವರೇ ? ” ಎನ್ನುತ್ತ ಮೇಜಿನಮೇಲಿದ್ದ “ ಭಕ್ತವಿಜಯ ” ಎಂಬ ಗ್ರಂಥವನ್ನು ಓದಲುಪಕ್ರ ಮಿಸಿದಳು. ಈ ರೀತಿ ಆದಿನ ಎಲ್ಲರೂ ಆನಂದಲಹರಿಯಲ್ಲಿ ಮುಳುಗಿ ತೇಲಾಡುತಿದ್ದರು.

---

## ನವಮ ಪರಿಚ್ಛೇದ.

### ( ತತ್ವ. )

ರಾತ್ರಿ ಸುಮಾರು ಹತ್ತುಘಂಟೆ; ಸರ್ವಶಕ್ತನಾದ ಭಗವಂತನು ತನ್ನ ಸಂಕಲ್ಪಾನುಸಾರವಾಗಿ ಸಕಲರಿಗೂ ಪ್ರೇರೇಪಿಸುವಂತೆ ನಿದ್ರಾಂಗನೆಗೂ ಕಾರ್ಯತತ್ಪರಳಾಗಿರಲು ಪ್ರೇರಿಸಿರುವನು. ನಿದ್ರಾಂಗನೆಯು ಆಗಮನವನ್ನೇ ಬಯಸುವ ಲೋಕವು ಕೇವಲ ಕನಿಕರವಾದುದು. ನಿದ್ರಾಂಗನೆಗೆ ಕಾರ್ಯತತ್ಪರರನ್ನು ನೋಡಿದರಾಗುವಷ್ಟು ಸಂತೋಷವು ಮತ್ತಾರಿಂದಲೂ ಸಾಧ್ಯವಲ್ಲವು. ಕೆಲಸಮಾಡದ ಸೋಮಾರಿಯು ಎಂತಹ ದಿವ್ಯ ಭವನದಲ್ಲಿ, ಎಷ್ಟು ಅಲಂಕಾರವಾದ ಮನೋಹರವಾದ—ಕಿರುಮನೆಯಲ್ಲಿ. ಅತ್ಯುತ್ತಮವಾದ ಹಂಸತೂಲಿಕಾ ಮೃದುಶಯ್ಯೆಯ ಮೇಲೆ, ಸುತ್ತಲೂ ಜಗದಾಕರ್ಷಕವಸ್ತುಗಳನ್ನಿಟ್ಟುಕೊಂಡು ಆಲಿಂಗನೆಯ ಸುಖಾಗಮನವನ್ನು ಬಯಸಿ, ಸವಿಮಾತುಗಳಾಡಿ, ಆದರದಿಂದ ಕರೆದರೂ, ಆಕೆಯು ದೂರದಲ್ಲಿಯೇ ನಿಂತು. ಅವನ ಪ್ರಾಣವನ್ನು ತಿನ್ನುವಳು. ಕಾರ್ಯತತ್ಪರನಾದವನು ಅಡವಿಯಲ್ಲಿ, ಬಿಸಿಲಿನಲ್ಲಿಯೊ, ಮಳೆಯಲ್ಲಿಯೊ, ಕಲ್ಲಿನಮೇಲೆಯೊ, ಮುಳ್ಳಿನಮೇಲೆಯೊ, ಮಲಗಿಕರೆಯದಿದ್ದರೂ ಅವನೊಡನೆ ಸುಖಿಸಿ,ಆನಂದವನ್ನೂ ಆರೋಗ್ಯವನ್ನೂ ಕೊಡುವಳು. ಸರ್ವಶಕ್ತನೂ ಸಮಸ್ತ ಕಲ್ಯಾಣಗುಣಪರಿಪೂರ್ಣನೂ ಆದ ಪರಮಾತ್ಮನನ್ನೇ ಈ ಲೋಕದವರು ಸಮಯಾನುಸಾರವಾಗಿ ನಿಂದಿಸುವರು. ಅಂತಹುದರಲ್ಲಿ ನಿದ್ರಾಂಗನೆಯ ಅವಸ್ಥೆಯನ್ನು ಕೇಳಬೇಕೆ? ಈಕೆಯ ಪ್ರಸಾರವನ್ನೇ ಕಾಯುವಚೋರರೇ ಮೊದಲಾದ ನೀಚರು ತಮ್ಮೆಡೆಗಾಕೆಯು ಬಾರದಾಗ ದೂಷಿಸುತಲೂ, ತಾವು ಅಪೇಕ್ಷಿಸಿದಾಗ ಅಪೇಕ್ಷಿಸಿದವರಿಗೆ ವಶಳಾಗಿದ್ದರೆ ಭೂಷಿಸುತ್ತಲೂ, ಕಾರ್ಯಸಾಧನಾತತ್ಪರರಾಗಿರುವರು. ಪ್ರಪಂಚದ ಸ್ಥಿತಿಯೇ ಹೀಗಲ್ಲವೆ?

ನಿದ್ರಾಂಗನೆಯು ಈಗಾಗಲೇ ಪ್ರಪಂಚದಲ್ಲಿಯ ಸಜ್ಜೀವರಾಶಿಗೆ ಸುಖ, ಸಂತೋಷ, ಆರೋಗ್ಯಾದಿಗಳನ್ನು ಕೊಡಲು ಕಾರ್ಯವನ್ನು

ಕೈಕೊಂಡಿರುವಳು. ಸರ್ವರನ್ನೂ ತನ್ನ ಮೋಹಮಯಶಕ್ತಿಯಿಂದ ಮರುಳುಮಾಡಿರುವಳು. ಆದರೂ ಅವಳು ಇನ್ನೂ ರಮಾನಂದ, ಭಗವಾನಂದ, ನಭೆ ಇವರೆಡೆಗೆ ಬರಲು ಶಕ್ತಳಾಗಿರಲಿಲ್ಲ. ಈ ಮೂವರೂ ತಮ್ಮ ನಿಯಮಿತಪಾಠವನ್ನು ತೀರಿಸಿಕೊಂಡು ಕುಳಿತು ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಅವುಗಳಲ್ಲಿ ಕೆಲವನ್ನು ಮಾತ್ರ ನಮ್ಮ ವಾಚಕರ ಅವಗಾಹನೆಗೆ ಕೊಡುವೆವು.

ರಮಾನಂದ:—ಅಕ್ಕ ! ನೀನು ಇಲ್ಲಿಗೆ ಬಂದು ಇನ್ನೂ ಬಹುದಿನಗಳಾಗಿಲ್ಲ; ಈಗಾಗಲೇ ನಮಗಿಂತ ಹೆಚ್ಚಾಗಿ ಪಾಠಗಳನ್ನು ಓದಿರುವಿಯಲ್ಲ ! ಇದೇನು ಆಶ್ಚರ್ಯವು? ನೀನು ನಮ್ಮೊಡನೆ ಓದುತ್ತಿದ್ದರೂ ನಿನ್ನಷ್ಟು ಜಾಗ್ರತೆ ನಮಗೇಕೆ ಬರಬಾರದು ?

ನಭಾ:—ಪುರುಷರಿಗಿಂತ ಸ್ತ್ರೀಯರು ಕುಶಲಬುದ್ಧಿಯುಳ್ಳವರೆಂದಾಡುವರಷ್ಟೆ !

ಭಗ:—ನನಗೂ ಹಾಗೆಯೇ ತೋರುವುದು. ಇಲ್ಲವಾದರೆ, ಸಾಧ್ಯವೆ? ಅದೂ ಅಲ್ಲದೆ ನೀನು ಆವಾಗಲೂ ಓದುತಲೇ ಇರುತ್ತೀಯೆ.

ನಭಾ:—ಅದಕ್ಕೂ ಸ್ತ್ರೀಯರು ಹಠವಾದಿಗಳೂ, ದೃಢಸಂಕಲ್ಪರೂ ಆದವರೆನ್ನಬಹುದು. ಅವರು ತಮ್ಮ ಹಠಸಾಧನೆಗಾಗಿ ಪ್ರಾಣವನ್ನಾದರೂ ತೆರಬಲ್ಲರು; ಕಾರ್ಯಸಿದ್ಧಿಗೆ ಮೊದಲು, ಅವರ ಮನಸ್ಸು ಇತರ ವಿಷಯಗಳನ್ನು ಗಮನಿಸದು. ಪುರುಷರಲ್ಲಿ ಅಂತಹ ಹಠಸಾಧನೆಯ ಶಕ್ತಿಯು ಅಷ್ಟು ಸ್ಥಿರವಾಗಿ ಇರಲಾರದು. ಸ್ತ್ರೀಚಿತ್ತದಲ್ಲಿ ಉಂಟಾಗಬಹುದಾದ ಕಾಠಿಣ್ಯ—ಸ್ಥೈರ್ಯಾದಿಗಳು ಪುರುಷರ ಹೃದಯದಲ್ಲಿ ಒಮ್ಮೊಂದೊಮ್ಮೆಯೇ ಉಂಟಾಗಲಾರದು. ಏಕೆಂದರೆ, ಪುರುಷರ ಹೃದಯದಲ್ಲಿ ಬಹುವಾಗಿ ಕುಲಗೌರವ, ಸ್ವಾಭಿಮಾನ, ಅಹಂಕಾರ ಕ್ರೋಧಾದಿಗಳೇ ತುಂಬಿರುವುವು; ಅವುಗಳಿಗೆ ಅಧೀನರಾದವರು ಹೇಗೆ ತಾನೆ ವಿದ್ಯಾಭ್ಯಾಸಮಾಡಬಲ್ಲರು? ವಿದ್ಯಾರ್ಥಿಗಳು ಲಕ್ಷಾಧಿಕಾರಿಗಳಾಗಿದ್ದರೂ, ವಿದ್ಯಾಭಿಮಾನಿದೇವತೆಗೆ ನಮ್ರತೆ ತೋರಿದಲ್ಲದೆ, ಪ್ರಸನ್ನಳಾಗಳು.

ಭಗ:— ಅಹುದು; ನಿನ್ನ ಮಾತು ನಿಜ. ಇದೇ ಊರಿನಲ್ಲಿಯೇ ನೋಡು. ನಮ್ಮ ಶಾಲೆಯಲ್ಲಿ ನಮ್ಮೊಡನೆಯೇ ಓದುತಿರುವ ಇಬ್ಬರು

ದೊಡ್ಡ ಮನುಷ್ಯರ ಮಕ್ಕಳು ಅಲಂಕಾರ ವಿದ್ಯಾರ್ಥಿಗಳಾಗಿರುವರಲ್ಲದೆ, ಕ್ರಮವಾಗಿ ಓದುವುದೇ ಇಲ್ಲ. ಓದದಿದ್ದರೂ ಇರಲಿ, ಒಬ್ಬರಿಗೊಬ್ಬರಿಗೆ ಐಕಮತ್ಯವು ಕೂಡ ಇಲ್ಲ.

ನಭಾ:-ಹಾಗಾಗುವುದು ಅವರ ಸ್ವಭಾವ ಸಹಜಗುಣವೇ ಸರಿ. ಅದ ರಿಂದಲೇ ಸಿರಿಗೂ ಸರಸ್ವತಿಗೂ ಬಹಳ ದೂರವೆಂದು ಬಲ್ಲವರಾಡುವರು.

ಭಗ:— ಆ ವಿಷಯುವಿರಲಿ, ಅಕ್ಕ! ಕೆಲವರು ಸ್ತ್ರೀವಿದ್ಯಾಭ್ಯಾಸ ವನ್ನೇ ನಿಷೇಧಿಸುವರಲ್ಲ, ಅದೇಕೆ?

ನಭಾ:— ಕಾರಣವು ಅನೇಕವಾಗಿರುವಂತೆ ತಿಳಿದಿದೆ. ಮುಖ್ಯ ವಾಗಿ, ಸ್ತ್ರೀಯರು ಕುಶಾಗ್ರಬುದ್ಧಿಯುಳ್ಳವರು. ವಿಷಯಗಳನ್ನು ಒಮ್ಮೆ ನೋಡಿದಮಾತ್ರದಿಂದಲೇ ತಿಳಿಯುವ ಸಾಮರ್ಥ್ಯವು ಅವರಲ್ಲಿದೆ. ಅವರು ವಿದ್ಯಾವತಿಯರಾದರೆ ವಿದ್ಯೆಯಿಂದ ಅಹಂಕೃತರಾದರೂ ಆಗಬಹುದು. ಸುಶಿಕ್ಷೆಯ ಸದ್ವಿದ್ಯಾಭ್ಯಾಸದಿಂದ ವಿವೇಕಿಗಳಾದರೂ ಆಗಬಹುದು. ಸ್ತ್ರೀಯರಿಗೆ ವಿದ್ಯೆಯೇ ಬೇಡವೆಂದರೇನರ್ಥ? 'ವಿದ್ಯೆ' ಎಂಬುದಕ್ಕೆ ಮನು ಷ್ಯನು ಏನು ಅರ್ಥಮಾಡುವನೋ, ಅದಕ್ಕನುಸಾರವಾಗಿಯೇ 'ಬೇಕು' 'ಬೇಡ' ಎಂಬ ಉತ್ತರವು ಹೊರಡುವುದು. ವಿದ್ಯೆಯೆಂದರೆ, ಪ್ರಪಂಚದ ತಿಳುವಳಿಕೆಯನ್ನು ತಿಳಿವುದಲ್ಲ; ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆ ಯನ್ನು ಹೊಂದಿ ಬಿರುದಾವಳಿಯ ಅಕ್ಷರಗಳನ್ನು ಹೆಸರಿನ ಮುಂದಿಟ್ಟು ಕೊಂಡು ಮೆರೆವುದಲ್ಲ; ಸಭಾಮುಖದಲ್ಲಿ ನಿಂತು ಸಭಿಕರು ಮರುಳಾಗು ವಂತೆ ಮಾತನಾಡಿ ಅವರಿಂದ ಪಂಡಿತರೆನಿಸಿಕೊಳ್ಳುವುದಾಗಲೀ, ಗ್ರಂಥರ ಚನಾಕಾರ್ಯದಿಂದ ದೊಡ್ಡ ದೊಡ್ಡ ಬಹುಮಾನಪತ್ರಿಕೆಗಳನ್ನು ಪಡೆದು, ಅವನ್ನು ಪ್ರಕಟಿಸಿ ದೊಡ್ಡವನೆಂದೆನಿಸಿಕೊಳ್ಳುವುದಾಗಲೀ, ವಿದ್ಯೆಯ ಶಕ್ತಿ ಯಲ್ಲ. ವಿದ್ಯೆಯೆಂದರೆ ಸರಿಯಾದ ತಿಳಿವಳಿಕೆ. 'ಇದು ಸರಿ; ಇದು ತಪ್ಪು; ಈ ಕೆಲಸವನ್ನು ಮಾಡಬಹುದು; ಈ ಕೆಲಸವನ್ನು ಮಾಡಬಾರದು; ಇದು ಸತ್ಯ; ಇದು ಅಸತ್ಯ;' ಎಂಬಿವೇ ಮೊದಲಾದುವನ್ನು ವಿವೇಚನಾಶಕ್ತಿಯ ಮೂಲಕ ತಿಳಿವುದೇ 'ವಿದ್ಯೆ.' ಇಂತಹ ಶಕ್ತಿ, ಪ್ರಪಂಚದಲ್ಲಿರುವ ಆವ ಪ್ರಾಣಿಗೆತಾನೇ ಬೇಡ? ಈಗಳಿನ ಸ್ತ್ರೀವಿದ್ಯಾಭ್ಯಾಸವು ಸ್ತ್ರೀಯರಿಗೆ ಬೇಕಾ ಗಿಲ್ಲವೆಂದೆನ್ನಬಹುದು. ವಿದ್ಯೆಯೆಂದರೆ, ಪರೀಕ್ಷೆಗಳಲ್ಲಿ ಹೇಗಾದರೂ

ತೇರ್ಗಡೆಹೊಂದಿ ಪದವಿಯನ್ನು ಪಡೆವುದಾಗಿ ಪರಿಣಮಿಸಿರುವುದು. ಮೊನ್ನೆ ಅಪ್ಪನು ವರ್ತಮಾನಪತ್ರಿಕೆಯನ್ನು ಓದುತ್ತಿದ್ದನು. ಅದರಲ್ಲಿದ್ದ ಒಂದು ಕೌತುಕವನ್ನು ಹೇಳಿದನು. ಅದು ಬಹು ಸ್ವಾರಸ್ಯವಾಗಿದೆ. ಅದನ್ನು ನಿಮಗೆ ನಾನು ಹೇಳುವೆನು. "ಈಗ ಒಂದು ತಿಂಗಳಿಗೆ ಮುಂದೆ ಒಬ್ಬ ವಿದೇಶೀಯ ಅಧಿಕಾರಿಯು (ಇನಸ್ಪೆಕ್ಟರನು) ಒಂದು ಪಾಠಶಾಲೆಗೆ ಹೋಗಿದ್ದನಂತೆ! ಅವನು ಪರೀಕ್ಷೆಯನ್ನು ಮುಗಿಯಿಸಿದ ಬಳಿಕ ಆ ತರಗತಿಯಲ್ಲಿದ್ದ (150) ನೂರಅಯ್ವತ್ತು ಹುಡುಗರನ್ನೂ "ನೀನು ಓದಿ ಮುಗಿಸಿದ ಬಳಿಕ ಏನುಮಾಡುವೆ?" ಎಂದು ಕೇಳಿದನಂತೆ. ಅದಕ್ಕೆ "ನಾನು ಮಾಮಲೆದಾರನಾಗುವೆನು." ಎಂದು ಕೆಲವರೂ, "ನಾನು ಡಾಕ್ಟರನಾಗುವೆನು" ಎಂದು ಮತ್ತೆ ಕೆಲವರೂ, "ಡಿಪ್ಯುಟಿಕಮೀಷನರ್ ಆಗುವೆನು." ಎಂದು ಕೆಲವರೂ ಹೇಳಿದರಂತೆ. ಒಬ್ಬನಾದರೂ "ನಾನು ಸ್ವತಂತ್ರ ಜೀವನಕ್ಕೆ ಪ್ರಯತ್ನಿಸುವೆನು; ಅಥವಾ ದೇಶಹಿತೈಷಿಯಾಗಿ ಕಾರ್ಯಮಾಡುವೆನು." ಎಂದು ಹೇಳಲಿಲ್ಲವಂತೆ! ಇಂತಹ ವಿದ್ಯಾರ್ಥಿಗಳ ವಿದ್ಯೆಯಿಂದ ಏನುಫಲ? ವಿದ್ಯಾಭ್ಯಾಸಕ್ಕೆ ಆರಂಭಮಾಡುವಾಗಲೇ ಭಾವೀಪರಿಣಾಮವನ್ನು ಆಲೋಚಿಸಿ ತೀರ್ಮಾನಮಾಡಿಯೇ ಆರಂಭಮಾಡಬೇಕು. ಉದ್ದೇಶವಿಲ್ಲದೆ ಆರಂಭಿಸಿದ ಕಾರ್ಯವು ಹೇಗೆ ನಿರರ್ಥಕವೋ, ಇದೂ ಹಾಗೆಯೇ ಸರಿ ಇನ್ನು ಸ್ತ್ರೀವಿದ್ಯಾಭ್ಯಾಸವೂ ಹಾಗೆಯೇ! ಸ್ತ್ರೀವಿದ್ಯೆಯ ಅಭ್ಯಾಸಕ್ಕೂ ಪುರುಷರ ವಿದ್ಯೆಯ ಅಭ್ಯಾಸಕ್ಕೂ ತಾರತಮ್ಯವಿಲ್ಲದಿರುವುದು ಸಲ್ಲದುದೇ! ಇನ್ನು ಎಲ್ಲರಿಗೂ ಸರಿಹೋಗುವಂತೆಂದರೆ, ಪ್ರಪಂಚದಲ್ಲಿರುವ ಪ್ರತಿಯೊಬ್ಬನೂ ವಿದ್ಯಾರ್ಥಿಯೇ! ಪ್ರತಿಯೊಬ್ಬನೂ ಒಂದಲ್ಲ-ಒಂದನ್ನು ಕಲಿಯಲೇಬೇಕಾಗಿರುವುದು. ಆವಿಷಯನ್ನು ಬಿಟ್ಟು ಪ್ರಕೃತ ಸ್ತ್ರೀವಿದ್ಯಾಭ್ಯಾಸ ವಿಚಾರವನ್ನು ಮಾಡುವುದಾದರೂ, ಒಂದೆರಡು ಘಂಟೆಗಳು ಕಳೆಯದಿರವು.

ಭಗವಾನಂದ–ರಮಾನಂದರು, ಹುಚ್ಚರಂತೆ ಕೇಳುತ್ತ ಕುಳಿತರು. ಸಭೆಯು ಅವರ ಸ್ಥಿತಿಯನ್ನು ತಿಳಿದು "ಈಗ ಮಲಗಿಕೊಳ್ಳಿರಿ. ನಾನು ಉಳಿದ ವಿಷಯವನ್ನು ಪ್ರಾತಃಕಾಲ ಹೇಳುವೆನು." ಎಂದಳು. ಸೋದರರು ಸಮ್ಮತಿಸಲಿಲ್ಲ. ಅವರು "ಈಗಲೇ ಹೇಳು. ಈ ವಿಷಯವನ್ನು

ಕೇಳಲು ನಮಗೆ ನಿದ್ದೆ ಬಾರದು." ಎಂದರು ಸಭೆಯು ಪುನಃ ಹೇಳಲು ಉಪಕ್ರಮಿಸಿದಳು.

"ಭಗವಂತನು ಸ್ತ್ರೀಯರಿಗೂ ಪುರುಷರಿಗೂ ರೂಪಾದಿಗಳಲ್ಲಿ ತಾರತಮ್ಯವನ್ನು ಕಲ್ಪಿಸಿರುವಂತೆಯೇ ಗುಣ, ಸ್ವಭಾವ, ಕೃತ್ಯಾದಿಗಳಲ್ಲಿಯೂ ತಾರತಮ್ಯವಿದ್ದೇ ಇರಬೇಕು. ಪುರುಷನು ಸಂಸಾರಕಾರ್ಯನಿರ್ವಾಹಕ್ಕೆ ದ್ರವ್ಯಾರ್ಜನೆಯಲ್ಲಿ ನಿರತನಾದರೆ, ಸ್ತ್ರೀಯು ಆ ದ್ರವ್ಯವನ್ನು ಸರಿಯಾದ ಮಾರ್ಗದಲ್ಲಿ ವ್ಯಯಮಾಡಿ ಗೃಹವನ್ನು ಸ್ವರ್ಗವನ್ನಾಗಿ ಮಾಡಲು ಸಮರ್ಥಳಾಗಬೇಕು. ಸ್ತ್ರೀಯು ವ್ಯಯಮಾಡಿದುದನ್ನು ಪುರುಷನು ಸಹನೆಯಿಂದ ಅನುಭವಿಸಿ, ತಾನೂ ತನ್ನನ್ನು ಸೇರಿದವರೂ ಸುಖವಾಗಿರುವಂತೆ ಮಾಡಬೇಕು. ಪುರುಷನು ಅತಿಥಿ ಅಭ್ಯಾಗತರನ್ನು ಆದರದಿಂದ ಬರಮಾಡಿದರೆ, ಅವರಿಗೆ ಆದರೋಪಚಾರಗಳಿಗೆ ಅಣಿಮಾಡಲು ಸಾಧ್ವಿಯು ಕಲಿತಿರಬೇಕು. ಹೀಗೆಯೇ ಸತಿ ಪತಿಯರಿಗೆ ಪರಸ್ಪರ ಸಹಾಯವಿದ್ದೇ ಇರಬೇಕು. ಅವರಿಬ್ಬರೂ ದೇಹದಿಂದ ಒಬ್ಬರೇ ಇದ್ದರಂತೋ, ಅಂತೆಯೇ ಇದ್ದು ಕಾರ್ಯವನ್ನು ನಿರ್ವಹಿಸಬೇಕು. ಸತಿಯ ಗುಣಾನುಸಾರವಾಗಿ ಪತಿಯೂ, ಪತಿಯ ಗುಣಾನುಸಾರವಾಗಿ ಸತಿಯೂ ಇಲ್ಲದೆಹೋದರೆ ಸಂಸಾರವು ಸುಲಲಿತವಾಗಿ ಸಾಗದು. ಉದಾಹರಣೆಗೆ ಒಂದು ಸಂಸಾರವನ್ನು ತೆಗೆದುಕೊಳ್ಳುವ. ಪತಿಯು ಸುಳ್ಳು ಹೇಳುವವನಾಗಿ, ಅದರಿಂದಲೇ ಜೀವನವನ್ನು ಕಳೆವನೆಂದು ಭಾವಿಸುವ. ಅವನ ಸಂಸಾರವು ಸುಖದಾಯಕವಾಗಿರಬೇಕಾದರೆ, ಅವನ ಹೆಂಡತಿಯು ಅವನ ಗುಣಗಳನ್ನು ತಿದ್ದಬಲ್ಲವಳಾಗಿ, ಇಲ್ಲವೇ ಅವನ ಗುಣಗಳಿಗೆ ಅನುಸಾರವಾಗಿ ನಡೆಯುದಿದ್ದರೆ ತೀರದು. ಹಾಗೆಯೇ ಪ್ರತಿಯೊಂದನ್ನೂ ತಿಳಿಯಬೇಕು. ಮತ್ತೆ ಈಗಿನ ವಿದ್ಯಾಭ್ಯಾಸದ ದುರ್ಗುಣಗಳನ್ನು ಕೂಡ ಹೇಳಿತೀರದು. ಈಗ ನೋಡಿರಿ! ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಗೊತ್ತುಮಾಡಿಟ್ಟಿದ್ದ ಪಠ್ಯಪುಸ್ತಕವೊಂದನ್ನು ತೆಗೆದುಕೊಳ್ಳಿರಿ. ಅದರ ಒಂದು ಪಾಠವು ಹಜಾಮರವನ ವಿಚಾರವಾಗಿದೆ. ಅದರಲ್ಲಿ ಹಜಾಮನೊಬ್ಬನ ಚಿತ್ರವೂ ಅವನ ಮುಗ್ಗುಲಿನಲ್ಲಿಯೇ ಹಡಪವೊದಲಾದವೂ ಇವೆ. ಪಾಠವು "ಇವನು ಹಜಾಮ; ಇವನಬಳಿ ಕತ್ತಿ, ಚಾಕು, ಬಟ್ಟಲುಗಳಿವೆ. ಇವನು ನಮಗೆ

ಕ್ಷೌರಮಾಡುವನು. " ಎಂದು ಮೊದಲಾದ ವಿಷಯಗಳನ್ನು ಹೇಳುವುದು. ಹೊಸದಾಗಿ ಮದುವೆಯಾದ ಒಂದು ಹುಡುಗಿಯು ಈ ಪಾಠವನ್ನು ಶುಕ್ರವಾರ ರಾತ್ರಿಯವೇಳೆಯಲ್ಲಿ ಓದುತ್ತಿದ್ದರೆ, ಆ ಮನೆಯಲ್ಲಿಯೇ ಆ ಹುಡುಗಿಯ ಅಜ್ಜಿಯೊಬ್ಬಳಿದ್ದರೆ, ಆ ಹುಡುಗಿಯಪಾಡುಕೇಳಬೇಕೆ? ಆ ಪಾಠದಿಂದೇನುಫಲ? ಮುದುಕಿಯು ಈ ಪಾಠಪಠನವನ್ನು ಕೇಳಿದ ಮಾರನೆಯ ದಿನದಿಂದಲೇ ತನ್ನ ಮೊಮ್ಮಗಳನ್ನು ಪಾಠಶಾಲೆಗೆ ಕಳುಹುವುದಿಲ್ಲ. ಪಾಠದಫಲವು ಹೀಗಿರುವಲ್ಲಿ ಏನು ಹೇಳಬಹುದು? ಬಾಲಿಕೆಯರಿಗೆ ಇಂತಹ ಪಾಠದಿಂದ ಏನು ಪ್ರಯೋಜನ ?

ಭಗ:— ಅಕ್ಕ! ನಿಮಗೆ ಪಾಕಶಾಸ್ತ್ರಾದಿ ಗೃಹಕಾರ್ಯಗಳನ್ನು ಕಲಿಸುವುದಿಲ್ಲವೆ.

ಸಭಾ:— ನಿಜ; ಕಲಿಸುವರು. ಪುಸ್ತಕ ವಿದ್ಯೆಯು ಸದ್ಯಕ್ಕೆ ನಮಗೆ ಬೇಡ. ಅನ್ನ ಮಾಡುವುದು ಹೀಗೆ; ಹುಳಿಮಾಡುವುದು ಹಾಗೆ; ಲಾಡು ಕರಿವುದು ಆರೀತಿ; ಚಿರೋಟಿಮಾಡುವುದು ಈರೀತಿಯೆಂದು ಹೇಳುವುದು ಬಲು ಸುಲಭ. ಒಲೆಯಮುಂದೆ ಕುಳಿತು ಹೊಗೆಯನ್ನು ಬಡಿಸಿಕೊಂಡು ಶಖೆಯಲ್ಲಿ ಕೆಲಸ ಮಾಡುವುದು ಕಷ್ಟ! ಒಬ್ಬಳು ಪಾಕಶಾಸ್ತ್ರಾನುಸಾರವಾಗಿ ಅನ್ನವನ್ನು ಮಾಡಿ ಕಯ್ಯಲ್ಲಿ ಬಟ್ಟೆ ಅಥವಾ ಎಲೆಯನ್ನಾದರೂ ಹಿಡಿದುಕೊಳ್ಳದೆ ಹಾಗೆಯೇ—ಪಾಕಶಾಸ್ತ್ರದಲ್ಲಿ ಆರೀತಿ ಮಾಡಬೇಕೆಂದು ಹೇಳದುದರಿಂದ—ಆ ಅನ್ನವಾಗಿದ್ದ ತಪ್ಪಲೆಯನ್ನು ಇಳಿಸಲು ಪ್ರಯತ್ನಿಸಿ ಕೈಸುಟ್ಟುಕೊಂಡಳಂತೆ! ಇಂತಹ ಪಾಕಶಾಸ್ತ್ರಾಭ್ಯಾಸದಿಂದೇನು? ಪಾಠಶಾಲೆಯ ಸಂಗಡಲೇ ಮರೆಯುವ ವಿದ್ಯೆಯಾದ ಭೂಗೋಳ, ಚರಿತ್ರೆ ಮೊದಲಾದುವುಗಳಿಂದೇನು ಪ್ರಯೋಜನ? ಅಭ್ಯಾಸಕ್ಕೆ ತಂದ ವಿದ್ಯೆಯು ಬೇಕು. ಸದ್ಗುಣವನ್ನು ಅಭ್ಯಾಸಿಸಬೇಕೆಂದು ಹೇಳುವ ಅಸದೃಶ ಸಾಮರ್ಥ್ಯವನ್ನು ಪಡೆದು ದುರ್ಗುಣದ ಮೊಟ್ಟೆಯಾಗಿರುವುದಕ್ಕಿಂತ ಒಂದು ಸದ್ಗುಣವನ್ನಾಚರಿಸಿದವನೇ ಪರಮಶ್ರೇಷ್ಠನೆಂದು ತಿಳಿದವರಾಡುವರು. ಪುರುಷರಲ್ಲಿ ಉದಾಸೀನ,ಅಸೂಯೆ,ಅವಿಚಾರಗಳು ಹೆಚ್ಚಿದರೆ, ಸ್ತ್ರೀಯರು ಧೂರ್ತೆಯರೂ, ದುರಾಗ್ರಹಿಗಳೂ ಆಗಿ ಪರಿಣಮಿಸುವುದರಲ್ಲಿ ಅಭ್ಯಂತರವಿಲ್ಲ. ಹಾಗೆಯೇ ಈ ಕನ್ನಡ ನಾಡಿನ ಸ್ಥಿತಿಯೂ ಆಗಿದೆಯೆನ್ನಬಹುದು.

ಆರಂಭದಿಂದಲೂ ನಮ್ಮ ಸ್ತ್ರೀಯರನ್ನು ಸುಶಿಕ್ಷಾರೂಪವಾದ ವಿದ್ಯೆಯಿಂದ ಪ್ರೋತ್ಸಾಹಿಸಿದ್ದರೆ ನಮ್ಮಿನ್ನಾಡಿನಲ್ಲಿ ಶಮದಮಾದಿಗಳಿಂದ ಪರಸ್ಪರ ಸನ್ಮೈತ್ರಿಯೂ, ಸಹಜಸೌಹಾರ್ದಭಾವವೂ ಸದಾಚಾರನ ಸ್ಥಿರರಾಜ್ಯಭಾರದಿಂದ ದುರಾಚಾರನ ನಿಗ್ರಹವೂ ಸಹಜವಾಗಿಯೇ ಆಗುತ್ತಿದ್ದಿತು. ಈಗಲಾದರೂ, ಸುಶಿಕ್ಷೆಯು ಹೆಚ್ಚುವಂತೆ ಮಾಡಿ ಸ್ತ್ರೀಯರಿಗೆ ಉಚಿತ ವಿದ್ಯಾಭ್ಯಾಸವನ್ನು ಮಾಡಿಸಿ, ದೇಶವು ಅಭಿವೃದ್ಧಿಗೆ ಬರುವಂತೆ ಪ್ರಯತ್ನಿಸುವುದು ಶ್ರೇಯಸ್ಕರವು. ಈಗಳಿನ ವಿದ್ಯೆಯು ಸ್ವಚ್ಛಂದತೆಯ ದೆಸೆಯಿಂದ ಸತ್ಪುರುಷರ ಸಮಾಜವೂ ಅಪವಾದಾನಲದಿಂದ ದಹಿಸಿಹೋಗುವ ದುಷ್ಕಾಲವು ಬಂದೊದಗಿರುವುದು. ಪರಿಣಾಮವೀರೀತಿ ಯಾಗಿರುವುದರಿಂದಲೇ ಸ್ತ್ರೀವಿದ್ಯಾಭ್ಯಾಸಕ್ಕೆ ನಿಷೇಧವುಂಟಾಗಿರುವುದು.

ಭಗ:—ಹಾಗಾದರೆ, ದುಷ್ಟರಾದವರನ್ನು ಸರ್ಕಾರದವರು ಹಿಡಿದು ಶಿಕ್ಷಿಸಬಾರದೇಕೆ?

ಸಭಾ:—ಇವೆಲ್ಲ ಅಂತರಂಗದ ದೌಷ್ಟ್ಯವು; ಗೊತ್ತಾಗುವುದೆಂತು? ನೂರರಲ್ಲಿ ಒಂದು ಬಹಿರಂಗವಾದರೆ ಹೆಚ್ಚು. ಅಂತಹರಿಗೆ ಶಿಕ್ಷೆಯು ಇದ್ದೇ ಇರುವುದು. ಆದರೂ “ ಸಾಯುವರಿಗೆ ಮದ್ದಿಲ್ಲ; ಕೆಡುವರಿಗೆ ಹಿತರಿಲ್ಲ,— ಎಂಬ ಗಾಥೆಗನುಸಾರವಾಗಿ ಕೆಡುವರನ್ನು ಉದ್ಧರಿಸಲ್ಕಾರಿಗೂ ಶಕ್ತಿಯಿಲ್ಲವು. ಸರ್ಕಾರದವರೂ, “ಸ್ತ್ರೀವಿದ್ಯಾಭ್ಯಾಸವು ಅಭಿವೃದ್ಧಿಗೆ ಬರಬೇಕು; ಸಕಲರೂ ದೇಶಸೌಖ್ಯಕ್ಕೆ ಬಡಿದಾಡಬೇಕೆಂಬ ಉದ್ದೇಶದಿಂದಲೇ ಪ್ರಯತ್ನಪಟ್ಟು ಅಸಂಖ್ಯಾಕ ದ್ರವ್ಯವನ್ನು ವ್ಯಯಮಾಡುತ್ತಿದ್ದರೂ, ಫಲವಿಲ್ಲವಾಗಿದೆ. ಭಂಡಸ್ತ್ರೀಯಾದ ಶರಾವತಿಚಿಕ್ಕಮ್ಮನೊಡನೆ ಬಾಳುವ ಶಂಕರನಾಥಚಿಕ್ಕಪ್ಪನ ಬಾಳಿನಂತೆಯೇ ಸದುದ್ದೇಶಪರರಾದ ಸರ್ಕಾರದವರ ಕಾರ್ಯವು ತೃಷ್ಣಾ-ದುರಾಶಾ-ಪ್ರಭೃತಿಗಳ ಪರಿಚಾರಕರಂತಿರುವ ಮಹಾಶಯರಾದ ನಮ್ಮ ದೇಶೀಯರಿಂದಲೇ ಭಂಗ ಹೊಂದುತಿರುವುದು. “ ಶಯ್ಯೆಯೇ ಸರ್ಪವಾದರೆ, ಸುಖಜೀವನದಾಶೆಯುಂಟೆ ? ” ದುರಾಚಾರಪ್ರಭೃತಿಗಳು ತಮ್ಮ ಕಾರ್ಯಕ್ಕಾಗಿ ಎಂದೂ ಪರಿತಪಿಸಲಾರರು. ಅವರು ತಾವು ಮಾಡಿದ ಕಾರ್ಯಗಳೆಲ್ಲವೂ ಸರಿಯಾದುವೆಂದೇ ಭಾವಿಸುವರು. ಅದರಂತೆಯೇ ಮಾಡಲು ಮೋಟಬಾಲದನರಿಯಂತೆ—ಉಪದೇಶಿ

ಸುವರು. ಅವರು ಹಾಗೆ ಮಾಡದೆ ತಮ್ಮ ನಡತೆಗಾಗಿ ಅನುತಾಪಹೊಂದಿ, ಮುಂದೆಯಾದರೂ ನಡತೆಯನ್ನು ಸರಿಪಡಿಸಿಕೊಂಡರೆ, ಸರ್ಕಾರದವರ ಉದ್ದೇಶವೂ, ದೇಶಭಕ್ತರ ಮನೋರಥವೂ ಸಮ್ಮಿಳನವಾಗಿ ಸುಖವು ದೊರೆವುದರಲ್ಲಿ ಸಂಶಯವಿಲ್ಲ.

ಭಗ:—ಅಕ್ಕ ! ಮನಸ್ಸಾಕ್ಷಿಗೆ ವಿರೋಧವಾಗಿ ಅವರು ನಡೆವರೆಂತು?

ಸಭಾ:—ಮಹನೀಯರು ಮನೋವಾಕ್ಕಾಯಗಳಲ್ಲಿ ಒಂದೇ ವಿಧವಾಗಿಯೂ, ನೀಚರು ಮನೋವಾಕ್ಕಾಯಗಳೊಂದೊಂದರಲ್ಲಿ ಒಂದೊಂದು ಬಗೆಯಾಗಿಯೂ ನಡೆವರು. ಅವರಿಗೆ ಹಿತಾಹಿತಗಳಾಗಲೀ, ಮನಸ್ಸಾಕ್ಷಿಗೆ ಸಮ್ಮತ ಅಥವಾ ಅಸಮ್ಮತವಾಗಿಯಾಗಲೀ ನಡೆಯಲು ಬುದ್ಧಿಯಿರುವುದಿಲ್ಲ.

ಭಗ:—ರಾಮು ! ನೋಡಿದೆಯೊ ? ಸುಳ್ಳನ್ನು ಹೇಳಬಾರದೆಂದು ನಾನು ಹೇಳಿರಲಿಲ್ಲವೆ ?

ರಮಾ:— ಅಕ್ಕನ ಬುದ್ಧಿಯನ್ನು ನೋಡಿದೆಯೊ ? ಅವಳಿಗೆ ತಿಳಿದ ಯಾವುದನ್ನೂ—ಎಷ್ಟೇ ಸಣ್ಣವಿಷಯವಾದರೂ—ಮರೆಯದೆ ಜ್ಞಾಪಕವಿಟ್ಟುಕೊಂಡಿರುವಳು !

ಸಭಾ:— ನೀವೂ ಪ್ರಯತ್ನಪಟ್ಟರೆ ಅಸಾಧ್ಯವಾಗಲಾರದು. ಈಗ ಹೊತ್ತಾಯಿತು; ಮಲಗಿರಿ.

ಭಗವಾನಂದ ರಮಾನಂದರು ಸಮಯ ನಿರೀಕ್ಷಣೆಯಲ್ಲಿದ್ದ ವಿಶ್ರಾಂತಿದೇವಿಯ ಮಾಯಾಪಾಶಕ್ಕೊಳಗಾಗಿ ಮೈಮರೆತು ಶಯ್ಯೆಯ ಮೇಲೆ ಮಲಗಿದರು. ಸಭೆ, ಭಗವದ್ಗೀತೆಯನ್ನು ಕೈಯಲ್ಲಿ ಹಿಡಿದು ವಿರಾಮಾಸನ ( Easy-chair ) ದ ಮೇಲೆ ಕುಳಿತು, ಒಂದೆರಡು ಶ್ಲೋಕಾರ್ಥಗಳನ್ನು ಮಥಿಸಿದಳು; ಅಷ್ಟರಲ್ಲಿಯೇ ನಿದ್ರಾಂಗನೆಯ ಬಲವದ್ಬಂಧನದಿಂದ ಕರದಲ್ಲಿದ್ದ ಪುಸ್ತಕವನ್ನು ಕರದಲ್ಲೇ ಹಿಡಿದು ಪರವಶಳಾದಳು.

# ದಶಮ ಪರಿಚ್ಛೇದ.

## ( ನಿಶಾಚರ. )

ಈ ಪ್ರಪಂಚದಲ್ಲಿರುವ ನಾನಾ ಜೀವರಾಶಿಗಳಲ್ಲಿ ಮಾನವ ಜನ್ಮವೇ ಶ್ರೇಷ್ಠವೆಂಬುದು ಸರ್ವಸಮ್ಮತವಷ್ಟೆ ! ಅಂತಹ ಮೇಲ್ಮೆಯನ್ನು ಮಾನವನಿಗೆ ಕೊಡಲು ಅವನಿಗಿರುವ ವಿವೇಚನಾಜ್ಞಾನವೇ ಪ್ರಬಲಕಾರಣವೆನ್ನುವುದರಲ್ಲಿ ಸಂಶಯವಿಲ್ಲ. ಆವನು, ವಿವೇಚನೆಯಿಂದ ನ್ಯಾಯಾನ್ಯಾಯಗಳನ್ನು ತಿಳಿಯುವ ಶಕ್ತಿಯನ್ನು ಹೊಂದಿರುವುದಿಲ್ಲವೊ-ಅವನು, ಮನುಷ್ಯರೂಪಧಾರಿಯಾದ ಪಶುವೆಂದೆನ್ನುವುದರಲ್ಲಿ ಸಂಶಯ ತೋರದು. ಪ್ರತಿಯೊಂದು ವಸ್ತುವಿನಲ್ಲಿಯೂ ಗುಣ ದೋಷಗಳನ್ನು ಹೇಗೆ ಇಟ್ಟಿರುವನೋ, ಹಾಗೆಯೇ ಪ್ರಪಂಚದಲ್ಲಿ ಪಶುಪ್ರಾಯನಾದ ಮನುಷ್ಯನನ್ನೂ. ವಿವೇಚನಾಶಕ್ತಿಯುಳ್ಳ ಮನುಷ್ಯನನ್ನೂ ಸೃಷ್ಟಿಸಿರುವುದು ಪರಮಾತ್ಮನ ಇಚ್ಛೆಗೆ ವ್ಯತಿರಿಕ್ತವಾದುದಲ್ಲ. ಆದರೆ, ದುಷ್ಟನು ತನ್ನಂತೆಯೇ ಪ್ರಪಂಚದಲ್ಲಿರುವರೆಲ್ಲ ದುಷ್ಟರೆಂದೂ, “ ತಾನು ಕಳ್ಳ, ಪರರ ನಂಬ ” ಎಂಬಂತೆ ತಾನು ಕಳ್ಳನಾದಮಾತ್ರದಿಂದಲೇ ಪ್ರಪಂಚದವರೆಲ್ಲರೂ ಕಳ್ಳರೆಂದು ಭಾವಿಸುವುದು ಎಷ್ಟುಮಾತ್ರಕ್ಕೂ ನ್ಯಾಯಸಮ್ಮತವಾಗದು. ಆವಾವನಿಗೆ ಆವಾವ ದುರ್ಗುಣಗಳಲ್ಲಿ ಹೆಚ್ಚು ಅನುಭವವಿರುವುದೋ ಅವನವನು ಅದರದರ ಗುಣದೋಷಗಳನ್ನು ಚೆನ್ನಾಗಿ ಬಲ್ಲನು. ಅಂಥವನು ಆವಾಗಲೂ ವಸ್ತುಗಳ ಛಿದ್ರಾನ್ವೇಷಣವನ್ನೇ ಮಾಡುತಿರುವನು. ಸ್ವಲ್ಪಮಾತ್ರ ದೋಷವು ದೊರೆವುದರಿಂದಲೇ ಅದನ್ನು ದೊಡ್ಡದನ್ನಾಗಿ ಮಾಡಿ ಚರ್ಚಿಸ ಬಲ್ಲನು. ಅದರಿಂದಲೇ ತನ್ನ ಬುದ್ಧಿಗೆ ತೋರದುದನ್ನು ಕಲ್ಪಿಸಿ ಅನರ್ಥ ಪರಂಪರೆಗಳನ್ನೂ ಉಂಟುಮಾಡಿಕೊಳ್ಳುವನು.

ನಭೆಯು ಕುರ್ಚಿಯಮೇಲೆ ಮಲಗಿದ್ದಳಷ್ಟೆ. ಒಂದೆರಡು ನಿಮಿಷಗಳಲ್ಲಿಯೇ ಹೊಂಚಿನಿಂತಿದ್ದ ನಿದ್ರಾಂಗನೆಗೂ ವಶವಾದಳು. ನಭೆಯು ಅಜಾಗರೂಕತೆಯಿಂದ ಆ ಕಿರುಮನೆಗೆ ಬೇಕಾದವರು ಪ್ರವೇಶಿಸಲು ಅವಕಾಶವಿದ್ದಿತು. ಸುಮಾರು ಇಪ್ಪತ್ತೈದು ವರ್ಷದ ಯುವಕನೊಬ್ಬನು

ಆ ಕಿರುಮನೆಯೊಳಗೆ ಪ್ರವೇಶಿಸಿ, ಬಾಗಿಲ ಅಗಣಿಯನ್ನು ಹಾಕಿ, ಸಭೆಯ ಮುಂದೆ ನಿಂತನು. ದೀಪವು ಉರಿಯುತ್ತಿತ್ತು. ಸಭೆಯು ಕದಲದೆಯೇ ಕುಳಿತಿದ್ದುದನ್ನು ಬಹುಹೊತ್ತು ನೋಡಿದನು; ಮೆಲ್ಲನೆ“ ಸಭಾ! ಸಭಾ!! ” ಎಂದು ಎರಡು ಬಾರಿ ಕೂಗಿದನು. ಸಭೆಗೆ ಎಚ್ಚರವಾಗಲಿಲ್ಲ. ಆಗಂತುಕನು “ ಇದೇ ಸುಸಮಯವು; ಈ ಘಳಿಗೆಯನ್ನು ಕಳೆದುಕೊಳ್ಳಬಾರದು. ಅಹೋರಾತ್ರಿಯೂ ಹಂಬಲಿಸುತಿದ್ದುದು ಇದಕ್ಕೇ ! ಇಂತಹ ವೇಳೆ ದೊರೆಯದಿದ್ದುದರಿಂದಲೇ ಈಗ ಮೂರು ತಿಂಗಳಿಂದ ನಾನು ನಾನಾವಿಧ ರೋಗಗಳಿಂದ ಪೀಡಿತನಾಗಿದ್ದುದು. ” ಎಂದು ಮೊದಲಾಗಿ ಆಲೋಚಿಸುತ್ತ ಅವಳ ಕೆನ್ನೆಯಮೇಲಿದ್ದ ಕೈಯನ್ನು ಮೆಲ್ಲನೆ ಹಿಡಿದನು.

ಸಭೆಯು ಚಕಿತೆಯಾಗಿ ಕಣ್ದೆರೆದು ನೋಡಿದಳು. ತನ್ನ ಹಸ್ತವು ಯುವಕನ ಹಸ್ತದಲ್ಲಿದ್ದುದನ್ನೂ ಅವನು ತನ್ನನ್ನೇ ನೋಡುತ್ತಲಿದ್ದುದನ್ನೂ ಉನ್ಮತ್ತನಂತೆ ಅವನು ನಿಂತಿದ್ದುದನ್ನೂ ನೋಡಿ ತಪಿಸಿದಳು. ಅವಳ ಹೃದಯವು ಸಹಸ್ರ ವೃಶ್ಚಿಕಗಳಿಂದ ಕಡಿಯಲ್ಪಟ್ಟರೆಷ್ಟು ಸಂಕಟಕ್ಕೊಳಗಾಗುವುದೋ ಅಷ್ಟು ವ್ಯಥೆಗೀಡಾಯಿತು. ಆದರೂ ಆಲೋಚಿಸಿದಳು. ದುಡುಕುವುದರಿಂದ ಕೆಡಕು ತಪ್ಪದೆಂದು ತಿಳಿದು ಬಹು ಕಷ್ಟದಿಂದ ತಾಳ್ಮೆಯನ್ನು ವಹಿಸಿ ಮೆಲ್ಲಮೆಲ್ಲನೆ ಕೇಳಿದಳು:- “ ರಾಜಶೇಖರ ! ಇದೇನು, ಇಂತಹ ವೇಳೆಯಲ್ಲಿ ಇಲ್ಲಿಗೆಬಂದೆ ?

ರಾಜಶೇಖರ:— ಕೆಲಸವಿರುವುದರಿಂದಲೇ ಬಂದೆನು.

ಸಭಾ:— ಇಂತಹ ರಾತ್ರಿಯಾದರೂ ಇಲ್ಲಿಗೆ ಬಂದು ನನ್ನನ್ನು ಎಚ್ಚರಿಸಿ, ಮಾಡಿಕೊಂಡುಹೋಗಬೇಕಾದಷ್ಟು ಬಲವತ್ತರ ಕಾರ್ಯವಾವುದು ?

ರಾಜಶೇಖರ:— ಇದೆ.

ಸಭಾ:— (ಅಸಮಾಧಾನದಿಂದ ) ಎಂತಹ ಕೆಲಸವಿದ್ದರೂ ಬೆಳಿಗ್ಗೆ ಬರಬಹುದಾಗಿತ್ತು. ರಾತ್ರಿಯ ವೇಳೆಯಲ್ಲಿ ಇಲ್ಲಿಗೆ ಬರಲಾಗದು.

ರಾಜ:— ಏಕೆ? ಬಂದರೇನು ?

ಸಭಾ:— ಬಂದರೆ, ನನ್ನ ನಿನ್ನ ವಿಷಯದಲ್ಲಿ ಜನರಿಗೆ ಅತೃಪ್ತಿಯಾಗುವುದು.

ರಾಜ:— ಅಷ್ಟರಿಂದಲೇ ಕುಂದೇನು ?

ನಭಾ:—ರಾಜಶೇಖರ! ಶೀಲ, ಧರ್ಮ, ಕೀರ್ತಿಗಳಿಗೆ ಕಲಂಕವನ್ನು ತಂದುಕೊಳ್ಳಲಾರೆನು. ನನ್ನಂತಹರಿಗೆ ನಿನ್ನೀ ಅಕ್ರಮವು ರುಚಿಸಲಾರದು. ಅಪವಾದವು ಆತ್ಮಸಂತೋಷಕ್ಕೂ ಕೀರ್ತಿಚಂದ್ರಿಕಾಪ್ರಸಾರಕ್ಕೂ ಆತಂಕವನ್ನುಂಟುಮಾಡುವುದು.

ರಾಜ:— ಎಷ್ಟೇಪವಿತ್ರರಾಗಿದ್ದರೂ ಜನರಾಡಿಕೊಳ್ಳುವುದು ಸ್ವಭಾವ.

ನಭಾ:— ನಿಂದಿಸುವರೆಂದು ಕರ್ತವ್ಯವಿಮುಖರಾಗಬಹುದೇನು ?

ರಾಜ:— ವೃಥಾ ನಿಂದೆಗೆ ಗುರಿಯಾಗುವುದಕ್ಕಿಂತ ವಿಷಯಸುಖಪ್ರಾಪ್ತಿಯಿಂದ ಇಂದ್ರಿಯತೃಪ್ತಿಯನ್ನು ಹೊಂದಿ ನಿಂದೆಯನ್ನು ಸಹಿಸುವುದು ಮೇಲಲ್ಲವೆ ? ವೃಥಾ ನಿಷ್ಠುರವನ್ನಾದರೂ ಕೇಳುವುದೇಕೆ !

ನಭಾ:— ( ತಿರಸ್ಕಾರದಿಂದ ) ಭಲೆ ! ರಾಜಶೇಖರ ! ಇದೀಗ ನಿಜತತ್ವಬೋಧೆ!! ಹೀಗೆ ಮಾಡುವುದರಿಂದ ಮನಸ್ಸಿಗೆ ದ್ರೋಹಿಯಾಗುವೆನೆಂದೇಕೆ ತಿಳಿಯಲಿಲ್ಲ? " ಉಪ್ಪುತಿಂದಷ್ಟು ನೀರಡಿಕೆ ಹೆಚ್ಚು. " ಎಂಬ ಗಾಥೆಯನ್ನೇಕೆ ಸ್ಮರಿಸಲೊಲ್ಲೆ ?

ರಾಜ:—ನಭಾ ! ಹಾಗಲ್ಲ. ಭಗವಂತನು ಇಂದ್ರಿಯಗಳನ್ನು ಸೃಷ್ಟಿಸಿದುದರ ಉದ್ದೇಶವಾದರೂ ಏನು? ಇಚ್ಛಿತವಸ್ತುಸೇವನೆಯಿಂದ ಇಂದ್ರಿಯಗಳನ್ನು ಕಾಲಕಾಲದಲ್ಲಿ ಸಂತವಿಸದೆ ಹೋದರೆ, ಅವುಗಳಿದ್ದೂ ಫಲವೇನು ?

ನಭಾ:— ಸಾಕು, ಸಾಕು; ಸಾರ್ಥಕವಾಯ್ತು ! ರಾಜಶೇಖರ ! ಕರಣಕಳೇಬರಾದಿಗಳ ಸಾರ್ಥಕ್ಯತೆಗೆ ನಿಯಮಿತ ಕರ್ತವ್ಯವೇ ಪ್ರತ್ಯೇಕವಾಗಿರುವುದೆಂದು ನಾನು ಭಾವಿಸುವೆನು. ಇನ್ನು ನನ್ನಲ್ಲಿ ಇಂತಹ ಪ್ರಸಂಗವನ್ನು ನಿಲ್ಲಿಸಿ, ಹೊರಟುಹೋಗು !

ರಾಜ:— ಅದೇನು? ನೀನು ಸ್ತ್ರೀಸಾಮಾನ್ಯರಲ್ಲಿ ಸೇರಿದವಳಲ್ಲವೊ? ನಿನಗೇನಾದರೂ ಕೋಡುಗಳಿವೆಯೊ?

ನಭಾ:— " ಕರ್ತವ್ಯನಿಷ್ಠೆ, ಪವಿತ್ರಪ್ರೇಮಪರಾಕಾಷ್ಠೆ " ಎಂಬಿವುಗಳು ಪ್ರತಿಯೊಬ್ಬರಿಗೂ ಇರಬೇಕಾದ ಕೋಡುಗಳಾಗಿವೆ. ಅವನ್ನು

ಇಟ್ಟುಕೊಂಡಿರುವವರು ಇಂತಹ ಅತ್ಯಾಚಾರವನ್ನು ಸಹಿಸಿಕೊಂಡಿರಲಾರರು.

ರಾಜ:—ನಭಾ ! ನಿನ್ನ ಹಠವನ್ನು ಬಿಡು. ನೀನಿನ್ನೂ ಕೋಮಲ ಬಾಲೆ; ನಿನ್ನ ಈ ರೂಪ, ಯೌವನ, ಲಾವಣ್ಯ, ವಿದ್ಯಾದಿಗಳನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡ. ನಟ್ಟಡವಿಯ ಚಂದ್ರಿಕೆಯಂತೇಕೆ, ಇವೆಲ್ಲವನ್ನೂ ಕೆಡಿಸಿಕೊಳ್ಳುವೆ !

ನಭಾ:—ಕೆಡಿಸಿಕೊಂಡಿಲ್ಲ. ಸಾರ್ಥಕವಾಗುವಂತೆ ನನ್ನ ರೂಪಾದಿಗಳ ವಿನಿಯೋಗವು ಅನ್ಯಮಾರ್ಗದಲ್ಲಿದೆ.

ರಾಜ:—ಸರಿಯಾಗಿ ಹೇಳು. ನನಗೇನು ಉತ್ತರವನ್ನು ಕೊಡುವೆ?

ನಭಾ:—ಉತ್ತರವೇನು? ಇಷ್ಟೆ. ನನ್ನ ವಯೋ, ರೂಪ, ವಿದ್ಯಾದಿಗಳೆಲ್ಲವನ್ನೂ ಪುರುಷಶ್ರೇಷ್ಠನೊಬ್ಬನಲ್ಲಿ ಅರ್ಪಿಸಿರುವೆನು. ಅವುಗಳ ಮೇಲಿನ ಅಧಿಕಾರವು ಮತ್ತಾರಿಗೂ ಪ್ರಾಪ್ತವಾಗಲಾರದು.

ರಾಜ:— ಆತುರದಿಂದ- "ಅದಾರಿಗೆ" ?

ನಭೆ:— ಅಗ್ನಿಸಾಕ್ಷಿಯಾಗಿ, ಧಾರಾವಿಧಿಯಿಂದ ಪಾಣಿಗ್ರಹಣ ಮಾಡಿದ ನನ್ನ ಪತಿಗೆ.

ರಾಜ: — ಹೇಗೆ ? ಅವನೆಲ್ಲಿರುವನು ?

ನಭಾ:—ಹೇಗೆಂದರೆ, ಆತ್ಮಯಜ್ಞರೂಪದಿಂದ. ಎಲ್ಲಿರುವನೆಂದರೆ, ನನ್ನಲ್ಲಿಯೇ—ತೇಜೋರೂಪದಿಂದಿರುವನು.

ರಾಜಶೇಖರನು ದುಃಖಾತಿರೇಕದಿಂದ ಅಧೀರನಾದನು. ಗದ್ಗದಕಂಠನಾಗಿ ಮತ್ತೆ ಪ್ರಾರ್ಥಿಸಿದನು:— "ನಭಾ ! ಇಷ್ಟು ದಿನಗಳ ಮೇಲೆ ಇಂದು ಹೀಗೆ ತಿರಸ್ಕೃತನಾಗುವೆನೆಂದು ಭಾವಿಸಿರಲಿಲ್ಲ. ನಾನು ಖಂಡಿತವಾಗಿಯೂ ಸಾಯುವೆನು. ಸಾಯಲೆ ? "

ರಾಜಶೇಖರನಿಂದ ಮುಂದೆ ಮಾತನಾಡಲಾಗಲಿಲ್ಲ. ಕಂಠವು ಕಟ್ಟಿತು. ಕಣ್ಣುಗಳಲ್ಲಿ ನೀರು ತುಂಬಿತು. ದೈನ್ಯದೃಷ್ಟಿಯಿಂದ ಅವಳನ್ನೇ ನೋಡುತ್ತ ನಿಂತನು.

ನಭೆಯು ಧೈರ್ಯದಿಂದಲೂ ದರ್ಪಿತ ಸ್ವರದಿಂದಲೂ ಹೇಳತೊಡಗಿದಳು:—"ರಾಜಶೇಖರ ! ಈ ತೆರವಾದ ಕಾತರವು ಪುರುಷಧರ್ಮಕ್ಕೆ,

ವಿರುದ್ಧವಾದುದೆಂದು ತಿಳಿ. ಕಾಮಕ್ರೋಧರಂತಹ ಪ್ರಬಲ ಶತ್ರುಗಳು ಮತ್ತೊಬ್ಬರಿಲ್ಲ. ಮನವನ್ನು ಬುದ್ಧ್ಯಧೀನ ಮಾಡಬೇಕಲ್ಲದೆ, ಸ್ವೇಚ್ಛಾ ವರ್ತನದ ಇಂದ್ರಿಯಗಳಿಗೆ ಮನಸ್ಸೂ ಮನಸ್ಸಿಗೆ ನಾವೂ ಅಧೀನರಾಗ ಬಾರದು. ಇಹಸೌಖ್ಯವು ತುಚ್ಛವು. ಮಾನವ ಜೀವಮಾನವು ನಶ್ವರವು. ಅಸಂಖ್ಯಾಕವಾದ ಜಲಬುದ್ಬುದಗಳು ಏಕಕಾಲದಲ್ಲಿ ಉದ್ಭವಿಸುವುವು; ಆದರೆ, ಉತ್ತರಕ್ಷಣದಲ್ಲಿಯೇ ಅವುಗಳೆಲ್ಲವೂ ನಾಶವಾಗುವುವು. ಹಾಗೆಯೇ ಸ್ವಪ್ನದೃಶ್ಯವೂ ಆಗಿರುವುದೆಂದು ತಿಳಿ. ಕನಸಿನಲ್ಲಿ ನಾವು ಅನೇಕ ವಿದ್ಯ ಮಾನಗಳನ್ನು ನೋಡುವೆವು: ಅನೇಕ ಕಾರ್ಯಗಳನ್ನು ಮಾಡುವೆವು. ಕಣ್ಣು ಬಿಟ್ಟು ನೋಡಿದರೆ, ಏನೂ ಕಾಣದು; ಹಾಸಿಗೆಯ ಮೇಲೆಯೇ ಮಲಗಿರುವೆವು. ಹಾಗೆಯೇ ಮೋಹಾಂಧಕಾರದಲ್ಲಿ, ಅಭಿಮಾನವೆಂಬ ನಿದ್ರೆಯಲ್ಲಿ, ಕಾಮವೆಂಬ ಸ್ವಪ್ನಾವಸ್ಥೆಯಲ್ಲಿ, ವಿಷಯಲಾಲಸೆಯೆಂಬ ಮೇರೆಯಿಲ್ಲದ ಅನೇಕಾನೇಕ ಕನವರಿಕೆಗಳಿಂದ ಸುತ್ತುವರಿಯಲ್ಪಟ್ಟು ಜಡರಾಗಿರುವೆವು. ಹೀಗಿರುವ ನಾವೇ ಭಗವತ್ಕೃಪೆಯ ಮೂಲಕ ವಿವೇಕ ಸೂರ್ಯೋದಯಾನಂತರದಲ್ಲಿ ಎಚ್ಚೆತ್ತು, ವಸ್ತುವಿಚಾರವೆಂಬ ಸುಲೋಚ ನದ ಸಹಾಯದಿಂದ ನೋಡುವೆವಾದರೆ, ಇವುಗಳೆಲ್ಲವೂ ಕ್ಷಣಭಂಗುರಗ ಳಾದ ಜಲಬುದ್ಬುದ ಅಥವಾ ಸ್ವಪ್ನದೃಶ್ಯಗಳೆಂದು ಸ್ಪಷ್ಟವಾಗುವುದು. ಕ್ರಿಮಿಕೀಟಾದಿಗಳ ಸಹವಾಸದಿಂದ ತೊಂದರೆ ಪಡುವುದು ತುಚ್ಛವಾದು ದಾಗಿಯೂ ಕಾಣುವುದು. ಆದುದರಿಂದ, ತುಚ್ಛ ವರ್ಗದಲ್ಲಿರುವ ವಿಷಯ ಲಾಲಸೆಯನ್ನು ಗಮನಿಸದೆ, ಶಾಶ್ವತವೂ ಸಚ್ಚಿದಾನಂದವೂ ಆದ ಮಾರ್ಗ ವನ್ನು ಕಳೆದುಕೊಳ್ಳುವುದೆಂದಿಗೂ ಧರ್ಮವಲ್ಲವು.

"ಅಣ್ಣಾ! ರಾಜಶೇಖರ! ನೀನು ವಿದ್ಯಾವಂತನು; ಧನವಂತನು; ಪ್ರಾಯಸಮರ್ಥನು. ಹೀಗಿದ್ದರೂ, ಈರೀತಿ ಅಕಾರ್ಯಕ್ಕೆರಗು ವುದು ಉಚಿತವಲ್ಲ. ಕುಲ, ಶೀಲ, ವಿದ್ಯಾ, ರೂಪಾದಿಗಳಲ್ಲಿ ನಿನಗನು ಕೂಲೆಯಾದ ಕನ್ಯೆಯನ್ನು ವಿವಾಹ ಮಾಡಿಕೊಂಡು ಧರ್ಮಮಾರ್ಗದಲ್ಲಿ ಮುಂದುವರಿವುದು ಶ್ರೇಯಸ್ಕರವು. ನೀನು ಕುಮಾರ್ಗದಲ್ಲಿ ಬಿದ್ದು ಕುತ್ಸಿತನಾಗುವುದಾದರೆ, ಬಂಧು ಮಿತ್ರವರ್ಗದಿಂದ ತಿರಸ್ಕೃತನಾಗುವೆ; ಸುಖಬಾಹಿರನಾಗುವೆ! ಚೆನ್ನಾಗಿ ತಿಳಿ.

"ಅಣ್ಣಾ! ರಾಜಶೇಖರ!! ಹೊರಡು, ನಿನ್ನ ದುರಭಿಮಾನವನ್ನು ಬಿಡು. ಪರಲೋಕಗತನಾಗಿದ್ದರೂ ನನ್ನ ಹೃದಯದಲ್ಲಿಯೇ ಇರುವ ನನ್ನ ಸ್ವಾಮಿಯ ಅನುಗ್ರಹದಿಂದ ನಾನು ಕುತ್ಸಿತ ಬುದ್ಧಿಯನ್ನು ಹೊಂದೆನು. ಅವಸ್ಥಾತ್ರಯ, ಕರಣತ್ರಯದಿಂದಲೂ ಪರಿಶುದ್ಧವಾಗಿರುವೀಚಿತ್ತವು ಇತರ ಕ್ಷುದ್ರವಿಷಯವಾಸನೆಗಳೆಂಬ ಕ್ರಿಮಿಕೀಟಾದಿಗಳ ಕ್ಷೋಭೆಗೊಳಗಾಗದು. ಸ್ಥೂಲ ದೇಹನಿರ್ಮುಕ್ತನಾದ ನನ್ನ ಸ್ವಾಮಿಯು ಸೂಕ್ಷ್ಮದೇಹದಿಂದ ನನ್ನಲ್ಲಿಯೇ ಐಕ್ಯನಾಗಿರುವನು. ಆತನ ಕಟಾಕ್ಷಸುಧೆಯು ನನ್ನ ಸರ್ವಾವಯವಗಳಲ್ಲಿಯೂ ವ್ಯಾಪಿಸಿ, ನಿರತಿಶಯತೇಜೋಬಲವನ್ನುಂಟುಮಾಡುತಿರುವುದು. ನಾನು ನನ್ನ ಸ್ವಾಮಿಯಲ್ಲಿ ದ್ರೋಹಿಯಾಗೆನು. ರಾಜಶೇಖರ! ಇನ್ನು ಹೊರಡು. ಆದರೆ, ಅಜ್ಞರಂತೆ ಜೀವಿತದಲ್ಲಿ ನಿರಾಶನಾಗಬೇಡ; ಕರ್ತವ್ಯವಿಮುಖನಾಗಬೇಡ.

"ರಾಜಶೇಖರ! ನಿನ್ನ ಅಕೃತ್ಯಕ್ಕೆ ಪ್ರತಿಫಲವನ್ನು ಕೊಡಲು ನನಗೆ ಇಷ್ಟವಿಲ್ಲ. ಹಾಗೆ ಇಷ್ಟವಿದ್ದಿದ್ದರೆ ಈವರೆಗೆ ನೀನು ಇಲ್ಲಿರುತಿರಲಿಲ್ಲ. ನಾನು ಪ್ರತೀಕಾರ ಮಾಡಲಪೇಕ್ಷಿಸುವುದಿಲ್ಲ. ನಿನಗೆ ಶಿಕ್ಷೆಕೊಡಲು ಬೇರೊಬ್ಬನಿರುವನು. ನನ್ನ ಚಿರವ್ರತಕ್ಕೆ ಕ್ಷಮೆಯೇ ಮುಖ್ಯಾವಲಂಬನವು. ಆದುದರಿಂದ ನಾನು ನಿನಗೆ ಕೆಡಕನ್ನು ಚಿಂತಿಸೆನು. ದುರ್ಭಾವನೆಯನ್ನು ಬಿಡು. ನಿನ್ನ ಆಪ್ತ ಸೋದರಿಯರಲ್ಲಿ ನನ್ನನ್ನು ಮೊದಲನೆಯವಳೆಂದು ಭಾವಿಸಿ ಸನ್ಮಾರ್ಗದಲ್ಲಿ ನಡೆ. ನಿನ್ನ ಇಂದಿನ ಈ ದುಷ್ಟವರ್ತನೆಯನ್ನು ಬಹಿರಂಗಪಡಿಸುವುದೂ ಇಲ್ಲ. ನೀನು ಇನ್ನು ಇಲ್ಲಿ ನಿಲ್ಲದೆ ಹೊರಟುಹೋಗು."

ರಾಜಶೇಖರನು ಹತಾಶನಾಗಿ ಅಲ್ಲಿ ನಿಲ್ಲಲಾರದೆ ನಿಂತಲ್ಲಿಯೇ ಮೊಣಕಾಲೂರಿ ಕೈಗಳನ್ನು ಜೋಡಿಸಿ ಪ್ರಾರ್ಥಿಸುತ್ತ ಕುಳಿತುಬಿಟ್ಟನು.

ನಭೆಯು ಅಲ್ಲಿ ನಿಲ್ಲಲಿಲ್ಲ; ಹೊರಹೊರಟು ಹೋದಳು.

ರಾಜಶೇಖರನು ಏನು ಮಾಡಬಲ್ಲನು? "ಹಾ! ಮೋಸವಾಯಿತು! ನಾನು ಕುಳಿತುಕೊಳ್ಳಬಾರದಾಗಿದ್ದಿತು. ಇನ್ನು ಏನು ಮಾಡಲಿ?" ಎಂದು ಆಲೋಚಿಸಿದನು. ಹೊರಹೊರಡಲು ಎದ್ದು ಮುಂದಾದನು. ಮತ್ತೆ ಹಿಮ್ಮೆಟ್ಟಿ ಯೋಚಿಸಿದನು. ಈಗ ಹೊರಗೆ ಹೋದರೆ, ಮರ್ಯಾದೆಯುಳಿವುದಿಲ್ಲ. ಆಗಲಿ, ಹೋಗಲಿ—ಹೇಗೂ ಮತ್ತಾವುದಾದರೂ ಸಮ

ಯವನ್ನು ಕಾದು ಕಾರ್ಯವನ್ನು ಸಾಧಿಸದೆ ಬಿಡೆನು." ಎಂದು ಅಲ್ಲಿಯೇ ಮಲಗಿಬಿಟ್ಟನು. "ಸುಹೃದಯರೆ! ವಿವೇಚನಾಶಕ್ತಿಯಿಲ್ಲದ ಮಾನವನಿಗೂ ಪಶುವಿಗೂ ತಾರತಮ್ಯವೇನಾದರೂ ಇದೆಯೇ?" ಸ್ವಲ್ಪವಿದೆಯೆನ್ನುವಿರಲ್ಲವೆ? ನಿಜ! ಪಶುವು ಪ್ರಜ್ಞೆಯಿಲ್ಲದಿದ್ದರೂ ಹಿಂಸ್ರ ಜಂತುವೆನ್ನಿಸುವುದಿಲ್ಲ. ಉಚಿತಾನುಚಿತವಿಲ್ಲದ ಮಾನವನು ಹಿಂಸ್ರಕನಾಗಿ ನಿಶಾಚರ (ಮದಾಂಧ)ನೆನ್ನಿಸಿ ಕೊಳ್ಳುವನು. ಅಲ್ಲವೆ?

---

## ಏಕಾದಶ ಪರಿಚ್ಛೇದ.

(ಅಂತರಂಗದ ಅನಂತವಿಚಾರ)

ಕಾರ್ಯತತ್ಪರರಿಗೆ ಕಾಲವು ಜಾಗ್ರತೆ ಕಳೆವುದು. ಸೋಮಾರಿಗಳಿಗೆ ದಿನದ ಇಪ್ಪತ್ತನಾಲ್ಕು ಘಂಟೆಗಳು ನಾಲ್ವತ್ತೆಂಟರಂತೆಯೇ ಆಗುವುವು. ಆಲೋಚನೆಯಲ್ಲಿ ಲೀನವಾಗುವವರಿಗೆ ಎಪ್ಪತ್ತೆರಡರಂತೆ ತೋರುವುದು. ಹಾಗೆಯೇ ದುರಭಿಸಂಧಿಯುಳ್ಳದ್ದ ರಾಜಶೇಖರನುಕೂಡ ಉಳಿದಿದ್ದ ರಾತ್ರಿಯ ಕೆಲವು ಘಂಟೆಗಳನ್ನು ಯುಗಗಳಂತೆ ಕಳೆದನು. ಮಾರನೆಯ ಹಗಲನ್ನೂ ಬಹು ಕಷ್ಟದಿಂದ ದಾಟಿದನು. ಮರುದಿನ ರಾತ್ರಿ ಹತ್ತು ಘಂಟೆಯ ಸಮಯ. ರಮಾಮಣಿ ಚಿದಾನಂದರಿಬ್ಬರೇ ಕುಳಿತು ಮಾತನಾಡಿಕೊಳ್ಳುತಿದ್ದರು.

ಚಿದಾನಂದ:—ಇಂದು ರಾಜಶೇಖರನು ವ್ಯಸ್ತನಾಗಿರುವನು. ಕಾರಣವೇನು, ಬಲ್ಲೆಯಾ?

ರಮಾ:—ಆತನಿಗೆ ದೇಹಸ್ಥಿತಿ ಸರಿಯಾಗಿಲ್ಲವಂತೆ. ಯಾವ ಕೆಲಸದಲ್ಲಿಯೂ ಶ್ರದ್ಧೆ ಹುಟ್ಟುವುದಿಲ್ಲವೆಂದೂ ತಾಯಿಯ ಬಳಿಗಾದರೂ ಹೋಗುವೆನೆಂದೂ ಹೇಳುತ್ತಿದ್ದನು.

ಚಿದಾ:—ನಿಜವಾದ ಸಂಗತಿಯೇನಾದರೂ ಗೊತ್ತಿರುವುದೊ!

ರಮಾ:—ನನಗೆ ಮತ್ತೇನೂ ತಿಳಿಯದು. ನಿಮಗೇನಾದರೂ ತಿಳಿದಿದೆಯೋ?

ಚಿದಾ:—ನನಗೇನೋ ಸ್ವಲ್ಪ ಅನುಮಾನತೋರಿದೆ. ನಿಜವೋ ಸುಳ್ಳೋ ದೃಢವಾಗಿ ಹೇಳಲಾರೆನು.

ರಮಾ:—ಅದೇನು, ಸ್ವಲ್ಪ ಹೇಳಬಾರದೆ ?

ಚಿದಾ:—ಈದಿನ ಮಧ್ಯಾಹ್ನ ನಾವೆಲ್ಲರೂ ಒಟ್ಟಿಗೆ ಊಟಕ್ಕೆ ಕುಳಿತಿದ್ದೆವಷ್ಟೆ !

ರಮಾ:—ಅಹುದು.

ಚಿದಾ:—ಸಭೆಯಬಳಿ ಕುಳಿತಿದ್ದ ರಾಜಶೇಖರನು ಥಟ್ಟನೆದ್ದು ರಮಾನಂದನಬಳಿ ಕುಳಿತು, ತನ್ನ ದೈನ್ಯದೃಷ್ಟಿಯನ್ನು ಸಭೆಯಕಡೆಗೆ ಬೀರುತಿದ್ದನು. ಅದನ್ನು ನಾನು ನೋಡಿದೆನು. ಆದರಿಂದ ನಿನ್ನೆಯದಿನ ಏನೋ ನಡೆದಿರಬೇಕೆಂದು ಊಹಿಸುವೆನು.

ರಮಾ:—ಅನಂತರ ?

ಚಿದಾ:—ಅನಂತರವೇನು ? ಅವನೆಷ್ಟುಹೊತ್ತುನೋಡಿದರೂ ಸಭೆಯು ಅವನನ್ನು ನೋಡಲಿಲ್ಲ. ಆದುದರಿಂದ ಅವನು ಊಟಮಾಡಿ ಏಳುವ ಕಾಲದಲ್ಲಿ ಕಣ್ಣುಗಳಲ್ಲಿ ನೀರು ತುಂಬಿದ್ದಿತು. ಅದನ್ನೂ ನಾನು ಚೆನ್ನಾಗಿ ನೋಡಿದೆನು.

ರಮಾ:—ಹಾಗಾಗಲು ಕಾರಣವೇನು ?

ಚಿದಾ:—ಹೇಳುವೆನು; ಕೇಳು. ಊಟವಾದ ಬಳಿಕ ನಾವೆಲ್ಲರೂ ಇಲ್ಲಿಗೆ ಬಂದೆವಷ್ಟೆ. ನಾನು ಎದ್ದ ಕೂಡಲೇ ನೀನು ಹೊರಗೆ ಹೋಗಲಿಲ್ಲವೆ ? ನೀನು ಏನುಬೇಕೆಂದು ಕೇಳಿದರೂ ಉತ್ತರ ಕೊಡದೆ ಹೊರಟು ಹೋದೆನಷ್ಟೆ? ಆಗ ಸಭೆಯು ಹಿತ್ತಲಕಡೆ ಕೈಯನ್ನು ತೊಳೆದುಕೊಳ್ಳುತಿದ್ದಳು. ಅಲ್ಲಿಗೆ ರಾಜಶೇಖರನು ಹೋಗಿ ಅವಳನ್ನು ದೈನ್ಯವೃತ್ತಿಯಿಂದ ಏನನ್ನೋ ಬೇಡುತಿದ್ದನು. ಅವಳು ಧೈರ್ಯವಾಗಿ “ ಹಾ ! ಇದೀಗ ಪುರುಷರಸ್ಥೈರ್ಯ! ನಿನ್ನಿನದಿನ ಹೇಳಿದುದೆಲ್ಲವೂ ಅರಣ್ಯರೋದನವೋ! ಛೀ! ಇಂತಹ ಆಲೋಚನೆಯನ್ನು ಬಿಡು; ಬಿಡು. ನಿನ್ನ ಅಕೃತ್ಯವೆಲ್ಲವೂ ತಾಯಿತಂದೆಯರಿಗೆ ತಿಳಿದಿದ್ದರೂ ಇರಬಹುದು; ಹೊರಡು, ನನ್ನಿದಿರಿಗೆ ನಿಲ್ಲದೆ ಹೊರಡು. ” ಎಂದು ಹೇಳುತಿದ್ದಳು.

ರಮಾ:-ಈಗ ನಾವು ಬಹುಕಷ್ಟಕ್ಕೆ ಸಿಕ್ಕಿದಂತಾಯಿತು. ಏನು ಮಾಡುವ?

ಚಿದಾ:—ನಾನು ಈಗ ಅಂತರಂಗದಲ್ಲಿಯೇ ವಿಚಾರಮಾಡುವೆನು. ಸಭೆಯು ನನ್ನಿದಿರಿನಲ್ಲಿ ಸುಳ್ಳಾಡಳು." ಎಂದು ಹೇಳಿ,

ಚಿದಾನಂದನು ಆನಂದದಿಂದ "ಸಭಾ" ಎಂದು ಕೂಗಿದನು. ಸಭೆಯು ಬಂದು ನಿಂತು "ಅಪ್ಪಾ! ಏಕೆ ಕೂಗಿದೆ?" ಎಂದಳು.

ಚಿದಾ:—ಸಭಾ! ಪಾಠವು ಮುಗಿಯಿತೆ? ಕುಳಿತುಕೊ!

ಸಭೆಯು "ಪಾಠವು ಆಗಲೇ ಮುಗಿಯಿತು." ಎಂದು ಹೇಳಿ, ಅಲ್ಲಿಯೇ ಸಿದ್ಧವಾಗಿದ್ದೊಂದು ಕುರ್ಚಿಯಮೇಲೆ ಕುಳಿತಳು.

ಚಿದಾ:—ಈ ದಿನವೇಕೆ ಸ್ವಲ್ಪ ವ್ಯಸ್ತಳಾಗಿ ಕಾಣುವೆ? ಯಾರಾದರೂ ಏನಾದರೂ ಕೆಟ್ಟಮಾತುಗಳಾಡಿದರೇನು?

ಸಭಾ:—ಇಲ್ಲ.

ಚಿದಾ:—ರಾಜಶೇಖರನೇಕೆ ಬಹು ವ್ಯಸನದಿಂದಿರುವನು? ಅವನ ತಲೆಶೂಲೆಗೆ ಕಾರಣವೇನೋ, ಬಲ್ಲೆಯಾ?

ಸಭಾ:—ಅವನ ತಲೆಶೂಲೆಗೆ ಕಾರಣವೇನೋ ಬಲ್ಲೆನು. ಆದರೆ ಅದಕ್ಕೆ ತಕ್ಕ ಅಂಜನವು ದೊರೆವುದೆಲ್ಲಿಯೊ, ನನಗೆ ತಿಳಿಯದು.

ಚಿದಾ:—ಈಗ ಹೇಗಿರುವನು? ಎಲ್ಲಿರುವನು?

ಸಭಾ:—ನನಗೆ ತಿಳಿಯದು; ನಾನು ನೋಡಲಿಲ್ಲ.

ರಮಾ:—ನಾನು ಈಗ ಅರೆಗಳಿಗೆಯ ಮುಂಚೆ 'ಕಾಫಿ'ಯನ್ನು ಕೊಡಲು ಹೋಗಿದ್ದೆನು. ಆಗ ಅವನು ಹಿತ್ತಿಲಿನಲ್ಲಿದ್ದನು. ಈಗ ಎಲ್ಲಿರುವನೋ ತಿಳಿಯದು.

ಸಭಾ:—ಆಲಸ್ಯದವನು ಹೋಗುವುದಾದರೂ ಎಲ್ಲಿಗೆ? ಕಿರುಮನೆಯಲ್ಲಿಯೇ ಇರಬಹುದು.

ರಮಾ:—ನೀನೇಕೆ ಆತನನ್ನು ವಿಚಾರಿಸಲಿಲ್ಲ; ಆತನಲ್ಲಿ ನಿನಗೇಕೆ ಅಷ್ಟು ಉದಾಸೀನ?

ಸಭಾ:—ನನಗೆ ಉದಾಸೀನವಿಲ್ಲ. ಕೆಲಸವಿದ್ದುದರಿಂದ ಇದುವರೆಗೂ ಹೋಗಲಿಲ್ಲ.

ರಮಾ:—ಅವನು ಈದಿನ ನನ್ನೊಡನೆ ಊರಿಗೆ ಹೋಗುವುದಾಗಿ ಹೇಳಿದನು. ನಾನು ಕೂಡದೆಂದೆನು.

ಚಿದಾ:— ಏಕೆ, ಬೇಡವೆಂದೆ ?

ರಮಾ:— ಸ್ವಲ್ಪ ಗುಣವಾದ ಬಳಿಕ ಹೋಗಲೆಂದು—

ಚಿದಾ:—ಸಭಾ! ಅವನ ರೋಗವಾದರೂ ಏನು? ತಿಳಿಯದೆ!

ಸಭಾ:— ರೋಗವೆಂತಹುದೊ ? ಪ್ರಾಯಃ ಚಿಂತಾರೋಗವಿರಬಹುದು. ನೀವು ಇನ್ನೆಷ್ಟುದಿನ ಆತನನ್ನು ಅವಿವಾಹಿತನನ್ನಾಗಿ ಇಟ್ಟಿರುವಿರಿ? ಅವನ ಸುಖ ಸಂತೋಷಾದಿಗಳಿಗೆ ನೀವೇ ವಿಘ್ನಕಾರಿಗಳಾಗಿರುವಿರಿ.

ಚಿದಾ:—ಸಭಾ! ವಿಶೇಷವೇನಾದರೂ ಉಂಟೇನು ? ನನಗೇನೋ ಪ್ರಬಲ ಸಂದೇಹವುಂಟಾಗಿದೆ.

ಸಭಾ:— ವಿಶೇಷವೇನಿದೆ ? ಆದೇಕೆ ಹೀಗೆ ಹೇಳುವೆ ?

ಚಿದಾ:— ಹಾಗಲ್ಲ; ರಾಜಶೇಖರನಿಂದ ಅಕ್ರಮವೇನಾದರೂ ನಡೆದಿರುವುದೊ?

ಸಭಾ:— ಅವನು ಆರಲ್ಲಿ ತಾನೇ ಅಕ್ರಮವನ್ನು ನಡೆಯಿಸಬಲ್ಲನು?

ಚಿದಾ:— “ ಬೆಕ್ಕಿನ ಕಣ್ಣು ಹಾಲಿನ ಮೇಲೆಯೇ. ” ಎಂಬಂತೆ ಮತ್ತಾರಮೇಲೆ? ನಿನ್ನ ಮೇಲೆಯೇ ನಡೆಯಿಸಿರಬೇಕು.

ಸಭಾ:— ಹಾಗೆ ಭಾವಿಸಲು ಸಾಧ್ಯವೆ ? ನನ್ನಲ್ಲಿ ಅಂತಹ ಅಕ್ರಮವು ತಮ್ಮ ಆಶೀರ್ವಾದ ಬಲವಿರುವವರೆಗೂ ನಡೆಯಲಾರದು.

ಚಿದಾ:—ಅವನು ಅವಿವಾಹಿತನಾಗಿರುವುದರಿಂದ ನಷ್ಟವೆಂದಾಡಿದುದರ ಅರ್ಥವೇನು?

ಸಭಾ:— ವಿವಾಹಿತರಾಗಿದ್ದರೆ ಒಂದು ಗೃಹರಾಜ್ಯಾಧಿಕಾರಿಯಾಗಿ ಸುಖಪಡುತ್ತಿದ್ದನು. ಅದರಿಂದ ಅವನು ಸುಖಿಯಾಗಿರಲಿಲ್ಲವೇನು? ಪ್ರಾಯಸಮರ್ಥರಾದವರು ಇತರ ಸ್ತ್ರೀಯರೊಡನೆ ಮಾತನಾಡಿ ಇಷ್ಟಾರ್ಥವನ್ನು ಹೊಂದುವುದೆಂದರೆ, ಬಹು ಕಷ್ಟಕರವಾದ ಕಾರ್ಯವೇ ಸರಿ.

ರಮಾ:— ನಾವೇನು ಮಾಡುವ ? ಈವರೆಗೂ ಅವನೇ ಮದುವೆಯಾಗಲೊಲ್ಲೆನೆಂದು ಹೇಳುತಿದ್ದುದರಿಂದ ಹೀಗಾಯಿತು. ಇಲ್ಲದಿದ್ದರೆ ಹೆಣ್ಣಿಗೇನು ಕಡಮೆಯೇ?

ಸಭಾ:— ಇನ್ನು ಮುಂದಾದರೂ ಹೀಗೆ ತಡೆಯಬಾರದು.

ರಮಾ:— ಇನ್ನು ಬಿಡುವರುಂಟೆ? ಅವನೊಪ್ಪಿದರೆ, ಇನ್ನು ಹದಿ

ನ್ನೈದೇ ದಿನಗಳೊಳಗಾಗಿ ವಿವಾಹವಾಗುವಂತೆ ಮಾಡುವೆನು.

ಸಭಾ:—ಹಾಗಾದರೆ, ನಾನು ಸುಖಿಯಾಗುವೆನು.

ಚಿದಾ:— ಈಗ ಎಲ್ಲವೂ ಅರ್ಥವಾಯಿತು. ಇಗಲೇ ಅವನೆಲ್ಲಿರುನೋ ಅಲ್ಲಿಗೆ ಹೋಗಿ, ವಿಚಾರಿಸಿಕೊಂಡು ಬಾ. ಸಭಾ ! ಅವನೊಪ್ಪಿದರೆ ಎಂಟು ದಿವಸಗಳಲ್ಲಿಯೇ ಮದುವೆಯಾದೀತು.

“ ಹಾಗೆಯೇ ಆಗಲಿ; ಈಗಲೇ ಹೋಗುವೆನು. ” ಎಂದು ಹೇಳಿ ಸಭೆಯು ಅಲ್ಲಿಂದ ಹೊರಟಳು.

“ ಮಾತಿನ ಸರಣಿಯಿಂದ ಮರ್ಮವು ತಿಳಿದಂತಾಯಿತು. ಇನ್ನು ನಾವು ಪ್ರತ್ಯಕ್ಷ ಪ್ರಮಾಣದಿಂದ ಪರೀಕ್ಷಿಸಬೇಕು.” ಎಂದು ರಮಾ-ಚಿದಾನಂದರು ಹೇಳಿಕೊಳ್ಳುತ್ತ ಹೊರಟು ಹೋದರು.

## ದ್ವಾದಶ ಪರಿಚ್ಛೇದ.

### ( ಪ್ರತ್ಯಕ್ಷಪ್ರಮಾಣ. )

ಪಿತ್ರಾಜ್ಞಾಪರಿಪಾಲನೆಯಲ್ಲಿ ನಿಸ್ಸೀಮಳಾದ ಸಭೆಯು ರಾಜಶೇಖರನು ಮಲಗಿದ್ದ ಕಿರುಮನೆಯೊಳಕ್ಕೆ ಹೊಕ್ಕಳು. ರಾಜಶೇಖರನು ಮಂಚದಮೇಲೆ ಮುಸುಕುಹಾಕಿಕೊಂಡು ಮಲಗಿದ್ದನು. ಕಿರುಮನೆಯಲ್ಲಿ ಮತ್ತಾರೂ ಇರಲಿಲ್ಲ. ಎಲ್ಲೆಲ್ಲಿಯೂ ನಿಶ್ಶಬ್ದ; ಆದರೆ, ಅಲ್ಲಿ ಆಡಿಗಡಿಗೂ ರಾಜಶೇಖರನ ಯಾತನಾಮಯವಾದ ನಿಟ್ಟುಸಿರಲ್ಲದೆ ಮತ್ತೇನೂ ಕೇಳಿಬರುತಿರಲಿಲ್ಲ.

ಸಭೆಯು ಕುತೂಹಲದಿಂದ ಮಂಚದ ಬಳಿಗೆಬಂದು ನಿಂತು “ರಾಜಶೇಖರ! ರಾಜಶೇಖರ!!” ಎಂದು ಎರಡುಸಾರಿ ಕೂಗಿದಳು. ಉತ್ತರವು ದೊರೆಯಲಿಲ್ಲ. ಬಹಳನೊಂದು ಕರುಣಾಸ್ವರದಿಂದ “ಅಣ್ಣಾ! ರಾಜಶೇಖರ!! ನಾನು, ಸಭೆ; ಕಣ್ತೆರೆ!” ಎಂದಳು. ಉತ್ತರವಿಲ್ಲ. “ವಿಧಾತ! ನೀನು ನಿಷ್ಪಕ್ಷಪಾತಿಯೆಂದು ಜನರಾಡುವರು; ಆ ಮಾತು ಸುಳ್ಳಾಗಿರಬೇಕು. ಹಾಗಿಲ್ಲದಿದ್ದರೆ, ಈ ಸುವರ್ಣಪುತ್ಥಲಿಯೂ, ವಿಧ್ಯಾವಂತನೂ ಆದ ಈ

ವ್ಯಕ್ತಿಯಲ್ಲಿ ಇಂತಹ ದುರ್ಗುಣವಿರುವಂತೆ ಮಾಡುತ್ತಿದ್ದೆಯಾ!" ಎಂದು. ರಾಜಶೇಖರನು ಮುಖದಮೇಲೆ ಹೊದೆದಿದ್ದ ಹೊದಿಕೆಯನ್ನು ತೆಗೆದು. "ಅಣ್ಣಾ! ರಾಜಶೇಖರ! ಇದೇನು, ನಿನ್ನ ಅವಿವೇಕದ ವ್ಯಾಪಾರ? ಉತ್ತರವಿಲ್ಲ! ಕಣ್ತೆರೆ!" ಎಂದಳು. (ಆದರೂ ಉತ್ತರವಿಲ್ಲ.)

ಸಭೆಗೆ ಕೋಪಬಂದಿತು. ಅವಳು "ಅಣ್ಣಾ! ಹಾಗಾದರೆ, ನಾನಿನ್ನು ಹೊರಡುವೆನು; ಮಾತನಾಡಲೊಲ್ಲನೆಂದು ಅಮ್ಮನೊಡನೆ ಹೇಳುವೆನು." ಎಂದು ಹೇಳಿ ಅಲ್ಲಿಂದ ಹೊರಡಲನುವಾದಳು.

ಆಗ ರಾಜಶೇಖರನು ಸಭೆಯ ಕೈಯನ್ನು ಹಿಡಿದೆಳೆದು ನಿಲ್ಲಿಸಿಕೊಂಡು ತನ್ನ ಕೆಂಡದಂತಿದ್ದ ಕಣ್ಣುಗಳನ್ನು ಅವಳ ಕಡೆಗೆ ತಿರುಗಿಸಿ "ಸಭಾ! ಸ್ವಲ್ಪ ಹಾಲುಬೇಕು" ಎಂದನು. ಸಭೆಯು ಹಾಲನ್ನು ತಂದುಕೊಟ್ಟಳು. ಹಾಲನ್ನು ಕುಡಿವಾಗ ಅನೇಕವಿಧವಾದ ಅಂಗಚೇಷ್ಟೆಗಳನ್ನು ಮಾಡಿದನು. ಅದರಿಂದ ಅವಳಿಗೂ ಭಯವಾಯ್ತು. ಅವಳು ಹಿಂದಕ್ಕೆ ಸರಿದಳು.

ರಾಜಶೇಖರನು ಅತಿ ನಮ್ರತೆಯಿಂದ "ಸಭಾ! ಇದೇಕೆ ಹಿಂದಕ್ಕೆ ಸರಿದೆ?" ಎಂದು ಕೇಳಿದನು.

ಸಭಾ:—ಹೋಗಬೇಡವೆ?

ರಾಜ:— ಹೋಗುವೆನೆಂದು ಹೇಳಲುಮಾತ್ರ ಬಂದೆಯೇನು?

ಸಭಾ:– ಅಲ್ಲ, ನಿನ್ನ ಸ್ಥಿತಿಯನ್ನು ತಿಳಿದು ತಂದೆಗೆ ಹೇಳಲು ಬಂದೆನು.

ರಾಜ:— ನೀನು ಬಾರದಿದ್ದರೆಯೇ ಚೆನ್ನಾಗಿತ್ತು. ಇನ್ನೆರಡು ಮೂರು ದಿನಗಳೊಳಗಾಗಿ ನನ್ನ ಹೆಣವನ್ನು ನೋಡುತ್ತಿದ್ದೆ. ಆಗಲಾದರೂ ನಿನಗೆ ಆನಂದವಾಗದೆ ಇರುತ್ತಿರಲಿಲ್ಲ.

ಸಭಾ:— ಏನು?

ರಾಜ:— ಈ ಕ್ಷೇಮ—

ಸಭಾ:— ನಾನು ಹೊರಡುವೆನು.

ರಾಜ:— ಹೊರಡಬೇಡ. ಒಂದು ಮಾತನ್ನು ಹೇಳುವೆನು. ಕೇಳಿ ಹೊರಡು. ಇಲ್ಲಿ ಹತ್ತಿರ, ಬಾ!

ಸಭಾ:–ಅಲ್ಲಿಗೆಬರಲಾರೆ! ಅದೇನು ಹೇಳು; ಇಲ್ಲಿಯೇ ಇರುವೆನು?

ರಾಜ:— ಅದೇಕೆ? ಭಯವೇ? ನಾನೇನು ಹುಲಿಯೋ?

ನಭಾ:— ಹುಲಿಗೆ ಹೆದರುವ ಪ್ರಾಣಿಯು ನಾನಲ್ಲ. ನೀನು ಹುಲಿ ಮಾತ್ರವಲ್ಲ; ಪರನಾರಿಯ ಕುಲ, ಕೀರ್ತಿ, ಪ್ರಾಣ, ಮಾನಗಳನ್ನು ಸುಲಭವಾಗಿ ಅಪಹರಿಸಬಲ್ಲ ಹೆಬ್ಬುಲಿ.

ರಾಜ:— ಅಹುದಹುದು. ನಾನು ಹೀಗೆ ಹೇಳುವರನೇಕರನ್ನು ಬಲ್ಲೆನು. ಇವೆಲ್ಲವೂ ಹೆಂಗಸರ ಶುಷ್ಕವೈರಾಗ್ಯನೀತಿ!

ನಭಾ:— ಹಾಗೆಂದರೆ, ನಿನ್ನ ಅಭಿಪ್ರಾಯವೇನು?

ರಾಜ:-ಪರಿಹಾಸದಿಂದ "ಸ್ತ್ರೀಚಿತ್ತವೇ ಆಶೆಗೆ ಜನ್ಮಸ್ಥಾನ; ಅವರ ಸ್ವಭಾವವೇ ಚಾಂಚಲ್ಯಬಾಣಪೀಠ. ಅವರಿಂದ ಹೊರಹೊರಡುವ ಬಾಹ್ಯ ವಿರಕ್ತಿಯ ಸ್ವಭಾವವನ್ನು ಅರಿಯದವನು ನಾನಲ್ಲ. ಬಾ, ಹತ್ತಿರಬಾ!!"

ನಭಾ:— ಹೇಗೆಬೇಕಾದರೂ ಹೇಳಿಕೊ! ನಾನು ಹೊರಡುವೆನು. ಸ್ತ್ರೀಸ್ವಭಾವವು ನೀನು ಊಹಿಸಿರುವಂತೆ ಕೆಟ್ಟದೆಂದೇತಿಳಿ; ಅದರಿಂದ ಉಂಟಾಗುವ ಫಲವೇನೆಂಬುದನ್ನಾದರೂ ಬಲ್ಲೆಯಾ?

ರಾಜ:— ಫಲವೇನು? ಪುರುಷರ ಚಿತ್ತದಲ್ಲಿ ತಮ್ಮ ವಿಷಯಕವಾದ ಪ್ರೇಮವು ಎಷ್ಟಿರುವುದೆಂಬುದನ್ನು ತಿಳಿಯಬೇಕೆಂದೇ ಹಾಗೆಮಾಡುವರು. ಪುರುಷರೂ ಅವರನ್ನು ಕಪಿಗಳಂತೆಭಾವಿಸಿ, ಅನೇಕ ಚೇಷ್ಟೆಗಳನ್ನು ಮಾಡಿ ಆಟವಾಡಿಸಿಬಿಡುವರು. ಆದರೆ, ನಭಾ! ನಾನು ನಿಜವಾಗಿಯೂ ಹೇಳುವೆನು; ಕೇಳು! ನಿನ್ನ ಮೇಲೆ ನನಗೆ ಅಪ್ರತಿಮ ಪ್ರೇಮವಿದೆ. ನನ್ನೀ ಅನಂತ ಪ್ರೀತಿಗೆ ಪ್ರತಿಯಾಗಿ ನಿನ್ನ ಹೃದಯದಲ್ಲಿ ಒಂದು ರವೆಯಷ್ಟಾದರೂ ಎಡೆಕೊಟ್ಟೆಯಾದರೆ, ಅದನ್ನೇ ನಾನು ಅನಂತವಾಗಿ ಭಾವಿಸುವೆನು.

ನಭಾ:— ನನ್ನ ಹೃದಯದಲ್ಲಿ ನಿನ್ನ ವಿಷಯವಾಗಿರುವ ಪ್ರೀತಿಗೆ ಅಂತವಿಲ್ಲವೆಂದು ಭಾವಿಸು. ರಾಜಶೇಖರ! ನಾನು ನಿಜವನ್ನಾಡುವೆನೆಂದು ತಿಳಿ.

ರಾಜ:— ಎಂತಹ ಪ್ರೀತಿ!

ನಭಾ:—ನೈಜವಾದ ಸೋದರಪ್ರೇಮ. ಚ್ಯುತಿಯಿಲ್ಲದ ಸೋದರ ವಾತ್ಸಲ್ಯವು ಈ ಹೃದಯಾವರಣದಲ್ಲಿದೆ.

ರಾಜ:— ಬೇಡ, ಆ ಪ್ರೇಮವು ನನಗೆ ಬೇಡ.

ನಭಾ:—ಆ ಪ್ರೇಮವು ಬೇಡವಾದರೆ ಬಿಡು, ಬೇರೆಬಗೆಯ ಪ್ರೇಮಕ್ಕೆ ಇಲ್ಲಿ ಆಸ್ಪದವಿಲ್ಲ. ಸತೀತ್ವವನ್ನು ಮಾತ್ರ ಕಳೆದುಕೊಳ್ಳಲಾರೆ.

ರಾಜ:— ಇದೆಲ್ಲವೂ ಬಾಹ್ಯಾಡಂಬರ; ಸ್ತ್ರೀಜನಾಂಗವೇ ಹಾಗೆ.

ನಭಾ:— ಎಲ್ಲ ಸ್ತ್ರೀಯರನ್ನೂ ಒಂದೇರೀತಿ ಭಾವಿಸಿ ನಿಂದಿಸಬೇಡ.

ರಾಜ:— ಪಂಚಕನ್ಯೆಯರಲ್ಲಿ ಒಬ್ಬಳಾದ ದ್ರೌಪದಿಯೇ ಹೇಳಿರುವಳು. ಅಂತಹುದರಲ್ಲಿ ನಿಮ್ಮ ಪಾಡೇನು?

ನಭಾ:— ಅದೆಲ್ಲವೂ ಪುರಾಣ. ನಮ್ಮ ಅಂಗನಾನಿವಹವು ದಾರಿ ತಪ್ಪದೆ ಇರಲೆಂದು ಎಚ್ಚರಿಕೆಗಾಗಿ ಹೇಳಿದುದು ಮಾತ್ರ. ಅದು ನನಗೆ ಬೇಡ; ನಾನು ಹೊರಟೆ.

ರಾಜ:— ನಿನ್ನೀನಿಷ್ಠುರ ವಾಕ್ಯಗಳು ನನ್ನ ಹೃದಯವನ್ನು ಚುಚ್ಚಿ ಚಿರದುಃಖಿಯನ್ನಾಗಿ ಮಾಡುತಿವೆ. ನಭಾ! ಸರಳತೆಯನ್ನು ವಹಿಸು.

ನಭಾ:—ರಾಜಶೇಖರ! ನಭೆಯ ಹೃದಯವು ಯಾವಾಗಲೂ ಸರಳವಾದುದೇಸರಿ. ಅವಳ ಬಾಯಿಂದ ಹೊರಹೊರಡುವ ಸರಳವಾಕ್ಯಪರಂಪರೆಯು ದುರ್ಬೋಧಕರನ್ನು ಚುಚ್ಚುವುದು. ಅದು ಎಷ್ಟುಮಾತ್ರಕ್ಕೂ ಎಂದಿಗೂ ಕಡಿಮೆಯಾಗದು.

ರಾಜ:— ನಭಾ! ಹಾಗಾದರೆ, ನಾನು ಸಾಯಲೆ ?

ನಭಾ:— ಏಕೆ ?

ರಾಜ:— ಮತ್ತೇನುಮಾಡಲಿ ?

ನಭಾ:— ವಿವಾಹವನ್ನು ಮಾಡಿಕೊಂಡು ಸುಖವಾಗಿ ಬಾಳು. ಇನ್ನೊಂದು ಪಕ್ಷದೊಳಗಾಗಿಯೇ ಈ ಗೃಹದಲ್ಲಿಯೇ ವಿವಾಹವು ನಡೆಯಲು ಏರ್ಪಡಿಸಿರುವೆನು.

ರಾಜ:— ಆರೊಡನೆ? ನಿನ್ನೊಡನೆಯೊ?

ನಭಾ:— ಅದು ಸ್ವಪ್ನೇಪಿ ದುರ್ಲಭ! ಎಂತಹ ಗಂಡಾಂತರಗಳು ಬಂದರೂ ಸರ್ವಸ್ವವಾದ ಸತೀತ್ವವನ್ನು ಮಾತ್ರ ಕಳೆದುಕೊಳ್ಳೆನು.

ರಾಜ:—ನಿಜವೊ?

ನಭಾ:—ಸಂದೇಹವೇನು?

ರಾಜಶೇಖರನು ಮಂಚದಿಂದ ಮೃಗದಂತೆ ಹಾರಿ ಬಾಗಿಲಬಳಿಗೆ

ಒಂದು ಅದಕ್ಕೆ ಅಡ್ಡಲಾಗಿ ನಿಂತು ಕಣ್ಣುಗಳನ್ನು ಮತ್ತಷ್ಟು ಕೆಂಪಗೆ ಮಾಡಿಕೊಂಡು ತಿರುಗಿಸುತ್ತ " ನಭಾ ! ಈಗ, ಸಂದೇಹವಿಲ್ಲವೊ ? " ಎಂದನು.

ನಭೆಗೆ ಅತ್ಯಾಗ್ರಹವುಂಟಾಯಿತು. ಆದರೂ ತಾಳ್ಮೆಯನ್ನೇ ವಹಿಸಿದಳು; ದರ್ಪಿತ ಸ್ವರದಿಂದ ಹೇಳಿದಳು:— "ಕಾಮಾತುರರಿಗೆ ಈ ನಡತೆಯು ಸರಿಯಾದುದೇ ! ಅದು ಅವರ ದೋಷವಲ್ಲ. ಆ ವಿಷಯವನ್ನು ನಾನು ಬಲ್ಲೆನು. ನೀನು ನನ್ನ ಸತೀತ್ವಕ್ಕೇನೂ ಕುಂದನ್ನು ತರಲಾರೆ. ವೃಥಾ ಕಷ್ಟನಿಷ್ಠುರಗಳೇಕೆ? ವಯಸ್ಸು, ಗುಣ, ವಿದ್ಯೆ, ಕುಲಶೀಲಗಳಲ್ಲಿ ನಿನಗನುಕೂಲಳಾದೊಬ್ಬಳನ್ನು ವಿವಾಹವಾಗಿ ಸೌಖ್ಯದಿಂದ ಬಾಳಿಕೊಂಡಿರು. ಚಿರಸನ್ಯಾಸವ್ರತಧಾರಿಣಿಯಾದ ವಿರಾಗಿಣಿಯಲ್ಲೇಕೆ ನಿನಗೆ ಹಾಸ್ಯ ವಿನೋದಗಳು!"

ರಾಜ:—ನನಗೆ ತತ್ವಬೋಧೆಯು ಬೇಕಾಗಿಲ್ಲ. ನಾನು ಹೇಳುವಂತೆ ನೀನು ಕೇಳುವೆಯೋ ಇಲ್ಲವೋ?

ನಭಾ:—ಮೂರ್ಖ, ನಾನು ಇಲ್ಲಿಂದ ಹೋಗುವುದು ದೊಡ್ಡದಲ್ಲ. ನೀನು ಎಚ್ಚರಿಕೆಯಿಂದ ಇರು. ಹೋಗಲನುವಾಗಿರುವ ನನ್ನನ್ನು ನೀನು ಹಿಡಿದು ನಿಲ್ಲಿಸಲಾರೆ. ನಿನ್ನೀವಿಪರೀತ ಪ್ರಜ್ಞೆಗೆ ಧಿಕ್! ಧಿಕ್!! ನಿನ್ನಂತಹರ ಪಾಂಡಿತ್ಯ ಪ್ರಭೆಗೆ ಧಿಕ್ಕಾರವಿರಲಿ. ಹೋಗು, ಹುಚ್ಚ ! ನಿನಗಷ್ಟು ಉನ್ಮಾದವಿದ್ದರೆ, ವಿಧವಾಶ್ರಮದ ಸ್ವಯಂಪ್ರಭುತ್ವದವರ ಮರೆಹೋಗು, ನಡೆ !"

ನಭೆಯು ಬಾಗಿಲನ್ನು ತೆಗೆಯಲು ಕೈನೀಡಿದಳು. ರಾಜಶೇಖರನು ಹುಚ್ಚನಂತೆ ಅವಳ ಕೈಗಳನ್ನು ಹಿಡಿದು ನಿಲ್ಲಿಸಲು ಪ್ರಯತ್ನಪಟ್ಟನು. ನಭೆಯ ಶರೀರವು ರಕ್ತವರ್ಣವನ್ನು ತಾಳಿತು. ಆದರೂ ಹೃದಯದಲ್ಲಿದ್ದ ಶಾಂತಿರಸವು ಮಾತ್ರ ಕಡಮೆಯಾಗಲಿಲ್ಲ. ಸತೀತ್ವರಕ್ಷಣಾಸಕ್ತಿಯು ಪ್ರಬಲವಾದುದರಿಂದ ಅವಳು ರಾಜಶೇಖರನ ಬಾಹುಗಳನ್ನು ಬಲವಾಗಿ ಹಿಡಿದೆಳೆದು ಮಂಚದಮೇಲೆ ನೂಕಿ ಕದಕ್ಕೆ ತಾನೇ ಅಡ್ಡವಾಗಿ ನಿಂತು, "ಭ್ರಾಂತ! ಎಂತಹ ಬಲಿಷ್ಟನಾದರೂ ಕಾಮಾತುರನಾದರೆ, ನಿಶ್ಶಕ್ತನಾಗುವನೆಂಬುದಕ್ಕೆ ನಿದರ್ಶನ ದೊರೆತುದೆ? ಹುಚ್ಚ ! ಇಂತಹ ಅಕೃತ್ಯಕ್ಕೆ ನಿನ್ನ

# ದ್ವಾದಶ ಪರಿಚ್ಛೇದ.

( ಈಗೇನುಮಾಡಬೇಕು? )

**ಚಿದಾನಂದ** ರಮಾಮಣಿಯರು ಸಭೆಯ ಮನೋದಾರ್ಢ್ಯ, ಕಾರ ಸಾಧನಾಚಾತುರ್ಯಾದಿಗಳನ್ನು ಕುರಿತು ಮಾತನಾಡುತ ಕುಳಿತಿದ್ದರು. ಆ ವೇಳೆಗೆ ಸರಿಯಾಗಿ ಅಂಚೆಯ ಮನುಷ್ಯನು ಪತ್ರವನ್ನು ತಂದುಕೊಟ್ಟು ಹೋದನು. ಚಿದಾನಂದನು ನೋಡಿದನು. ಪತ್ರಪಠನದಿಂದ ಶಂಕರನಾಥನಿಗೆ ಸನ್ನಿಪಾತಜ್ವರವು ಬಂದು ಬದುಕುವುದೇ ಕಷ್ಟವೆಂಬ ವರ್ತಮಾನವೂ ಶರಾವತಿಗೆ ಉಬ್ಬಸಜಾಡ್ಯವು ಹೆಚ್ಚಿ ಏಳಲಾರದೆ ಮಲಗಿರುವಳೆಂಬ ಸಂಗತಿಯೂ ಮುಖದರ್ಶನಾಪೇಕ್ಷೆಯಿದೆಯೆಂಬ ಅಪೇಕ್ಷೆಯೂ ತೋರಿಬಂದಿತು. ಆದುದರಿಂದ ಚಿದಾನಂದ ರಮಾಮಣಿಯರು ಹೊರಡಬೇಕೆಂದು ನಿಶ್ಚಯಿಸಿದರು.

"ಈಗೇನು ಮಾಡಬೇಕು?" ಎಂಬ ಪ್ರಶ್ನೆಯು ಚಿದಾನಂದನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಪ್ರತ್ಯುತ್ತರವಾದರೂ ಏನು? ಹುಡುಗರನ್ನು ಕರೆದುಕೊಂಡು ಹೋದರೆ, ವಿದ್ಯೆಯು ಕೆಡುವುದು. ಬಿಟ್ಟುಹೋದರೆ ಸಭೆಯಲ್ಲದೆ ಬೇರೆ ಪೋಷಕರಿಲ್ಲ. ಸಭೆಯನ್ನೂ ಆಳುಗಳನ್ನೂ ಇಲ್ಲೇ ಬಿಟ್ಟು ಹೋಗುವುದುಚಿತವೆಂದು ನಿರ್ಧರಿಸಬಹುದು. ಆದರೆ, ಸಭೆಯೊಬ್ಬಳೇ ಇಲ್ಲಿ ಕಾರ್ಯಗಳನ್ನು ನಿರ್ವಹಿಸಬಲ್ಲಳೊ?—ಎಂಬಿವೇ ಮೊದಲಾದ ತರ್ಕವಿತರ್ಕಗಳು ನಡೆದು ಕೊನೆಗೆ ಸಭೆಯನ್ನೂ ಹುಡುಗರನ್ನೂ ಬಿಟ್ಟು ಪ್ರಯಾಣಮಾಡುವುದೇ ಉಚಿತವೆಂದು ನಿರ್ಧರವಾಯ್ತು. ಅದರಂತೆಯೇ ಹೊರಟರು. ನಿರಂಜನನಿಗೂ ವರ್ತಮಾನ ತಿಳಿಯಿತು. ಅವನೂ ಬಂದುಬಿಟ್ಟನು. ಮೂರುಮಂದಿಯೂ ಸಭೆಗೆ ಯಾಜಮಾನ್ಯವನ್ನು ವಹಿಸಿ ಹೊರಟರು.

" ಈಗೇನು ಮಾಡಬೇಕು ? " ಎಂಬ ಆಲೋಚನೆಯಿಂದಲೇ ರಾಜಶೇಖರನು ಮನೆಯನ್ನು ಬಿಟ್ಟನು. ಊರೂರು ಬೀದಿಬೀದಿಗಳನ್ನು ಸುತ್ತಿ ತಾಯಿಯ ಮನೆಯನ್ನು ಸೇರಿದನು. ಚಿದಾನಂದನಿಂದ ಇವನು

ತಿರಸ್ಕೃತನಾದನೆಂಬ ವರ್ತಮಾನವು ಅವಳಿಗೆ ಮೊದಲೇ ತಿಳಿದಿದ್ದುದರಿಂದ ಅವಳು ಮನೆಗೆ ಸೇರಿಸಲಿಲ್ಲ. ರಾಜಶೇಖರನು ಭ್ರಾಂತನಾಗಿ ಏನುಮಾಡ ಬೇಕೆಂಬುದನ್ನು ತಿಳಿಯದೆ ಹುಚ್ಚನಂತೆ ಅಲೆಯಲಾರಂಭಿಸಿದನು.

ಸುಮಾರು ಎರಡುವಾರ ಅಲೆದು ಅನ್ನನೀರಿಲ್ಲದೆ ಬೇಸತ್ತನು. ದುಷ್ಟರ ಮನಸ್ಸಿನಲ್ಲಿ ಪದೇಪದೇ ನಾನಾವಿಧವಾದ ದುರಾಲೋಚನೆಗಳು ಹೊರಡುತ್ತಲೇ ಇರುವುವು. ಅವಕ್ಕೆ ತಕ್ಕಂತೆಯೇ ಅವರ ದುಷ್ಕಾರ್ಯ ಗಳೂ ಪ್ರತಿಕ್ಷಣದಲ್ಲಿಯೂ ಫಲಹೊಂದುವಂತೆ ಕಾಣುವುವು. ಹಾಗೆಯೇ ರಾಜಶೇಖರನಿಗೆ ಒಂದು ಆಲೋಚನೆಯು ಭಾಸವಾಯಿತು " ನಭೆಯನ್ನು ಕಂಡರೆ ಶರಾವತಿಗೆ ಆಗುವುದಿಲ್ಲ. ಶರಾವತಿಯು ನಭೆಯನ್ನು ಪ್ರಯತ್ನ ಪುರಸ್ಸರವಾಗಿಯೂ ದ್ವೇಷಿಸುವಳು. ಅವಳ ಕೇಡನ್ನು ಹಾರೈಸುವಳು. ಆದುದರಿಂದ ನಾನು ಅವಳ ಬಳಿಗೆ ಹೋಗಿ ನಭೆಯ ವಿಚಾರದಲ್ಲಿ ನನಗಿ ರುವ ದೃಢಸಂಕಲ್ಪವನ್ನು ತಿಳಿಸಿದರೆ, ಸಹಾಯ ಮಾಡದಿರಳು. ಆದುದರಿಂದ ಅಲ್ಲಿಗೆ ಹೋಗಿ ಕಾರ್ಯವನ್ನು ಸಾಧಿಸುವಂತೆ ಪ್ರಯತ್ನಪಡುವುದೇ ಮೇಲು. " ಎಂದು ದೃಢಮಾಡಿಕೊಂಡು ಶಂಕರಪೇಟೆಗೆ ಹೊರಟನು. ಶಂಕರನಾಥ ಶರಾವತಿಯರಿಗೆ ರೋಗವೆಂಬ ವರ್ತಮಾನವೂ, ಚಿದಾನಂದ ರಮಾಮಣಿಯರು ಅಲ್ಲಿಗೆ ಬಂದಿರುವರೆಂಬ ಸಂಗತಿಯೂ ತಿಳಿದುಬಂದಿತು. ಕೂಡಲೇ ಅವನ ಮನಸ್ಸಿನಲ್ಲಿ ಆಲೋಚನಾತರಂಗಗಳು ಹೊರಡಲಾರಂ ಭವಾದುವು:— " ದೇವರು ನನಗೆ ಸಹಾಯಮಾಡನೇ? ಈಗ ಅಲ್ಲಿ ನಭೆಯೊಬ್ಬಳೇ ಇರುವಳು. ಹುಡುಗರು ಏನೂ ಮಾಡಲಾರರು. ನನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಇದಕ್ಕಿಂತ ಉತ್ತಮವಾದ ಸಮಯವು ದೊರಕದು. ಈಗಲೇ ಅಲ್ಲಿಗೆ ಹೋಗಿ ಸವಿಮಾತುಗಳಿಂದಲೋ, ದುಡ್ಡಿ ನಿಂದಲೋ, ಬಲವದ್ಬಂಧನದಿಂದಲೋ, ನಭೆಯನ್ನು ವಶಪಡಿಸಿಕೊಂಡು, ಅವಳೊಡನೆ ದೇಶಾಂತರ ಹೊರಡುವುದೇ ಸರ್ವೋತ್ತಮವಾದುದು." ಎಂದು ನಿಶ್ಚಯಿಸಿ ಹೊರಟನು.

ಸಂಧ್ಯಾಕಾಲದಲ್ಲಿ ನಭಾಮಣಿಯು ರಮಾನಂದ ಭಗವಾನಂದರೊಡನೆ ಉದ್ಯಾನದಲ್ಲಿ ಹೊತ್ತುಕಳೆಯುತಿದ್ದಳು. ಶಂಕರಪೇಟೆಯಿಂದ ಪತ್ರವು ಬಂದು ತಲಪಿತು; ನೋಡಿದಳು.

‘ ನಭಾ!

ಆಶೀರ್ವಾದಗಳು.

ಇಲ್ಲಿ ಅಣ್ಣನ ಕಾಯಿಲೆಯು ಕ್ರಮಕ್ರಮವಾಗಿ ಗುಣವಾಗುತಿರು ವುದು. ಜಾಗ್ರತೆಯಾಗಿಯೇ ಹೊರಟುಬರುವೆನು. ಇಲ್ಲಿಗೆ ಬಂದುದು ಮೊದಲು ಅತ್ತಿಗೆಯು ಅಸೂಯೆಯು ಅತಿಯಾಗುತ್ತಿರುವುದು. ಮಾಡತಕ್ಕದೇನು? ಅಣ್ಣನಿಗಾಗಿ ಪ್ರಾಣವನ್ನಾದರೂ ಕೊಡುವುದು ನನ್ನ ಕರ್ತವ್ಯಕರ್ಮ. ಮನೆಯಕಡೆ ಎಚ್ಚರವಾಗಿರುವುದು.

ಇತಿ—ನಿನ್ನ ಚಿಕ್ಕಪ್ಪ

ಚಿದಾನಂದ”

ಪರಮಾನಂದದಿಂದ ಈ ಸಂಗತಿಯನ್ನು ಸೋದರರಿಗೆ ತಿಳಿಸಿದಳು. ಅಷ್ಟರಲ್ಲಿಯೇ ಭಗವಾನಂದನ ಮಿತ್ರನೊಬ್ಬನು ಬಂದು ಅವನನ್ನೂ ರಮಾನಂದನನ್ನೂ “ಫುಟ್‌ಬಾಲ್ ಮ್ಯಾಚ್” ನೋಡಲು ಕರೆದುಕೊಂಡು ಹೊರಟುಹೋದನು. ನಭೆಯೊಬ್ಬಳೇ ತೋಟದ ಹಿಂದುಗಡೆ ಉಳಿದಳು. ಸೂರ್ಯನು ಅಸ್ತಂಗತನಾಗುವುದರಲ್ಲಿದ್ದರೂ ಕೃಷ್ಣಪಕ್ಷವಾದುದರಿಂದ ಕತ್ತಲೆಯಾಗುತ್ತಿದ್ದಿತು. ನಭೆ ಶಂಕಿತೆಯಾಗಿ ಗೃಹಾಭಿಮುಖಳಾದಳು. ಒಂದೆರಡಡಿಗಳಿಡುವುದರೊಳಗಾಗಿಯೇ ಹಿಂದಿನಿಂದ ಯಾರೋ ತನ್ನ ತಲೆಯ ಕೂದಲನ್ನು ಹಿಡಿದು ನಿಲ್ಲಿಸಿದಂತಾಯಿತು. ಹಿಂದಿರುಗಿ ನೋಡಿದಳು. ಭಯ, ವಿಸ್ಮಯ, ಕ್ಲೇಶ, ರೋಷಗಳು ಏಕಕಾಲದಲ್ಲಿ ಉತ್ಪನ್ನವಾಗಿ ಭ್ರಾಂತಳಂತಾದಳು. ಅವಳ ಕಣ್ಣು ಮುಚ್ಚಿತು. ಪ್ರಯತ್ನಪುರಸ್ಸರವಾಗಿ ತೆರೆದಳು. ನೋಡಿದಳು. ಉನ್ಮಾದರೋಗ ಪೀಡಿತನಾದ ರಾಜಶೇಖರನು ತನ್ನ ತಲೆಕೂದಲನ್ನು ಹಿಡಿದಿರುವುದನ್ನು ಕಂಡಳು. “ ಈಗೇನು ಮಾಡಬೇಕು?” ಎಂಬ ಪಶ್ನೆಯು ಅವಳ ಹೃದಯದಲ್ಲಿ ಉತ್ಪನ್ನವಾಯ್ತು. ದರ್ಪದಿಂದ ಕಾರ್ಯವು ಕೆಡುವುದೆಂದು ತಿಳಿದಳು. ಸತೀತ್ವರಕ್ಷಣೆಗೆ ಸಮಯೋಚಿತ ಉಪಾಯವೂ ಬೇಕೆಂದು ದೃಢಮಾಡಿ ಕೇಳಿದಳು:— “ರಾಜಶೇಖರ! ಇಷ್ಟುದಿವಸ ಎಲ್ಲಿಹೋಗಿದ್ದೆ? ನನ್ನ ತಲೆಯ ಕೂದಲನ್ನು ಬಿಡು.”

ರಾಜ:— ಬಿಡುವೆನು. ಈಗಲಾದರೂ ನಿನ್ನ ಇಷ್ಟವೇನು? ಹೇಳು!

ನಭಾ:— ಹೇಳುವುದೇನು? ಅಂದೇ ನನ್ನ ಇಷ್ಟವನ್ನು ಸ್ಪಷ್ಟಪಡಿಸಿರುವೆನು.

ರಾಜಶೇಖರ "ಹಠಮಾಡಿ ಕೆಡಬೇಡ. ಈ ಸಮಯವು ಎಂತಹದೆಂಬುದನ್ನು ನೋಡು. ಸಮ್ಮತಿಸದಿದ್ದರೆ ಮುಂದೇನಾಗುವುದೆಂಬುದನ್ನು ಆಲೋಚಿಸು. ತಪ್ಪಿಸಿಕೊಂಡು ಹೋಗುವುದಾದರೆ ಪ್ರಮಾದವು ತಪ್ಪದು. ಇದೋ, ನಾನು ಎಂದಿನಂತೆ ಇಂದು ಬರಿಯ ಕೈಯಲ್ಲಿ ಬಂದಿಲ್ಲ. ನೋಡು." ಎಂದು ಹೇಳುತ್ತ ಒಳಗಿನ ಜೇಬಿನಲ್ಲಿದ್ದ ಪಿಸ್ತೂಲನ್ನು ತೆಗೆದು ತೋರಿಸಿದನು.

ನಭೆಗೆ ಹೆದರಿಕೆಯಾಯಿತು. ಆದರೂ ಅವಳು ಸಾಮಾನ್ಯಸ್ತ್ರೀಯಲ್ಲ; ದೃಢವಾಗಿನಿಂತು ಹೇಳಿದಳು:— "ಮೂರ್ಖ! ನನಗೆ ತಪ್ಪಿಸಿಕೊಳ್ಳುವ ಇಷ್ಟವುಂಟಾದರೆ, ನೀನಾಗಲೀ, ನಿನ್ನ ಪಿಸ್ತೂಲಾಗಲೀ, ನಿನ್ನ ದರ್ಪಯುಕ್ತನುಡಿಗಳಾಗಲೀ ನಿಲ್ಲಿಸಲಾರವು. ಈಗ ನಾನು ಓಡಿಹೋಗುವ ಸಂದರ್ಭವಾದರೂ ಏನು? "

ರಾಜ:— ಚೆನ್ನಾಗಿಯೇ ಹೇಳಿದೆ! ಇಲ್ಲಿ ಯಜಮಾನರಾರೂ ಇಲ್ಲ. ಶಂಕರಪೇಟೆಯಿಂದ ಬರುವುದಕ್ಕೂ ವಿಳಂಬವಾಗುವುದು. ನೀನು ನನ್ನ ಮಾತನ್ನು ಕೇಳುವುದಾದರೆ, ಎಲ್ಲಿಯಾದರೂ ಸುಖವಾಗಿರಬಹುದು. ಅಥವಾ ಮತ್ತೆಲ್ಲಿಯಾದರೂ ಹೋಗಿ 'ಆನಂದದಿಂದ ಕಾಲವನ್ನು ಕಳೆಯಬಹುದು. ಏನು ಹೇಳುವೆ?

ನಭಾ:—ಹೋ! ನಿಜ! ನಿನ್ನ ಆಲೋಚನೆಯು ಬಹಳ ಒಳ್ಳೆಯದು. ಆದರೆ, ನಾನು ಎಲ್ಲಿಗೂ ಬರಲಾಗುವುದಿಲ್ಲ. ಇಲ್ಲಿಯೇ ನಾವಿಬ್ಬರೂ ಇದ್ದು ಕಾರ್ಯವನ್ನು ಸಾಧಿಸಬಹುದು. ಹೇಗಾದರೂ,

ರಾಜ:— ನೋಡು, ಪ್ರತಿಯಾಡುವೆ, ಜೋಕೆ! ನೀನು ನನ್ನ ಇಷ್ಟದಂತೆ ನಡೆಯದಿದ್ದರೆ, ಇಗೋ, ನೀನು ಸಾಯುವೆ.

ನಭಾ:— ನಾನು ಸಾಯಲು ಸಿದ್ಧಳಾಗಿಯೇ ಇರುವೆನು. ನಿನ್ನ ಮನಬಂದಂತೆ ಮಾಡಬಹುದು. ಹುಟ್ಟಿದವರು ಸಾಯಲೇಬೇಕು. ಪರರ ಸುಖಕ್ಕಾಗಿ ಪ್ರಾಣತ್ಯಾಗಮಾಡುವುದೂ ಪುಣ್ಯಪ್ರದವಾದುದು. ಪತಿ

ದ್ರೋಹಪಾತಕಕ್ಕಿಂತ ಅದು ಮೇಲೆಂದು ದೃಢವಾಗಿಯೂ ಹೇಳಬಲ್ಲೆ ನು; ಮಾಡು, ಆ ಕೆಲಸವನ್ನು ಮೊದಲು ಮಾಡು. ಆದರೆ ನೀನು ಮಾತ್ರ, ಇನ್ನೂ ಕೆಲವುಕಾಲ ಜೀವಿಸಿ ಫಲಾನುಭವವಾಡುತ್ತಿರಬೇಕಾದೀತು?

ರಾಜ:— ಏನು? ನಿನ್ನ ಸತೀತ್ವಕ್ಕೆ ಕುಂದುತರದೆ, ಆ ಕೆಲಸವನ್ನು ಮಾಡುವೆನೆಂದು ತಿಳಿದಿರುವೆಯೋ? ಹಾಗೆ ಭಾವಿಸದಿರು. ಹೆಚ್ಚು ಮಾತಾಡಲು ಅವಕಾಶವಿಲ್ಲ. ಬೇಗಹೇಳು ಸಮ್ಮತಿಸದಿದ್ದರೆ ಬಲಾತ್ಕಾರ ದಿಂದ ನಿನ್ನ ಮಾನಹಾನಿಮಾಡಿ ಬಳಿಕ ನಿನ್ನನ್ನು ಕೊಂದು ನಾನೂ ಸಾಯುವೆನು.

ಸಭೆಗೆ ಹೃದಯವು ತಲ್ಲಣಿಸಿತು. ಮುಂದೇನುಮಾಡಬೇಕೆಂಬುದು ತೋರಲಿಲ್ಲ. "ಬೀಸುವ ದೊಣ್ಣೆಏಟು ತಪ್ಪಿದರೆ ಸಾಸಿರವರ್ಷದ ಆಯು ಸ್ಸು" ಎಂಬ ಗಾದೆಯನ್ನು ನೆನೆದು ಆಗಿನ ಆಪತ್ತನ್ನು ದಾಟಲು ಉಪಾ ಯವನ್ನು ಯೋಚಿಸಿ ನಡುಗುತ್ತ ಹೇಳಿದಳು:—"ರಾಜಶೇಖರ! ಆಲೋ ಚಿಸಬೇಡ. ನಿನ್ನ ಕಾರ್ಯವು ಈದಿನ ರಾತ್ರಿ ಕೈಕೂಡುವುದು. ನೀನು ಈದಿನ ಈ ಊರಿನಲ್ಲಿಯೇ ಇರು."

ರಾಜಶೇಖರನಿಗೆ ಆನಂದದಿಂದ ಹುಚ್ಚು ಹಿಡಿದಂತಾಯಿತು. ಅವನು ಹುಚ್ಚನಂತೆ "ಈದಿನ ನನ್ನ ಸಂಕಲ್ಪವನ್ನು ಸಿದ್ಧಿಗೊಳಿಸುವಿಯೋ? ಸರಿ; ಸರಿ." ಎಂದು ಮೂರುಬಾರಿ ಕೇಳಿ ಅವಳಿಂದ ಆಣೆಯನ್ನು ತೆಗೆದು ಕೊಂಡು ಅವಳ ಕೇಶಗುಚ್ಛವನ್ನು ಬಿಟ್ಟು ನಿಂತನು.

ಸಭೆ ಸಮಾಧಾನದಿಂದ "ರಾಜಶೇಖರ! ಹೊರಡು, ನಿನ್ನ ಕೆಲಸಗ ಳನ್ನೆಲ್ಲ ತೀರಿಸಿಕೊಂಡು ರಾತ್ರಿ ೯ ಘಂಟೆಯವೇಳೆಗೆ ಬಾ! ನಾನು ಬೀದಿ ಯ ಬಾಗಿಲ ಕಿರುಮನೆಯಲ್ಲಿಯೇ ಇರುವೆನು ಆಮೇಲೆ ನಾವೆಲ್ಲಾದರೂ ಹೊರಟುಹೋಗೋಣ" ಎಂದು ಹೇಳಿದಳು.

ಅವಳ ಆ ಮುಖಭಾವವನ್ನು ನೋಡಿ ಭ್ರಾಂತನಾದ ರಾಜಶೇಖರನು ಅವಳ ಮಾತೆಲ್ಲವೂ ನಿಜವೆಂದೇ ನಂಬಿ ಆನಂದದಿಂದ ಅಲ್ಲಿಂದಾಚೆಗೆ ಹೊರಟುಹೋದನು.

"ಚಿಂತೆ"ಗೂ 'ಚಿತೆ'ಗೂ ಸ್ವಲ್ಪವೇ ವ್ಯತ್ಯಾಸವಾದರೂ ಅವೆರಡೂ

ಮಾಡುವಕಾರ್ಯವು ಪರಸ್ಪರ ಸಂಬಂಧವುಳ್ಳುದೆಂದು ಹಿರಿಯರಾಡುವ ಮಾತೆಂದಿಗೂ ಸುಳ್ಳಾಗದು. ಚಿತೆಯು ಮೃತನಾದವನ ಜಡದೇಹವನ್ನು ಸುಡುವುದಾದರೆ ಚಿಂತೆಯು ಜೀವವಿರುವವರನ್ನೇ ಸುಡುವ ಚಿಂತೆಯಾಗಿರುವುದು. ಚಿತೆಯು ದೇಹದ ಮೇಲ್ಭಾಗವನ್ನೆಲ್ಲ ದಹಿಸಿ ಬೂದಿಮಾಡಿ ಅನಂತರ ಹೃದಯವನ್ನು ಸುಡುವುದಾದರೆ, ಚಿಂತೆಯು ಹೃದಯದಿಂದಲೇ ಮನುಷ್ಯನನ್ನು ಸುಡಲಾರಂಭಿಸುವುದು. ಹೃದಯಮಧ್ಯದಲ್ಲಿ ಆರಂಭವಾಗಿ ದೇಹವಾದ್ಯಂತವನ್ನೂ ಅಂತರಂಗದಲ್ಲಿಯೇ ಸುಡುತ್ತ, ಬಾಯಿ ಮೂಗುಗಳಿಂದ ನಿಟ್ಟುಸಿರೆಂಬ ಹೊಗೆಯನ್ನು ಹೊರಡಿಸುತ್ತ ಸುಡುವುದು. ಮೊದಲು ಇದು ಮಿದುಳನ್ನು ಕಾಯಿಸಿ ಕರಗಿಸಿಬಿಡುವುದು; ರಕ್ತವನ್ನು ಶೋಷಿಸುವುದು. ಅನಂತರ ಆವಿಯಾಗಿ ಅದನ್ನು ಹಾರಿಸುವುದು. ಹಾ! ಚಿಂತೆ!! ನಿನ್ನ ಪ್ರತಾಪವೂ ಅತಿಯಾದುದೇ!

ನಭೆಗೆ ಚಿಂತೆಯು ಅತಿಯಾಯಿತು. ಅವಳೇನುಮಾಡಬೇಕೆಂಬುದನ್ನು ತಿಳಿದು ನಿರ್ಧರಿಸಲು ಶಕ್ತಳಾಗಲಿಲ್ಲ. ಮನೆಗೆ ಹೋದಳು. ಆಳುಗಳಲ್ಲಿ ಒಬ್ಬಿಬ್ಬರು ಹೊರತು ಉಳಿದವರೆಲ್ಲರೂ ಹೊರಟುಹೋಗಿದ್ದರು; ಇದ್ದವರೂ ಅವರ ಕೆಲಸದಲ್ಲಿ ಆಸಕ್ತರಾಗಿದ್ದರು. ನಭೆಗೆ ವಿಚಾರಾಧಿಕ್ಯದಿಂದ ಆಯಾಸವುಹೆಚ್ಚಾಗಿದ್ದಿತು. ಜಾಗ್ರತೆಯಾಗಿ ಸಹೋದರರಿಗೆ ಊಟಮಾಡಿಸಿ ಅವರನ್ನು ಸಂತೈಸಿ ಮಲಗಿಕೊಳ್ಳುವಂತೆ ಹೇಳಿದಳು. ಬಾಗಿಲುಗಳನ್ನು ಹಾಕಿ ದೇವರಮುಂದೆ ಕುಳಿತು ಪ್ರಾರ್ಥಿಸಲಾರಂಭಿಸಿದಳು:—

"ಸ್ವಾಮಿ! ದಯಾಮಯ! ಅನಾಥನಾಥ!! ನಾನು ಅನಾಥಳಾಗಿ ಅನ್ಯಮಾರ್ಗವನ್ನು ತಿಳಿಯದವಳಾಗಿರುವೆನು. ಮಾನಾಪಮಾನಗಳನ್ನು ಸಮಾನವಾಗಿ ನೋಡುವ ಶಕ್ತಿಯನ್ನು ನೀನು ಕೊಟ್ಟಿದ್ದರೂ, ಸತೀತ್ವರಕ್ಷಣೆಗೆ ಬೇಕಾದ ಸಹಾಯಗಳನ್ನೊದಗಿಸಿದ್ದರೂ, ಇಂತಹ ಕಠೋರಸಮಯದಲ್ಲಿ ಏನುಮಾಡಬೇಕೆಂಬ ಬುದ್ಧಿಯನ್ನು ಕೊಡಲಿಲ್ಲವು. ಆತ್ಮಹತ್ಯೆ ಪಾಪಪ್ರದವಾದುದೆಂದು ಹಿರಿಯರಾಡುವರು. ಅದಕ್ಕೆ ಪತ್ಯಾಜ್ಞೆಯೂ ಪ್ರತಿಬಂಧಕವಾಗಿರುವುದು. ಸ್ವಾಮಿ! ಜಗನ್ನಾಥ!! ಈಗೇನುಮಾಡಲಿ? ಇಹಪರಸಾಧನಕ್ಕೆ ಬೇಕಾದ ಸತೀತ್ವವು ಭಂಗಹೊಂದಿದಮೇಲೆ ನಾರಿಯು ಇದ್ದರೇನು? ಸತ್ತರೇನು? ದಯಾಮಯ? ಕಾಪಾಡು! ಕಾಪಾಡು!!"

ಗಡಿಯಾರವು ಎಂಟು ಘಂಟೆಯನ್ನು ಹೊಡೆಯಿತು. ನಳಿಯ ಹೃದಯದಲ್ಲಿಯೂ "ಢಣಢಣ" ವೆಂದು ಏನೋ ಹೊಡೆಯಲಾರಂಭವಾಯಿತು. ದಿಕ್ಕುತೋರದು. ಆದರೂ ಆಲೋಚಿಸಿದಳು:— "ಈಗ ಏನು ಮಾಡಲಿ? ಬ್ರಹ್ಮನು ಹೆಂಗಸಿಗೆ ರೂಪವೆಂಬ ವಸ್ತುವೊಂದನ್ನೇಕೆ ಇಟ್ಟನು? ರೂಪಿನಿಂದ ಮೋಹವು ಹುಟ್ಟುವುದು. ಮೋಹದಿಂದ ಕಾಮಕ್ರೋಧಾದಿಗಳು ಹೆಚ್ಚಿ ಪ್ರಪಂಚದಲ್ಲಿ ಅನರ್ಥಗಳನ್ನು ಮಾಡುತಿರುವುವಲ್ಲವೆ? ಈಗ ಆ ನೀಚನು ಬಾರದಿರನು. ಬಂದರೇನುಮಾಡಲಿ? ಬಾಗಿಲುಗಳನ್ನೇನೋ ಹಾಕಿರುವೆನು; ಆದರೂ ಅವನು ಬಲವಂತದಿಂದ ಒಳಗೆ ಪ್ರವೇಶಿಸಿ ಮಾನಹಾನಿಮಾಡಲೆಳಸಿದರೆ ಗತಿಯೇನು? ಮತ್ತಾರಿಗಾದರೂ ತಿಳಿಸಿ ಆಪದದಿಂದ ಪಾರಾಗುವೆನೆಂದರೆ ಅವನು ಅಪಾಯಕ್ಕೊಳಗಾಗುವನು. ಅಂತದರಿಂದ ಇಲ್ಲಿ ಚಿಕ್ಕಮ್ಮನಿಗೂ ಅಲ್ಲಿ ಅವನ ತಾಯಿಗೂ ದುಃಖವಾಗುವುದು. ಹಾಗೆ ಮಾಡಲು ಇಷ್ಟವಿಲ್ಲ. ನಾನು ಗೃಹ, ಸ್ವಜನ, ಸುಖಸಾಧನಗಳನ್ನು ತೊರೆದು ಕಷ್ಟಪಟ್ಟರೂ ನನ್ನಿಂದ ಇತರರಿಗೆ ದುಃಖವುಂಟಾಗುವಂತೆ ಮಾಡಲೊಲ್ಲೆನು, ಎಂದು ಮತ್ತೆ ಚಿಂತಿಸಿ "ಹೆಂಗಸರಿಗೆ ರೂಪವೆಂಬದೊಂದು ಇರದಿದ್ದರೆ ಬ್ರಹ್ಮನನ್ನು ನಿಷ್ಪಕ್ಷಪಾತಿಯೆಂದೆನ್ನಬಹುದಾಗಿತ್ತು. ಹಾ! ದೇವ! ಆ ನೀಚನು ಈಗ ಬಂದು ಬಲವಂತದಿಂದ ಗೃಹವನ್ನು ಪ್ರವೇಶಿಸಿದರೆ, ನಾನೇನು ಮಾಡಲಿ? ನನಗೆ ಪಲಾಯನವಲ್ಲದೆ ಬೇರೆಗತಿಯಿಲ್ಲ. ಅವನು ಇಲ್ಲಿಗೆ ಹಣಕಾಸುಗಳಿಗಾಗಿ ಬರುವುದಿಲ್ಲ. ನಾನು ಇಲ್ಲದಿದ್ದರೆ, ಅವನು ಉಳಿದುದನ್ನು ಮುಟ್ಟದೆಯೇ ಹೋಗುವನು. ನಾನು ಪಲಾಯನಮಾಡಿದರೂ ಇಲ್ಲಿರುವರಿಗೆ ತಿಳಿಯಬೇಕು. ಆದುದರಿಂದ ಒಂದು ಕಾಗದವನ್ನು ರಾಜಶೇಖರನ ಹೆಸರಿಗೇ ಬರೆದಿಟ್ಟುಹೋಗುವೆನು." ಹೀಗೆ ಯೋಚಿಸಿ, ಆಲೋಚನಾಂತ್ಯದಲ್ಲಿ ಪತ್ರವನ್ನು ಬರೆದಳು.

**" ರಾಜಶೇಖರ!**

ನನ್ನ ಮಾತಿಗೆ ನೀನು ಮರುಳಾಗುವೆಯೆಂಬ ನಂಬುಗೆಯಿಂದಲೇ ನಾನು ಸುಳ್ಳುಹೇಳಿ ನಿನ್ನನ್ನು ಮೋಸಗೊಳಿಸಿದೆನು. ನೀನು ಕಾಮುಕ; ಮತ್ತು ಕಳ್ಳ. ಆದುದರಿಂದ ನಿನ್ನಲ್ಲಿನಾನು ಅಪರಾಧಮಾಡಿದಂತಾಗಲಿಲ್ಲ.

ನಿನ್ನಲ್ಲಿ ಸುಳ್ಳಾಡಿದರೆ ಪಾಪಸಂಘಟನೆಯಾಗುವುದಿಲ್ಲ. ಹುಚ್ಚ! ನೀನು ಮನಸ್ಸಿನಲ್ಲಿಯೇ ನಾನಾವಿಧವಾದ ದುರಾಲೋಚನೆಗಳನ್ನು ಮಾಡುತಿರಬಹುದು. ಇಂತಹದಲ್ಲ; ಇದಕ್ಕಿಂತ ಬಲವತ್ತರವಾದ, ಕಠೋರವಾದ, ಬಿಕ್ಕಟ್ಟಾದ ಸಂದರ್ಭವು ಒದಗಿದರೂ ನಾನು ಸತೀತ್ವವನ್ನು ಮಾತ್ರ ಕಳೆದುಕೊಳ್ಳುವಳಲ್ಲವೆಂಬುದನ್ನು ಚೆನ್ನಾಗಿ ತಿಳಿ. ನಾನು ಇಂದು ನಿನಗಾಗಿ ಪಲಾಯನಮಾಡಿರುತ್ತೇನೆ. ನಾನೆಲ್ಲಿ, ಹೇಗೆ, ಇರುತ್ತೇನೆಂಬ ಸಂಗತಿಯು ಕೂಡ ನಿನಗೆ ತಿಳಿಯದು. ಆದರೆ. ರಾಜಶೇಖರ ! ನಿನ್ನ ವಿಷಯವಾಗಿ ನಾನು ಅತ್ಯಂತ ಚಿಂತಿಸುತ್ತೇನೆ. ಕುಲಕ್ಕೆಲ್ಲಾ ಏಕಮಾತ್ರ ಅಲಂಬಪ್ರಾಯನಾಗಿರುವ ನೀನು ದುರಾಲೋಚನೆಯಿಂದ ಪಾತಾಳಕ್ಕೆ ಹೋಗಬೇಕೆಂದಿರುವೆ! ಇನ್ನು ಮುಂದಾದರೂ ಇಂತಹ ದುರಾಲೋಚನೆಗಳನ್ನು ದೂರಮಾಡಿ, ಯೋಗ್ಯಳಾದ ಕನ್ಯೆಯನ್ನು ವಿವಾಹಮಾಡಿಕೊಂಡು ಸುಖವಾಗಿ ಬಾಳು! ಆಗಮಾತ್ರ ನೀನು ಸುಖಿಯಾಗುವೆ. ದೇವರ ಕೃಪೆಯಿಂದ ಹಾಗಾದರೆ, ಆಗ ನಾನೊಮ್ಮೆ ನಿನ್ನನ್ನು ನೋಡಬೇಕೆಂಬ ಅಪೇಕ್ಷೆಯು ಮಾತ್ರ ಬಲವತ್ತರವಾಗಿದೆ. ನಿನ್ನ ವಿಷಯದಲ್ಲಿ, ನನಗೊಂದೆಡೆ ಮಹತ್ತರ ರೋಷವೂ ಮತ್ತೊಂದೆಡೆ ಮಹಾಸಂಕಟವೂ ಉಂಟಾಗಿದೆ. ನಿನಗೆ ಕೇಡನ್ನು ಮಾಡಲು ನಾನೆಂದೂ ಅಪೇಕ್ಷಿಸೆನು. ಹಾಗೆ ನಾನು ಯೋಚಿಸಿದ್ದರೆ ಕ್ಷಣದಲ್ಲೇ ನಿನ್ನನ್ನು ತೋಟದಿಂದ ಹಾಗೆಯೇ ಹಿಡಿದು ಪೋಲೀಸರ ವಶಪಡಿಸುತ್ತಿದ್ದೆನು. ನನಗದು ಇಷ್ಟವಲ್ಲ. ಅಣ್ಣಾ! ನೀನಿನ್ನು ಪಾಪಿಯಾಗಬೇಡ. ನಾನಿಷ್ಟು ಸ್ವಾತಂತ್ರ್ಯವನ್ನು ವಹಿಸಿದುದಕ್ಕೆ ಮತ್ತೆ ಮತ್ತೆ ಕ್ಷಮೆಬೇಡುವೆನು. ರಾಜಶೇಖರ! ಬುದ್ಧಿ ಕಲಿತುಬಾಳು! ನಿನ್ನ ನಾಶಕ್ಕೆ ನೀನೇ ಕಾರಣನಾಗಬೇಡ!

ಇಂತು ನಿನ್ನ ಹಿತಾಕಾಂಕ್ಷಿಣಿ

**ನಭಾ "**

ಪತ್ರವನ್ನು ಮೇಜಿನಮೇಲೆ ಹಾಗೆಯೇ ಇಟ್ಟು ಕುಳಿತಳು. ಬೀದಿಯಬಾಗಿಲು ಜಡವಸ್ತುವಾದರೂ ನೀಚನ ಆಗಮನವನ್ನು ಸೂಚಿಸಿತು. ನಭೆಗೆ ಹೆದರಿಕೆಯಾಗಲಿಲ್ಲ; ಹೃದಯದಲ್ಲಿ ಚಂಚಲವಿಲ್ಲ. ಕ್ಷಣಾರ್ಧದಲ್ಲಿ

ಬಾಗಿಲು ತೆರೆದು ಪ್ರವೇಶಕ್ಕೆ ಅವಕಾಶವಾಗುವದೆಂಬ ಸೂಚನೆಯು ತಿಳಿದುಬಂದಿತು. ಹಿತ್ತಿಲಬಾಗಿಲನ್ನು ತೆಗೆದುಕೊಂಡು ಪಲಾಯನಮಾಡಿಯೇ ಬಿಟ್ಟಳು.

ರಾಜಶೇಖರನು ಮನೆಯೊಳಕ್ಕೆಬರಲು ಸಾಹಸಪಟ್ಟನು. ಕಾವಲುಗಾರರು ತಡೆದರು. ಅವನು ಅವರೊಡನೆ ವಾಕ್ಕಲಹಕ್ಕೆ ತೊಡಗಿದನು. ಅಷ್ಟರಲ್ಲಿಯೇ ಬೀದಿಯ ಬಾಗಿಲಿನಲ್ಲಿ ನಡೆಯುತ್ತಿದ್ದ ಕೋಲಾಹಲವು ನಿದ್ರಿಸುತ್ತಿದ್ದ ರಮಾನಂದ ಭಗವಾನಂದರಿಗೂ ತಿಳಿದುಬಂದಿತು. ಎದ್ದು ನೋಡಿದರು; ದೀಪವು ಉರಿಯುತಿದೆ; ಮೇಜಿನಮೇಲೆ ಪತ್ರವಿದೆ; ನಳಿನಿಯು ಮಾತ್ರ ಇಲ್ಲ. ಗಾಬರಿಗೊಂಡೆದ್ದು ನೋಡಿದರು. ಪತ್ರವನ್ನೋದಿದರು. ರಾಜಶೇಖರನು ಅಷ್ಟರಲ್ಲಿ ಒಳಗೆಬಂದು ಮನೆಯಲ್ಲೆಲ್ಲಾ ಅರಸಿದನು. ಭಗವಾನಂದನು ಪೋಲಿಸರನ್ನು ಕರೆತಂದು ರಾಜಶೇಖರನನ್ನು ಅವರ ವಶಪಡಿಸಿದನು. ತಂದೆಗೆ ವರ್ತಮಾನವನ್ನು ತಂತಿಯಮೂಲಕ ತಿಳಿಸಿದನು. ರಾಜಶೇಖರನು ಶೋಕರೋಷಾದಿಗಳಿಂದ ನೊಂದುಬೆಂದನು. ಮತ್ತೇನು ಮಾಡಬಲ್ಲನು? “ ಈಗಿನ್ನೇನುಮಾಡಬೇಕು ? ” ನಳಿನಿಯೆಲ್ಲಿಹೋದಳು? ಎಂಬಿವೇ ಅವನಾಅಷ್ಟಾಕ್ಷರ ಸಪ್ತಾಕ್ಷರ ಮಂತ್ರಗಳಾಗಿದ್ದವು.

ಸಹೃದಯರೆ! ನಳಿನಿಯೆಲ್ಲಿ ಹೋದಳು? ರಾಜಶೇಖರನಿಗೇನಾಯಿತು? ಎಂಬಿವನ್ನು ತಿಳಿಯಲು ಕುತೂಹಲಿಗಳಾಗಿರುವಿರೇನು? ಕ್ಷಮಿಸಿರಿ! ಅವು ದು ಎಲ್ಲಿದ್ದರೂ ಹೇಗಿರಬೇಕೋ ಹಾಗೆಯೇ ಇರುವುದಲ್ಲವೆ? ಒಳ್ಳೆಯದು ಒಳ್ಳೆಯದೇ; ಕೆಟ್ಟದ್ದು ಕೆಟ್ಟದ್ದೇ. ಈಗ ನಾವೇನುಮಾಡುವ? ನಳಿನ್ಯನ್ವೇಷಣೆಗಾಗಿ ಹೋಗಿರುವವರು ಇನ್ನೂ ಬಂದಿಲ್ಲ; ‘ವಿರಾಗಿಣಿ’ನಾಮಾಂಕಿತ ಗ್ರಂಥದಲ್ಲಿ ಅವಳ ವಿಚಾರವನ್ನು ನಾವು ತಿಳಿಸಬೇಕು. ಅವರೆಗೂ ವಾಚಕರು ವಿರಾಮವಹಿಯಬೇಕು. ಪ್ರಿಯಸಹೋದರಿಯರೆ! ತಾವಾರಾದರೂ ನಳಿನಿಯ ವಿಷಯದಲ್ಲಿ ಅನೇಕ ವಿಕಲ್ಪಾರ್ಥಗಳನ್ನು ಕಲ್ಪಿಸುವುದಾದರೆ, ಅದು ನಮ್ಮ ಅಥವಾ ನಮ್ಮ ಲೇಖನಿಯ ದೋಷವಾಗಲಾರದು. ನಳಿನಿಯು ನಮ್ಮ ಅಭಾಗಿನೀಸೋದರಿಯರ ಆದರ್ಶಳಾದರೆ, ಭಾರತಮಾತೆಗೆ ಈಗಿನ ಕಷ್ಟವಿರದು. ಇನ್ನು ನಮ್ಮ ಭ್ರಾತೃ ಬಂಧುಗಳು ಮಾತ್ರ ಬಗೆಬಗೆಯಾಗಿ ಟೀಕಿಸುವವರಾಗಿರಬಹುದು. ಅದು ಅವರ ಸ್ವಭಾವ! ಸದ್ಯಕ್ಕೆ

ನಭೆಯು ಆ ನಿರ್ಭಾಗ್ಯನಭೆಯು, ಜೀವಿತದಲ್ಲಿ ಪೂರ್ವಾರ್ಧವಿಷ್ಟಕ್ಕೆ ಮುಗಿಯಿತು. ಇನ್ನು ಉತ್ತರಾರ್ಧದಲ್ಲಿ ಉತ್ತಮಫಲಾನುಭವವನ್ನೊಳಕೊಂಡಿರುವ ಅವಳ ಪವಿತ್ರ ಜೀವಿತವನ್ನು ಶ್ರವಣಮಾಡಿಸಲು ನಮ್ಮ ಈ ಲೇಖನಿಗೆ ಅನುಮತಿಯನ್ನು ಕೊಡಿರಿ.

( ಅಸ್ತು. )